ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಬಾಬ್ ಡೈಲಾನ್‌ಗೆ ನೊಬೆಲ್

ಚಳುವಳಿಗಾರ
ಬರಹಗಾರ
ಹಾಡುಗಾರ

ಸಂಪುಟ 10 | ಸಂಚಿಕೆ 43 ಪುಟ 16 | ಅಕ್ಟೋಬರ್ 23,2016 | ರೂ. 10/-

web: www.janashakthi.co.in | e-mail : js_weekly@yahoo.com



ಕಣ್ಣೂರು ಮತ್ತೆ RSS ಹತ್ಯಾ ರಾಜಕೀಯ



ಹಿಂದುತ್ವ ರಾಜಕೀಯಕ್ಕೆ ಸಶಸ್ತ್ರ ಪಡೆಗಳ ದುರ್ಬಳಕೆ



ಬರಗೂರು ಸಾಹಿತ್ಯ ಸಮ್ಮೇಳನ ಅಧ್ಯಕ್ಷರು



ಉಡುಪಿ ಸರ್ಕಾರಿ ಆಸ್ಪತ್ರೆ ಖಾಸಗೀಕರಣ ಬೇಡ

ಕೊಡಗು: ಟಿಪ್ಪು ನೆಪದಲ್ಲಿ ಕೊಳ್ಳಿ

ಅತ್ತೆ-ಮಾವ ನೋಡಿಕೊಳ್ಳದಿದ್ದರೆ ವಿಚ್ಛೇದನ!?

ಕೇರಳದಲ್ಲಿ ಆರೆಸ್ಸೆಸ್‌ನ ಹಿಂಸಾಚಾರದ ರಾಜಕೀಯ ಬೇಗನೇ ಬಯಲಾಗುತ್ತದೆ

–ಸಿಪಿಐ(ಎಂ) ಪೊಲಿಟ್‌ಬ್ಯುರೊ



ಕೇರಳದಲ್ಲಿ ಆರೆಸ್ಸೆಸ್‌ನ ಕೊಲೆಯಾಟ ಇನ್ನೊಂದು ಬಲಿಯನ್ನು ಪಡೆದಿದೆ. ಅಕ್ಟೋಬರ್ 10ರಂದು ಕಣ್ಣೂರು ಜಿಲ್ಲೆಯ ಪಡುವಿಳ್ಳೈ ಸ್ಥಳೀಯ ಸಮಿತಿಯ ಸದಸ್ಯ ಕೆ.ಮೋಹನನ್ ಅವರನ್ನು ಶಸ್ತ್ರಸಜ್ಜಿತ ಆರೆಸ್ಸೆಸ್ ಗೂಂಡಾಗಳ ಪಡೆ ಕೊಚ್ಚಿ ಹಾಕಿ ಸಾಯಿಸಿದೆ. ಅವರು ಕೆಲಸ ಮಾಡುತ್ತಿದ್ದ ಸೇಂದಿ ಅಂಗಡಿಗೆ ನುಗ್ಗಿ ಈ ಕುಕೃತ್ಯ ಎಸಗಲಾಗಿದೆ. ಇದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಮೋಹನನ್ ಶರೀರದಲ್ಲಿ 30–40 ಗಾಯಗಳಿದ್ದವು. ಇದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಪ್ರತಿನಿಧಿಸುವ ಧರ್ಮದಂ ಕ್ಷೇತ್ರದಲ್ಲಿ ನಡೆದಿರುವ ಸಿಪಿಐ(ಎಂ) ಕಾರ್ಯಕರ್ತರ ಎರಡನೇ ಕೊಲೆ. ಇದಕ್ಕೆ ಮೊದಲು ಚುನಾವಣಾ ಫಲಿತಾಂಶಗಳು ಪ್ರಕಟವಾದಾಗ ಸಿಪಿಐ(ಎಂ)ನ ವಿಜಯ ಮೆರವಣಿಗೆಯ ಮೇಲೆ ಆರೆಸ್ಸೆಸ್ ಗೂಂಡಾಗಳು ನಡೆಸಿದ ದಾಳಿಯಲ್ಲಿ ರವೀಂದ್ರನಾಥ್ ಎಂಬ ಸಿಪಿಐ(ಎಂ) ಕಾರ್ಯಕರ್ತ ಬಲಿಯಾಗಿದ್ದರು.

ಇತ್ತ ದಿಲ್ಲಿಯಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿ ಕಚೇರಿಗೆ ಕೆಲವು ಬಿಜೆಪಿ ಮಂದಿ ಕೇರಳದಲ್ಲಿ ಆರೆಸ್ಸೆಸ್ ಕಾರ್ಯಕರ್ತರ ಮೇಲೆ ದಾಳಿ ನಡೆಯುತ್ತಿದೆ ಎಂದು ಬೊಬ್ಬೆ ಹಾಕುತ್ತ ಮೆರವಣಿಗೆ ಬಂದಿದ್ದರು ಎಂಬುದನ್ನು ನೆನಪಿಸಿಕೊಳ್ಳುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ನಿಜಸಂಗತಿಯೆಂದರೆ ಆರೆಸ್ಸೆಸ್‌ನ ಮತ್ತು ಅದರ ಅಂಗ ಸಂಘಟನೆಗಳ ಮಾರಣಾಂತಿಕ ದಾಳಿಗಳಿಗೆ ಬಲಿಯಾಗುತ್ತಿರುವವರು ಸಿಪಿಐ(ಎಂ) ಮತ್ತು ಎಲ್‌ಡಿಎಫ್‌ನ ಇತರ ಅಂಗಗಳ ಕಾರ್ಯಕರ್ತರು ಎಂದು ಹೇಳಿದೆ. ಇದು ಹೊಸದೇನಲ್ಲ. ಎಲ್‌ಡಿಎಫ್ ಅಧಿಕಾರಕ್ಕೆ ಬಂದಾಗಲೆಲ್ಲ ಅವರು ಇದನ್ನೇ ಮಾಡಿದ್ದಾರೆ

ಎಲ್‌ಡಿಎಫ್ ಸರಕಾರದ ಈ ಬಾರಿಯ ಅಲ್ಪಾವಧಿಯಲ್ಲೇ ಆರು ಸಿಪಿಐ(ಎಂ) ಕಾರ್ಯಕರ್ತರು ಕೊಲ್ಲಲ್ಪಟ್ಟಿದ್ದಾರೆ, ಸುಮಾರು 300 ಸದಸ್ಯರು ಗಾಯಗೊಂಡಿದ್ದಾರೆ. ಪಕ್ಷದ 35 ಕಚೇರಿಗಳ ಮೇಲೆ ದಾಳಿ ನಡೆದಿದೆ. ಪಕ್ಷದ ಕಾರ್ಯಕರ್ತರ 80 ಮನೆಗಳ ಮೇಲೂ ದಾಳಿ ನಡೆದಿದೆ. ಇಂತಹ ಯೋಜಿತವಾದ ಸತತ ದಾಳಿಗಳ ಪ್ರಮಾಣವೇ ಬಿಜೆಪಿಯ ವಂಚನೆಯನ್ನು ಬಯಲಿಗೆಳೆಯುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಒಂದು ಸುಳ್ಳನ್ನು ನೂರಾರು ಬಾರಿ ಹೇಳಿ ಅದೇ ಸತ್ಯ ಎನ್ನುವ ಹಿಟ್ಲರನ ಬಂಟ ಗೋಬೆಲ್ಸ್‌ನ ತಂತ್ರಗಳನ್ನು ಬಿಜೆಪಿ/ ಆರೆಸ್ಸೆಸ್ ಸದಾ ಬಳಸಿಕೊಂಡು ಬಂದಿದೆ. ತಾನೇ ಕೇರಳದಲ್ಲೆಲ್ಲ ದಾಳಿಗಳನ್ನು ನಡೆಸುತ್ತಿದ್ದರೂ ತಾನೇ ಹಿಂಸಾಚಾರದ ಬಲಿಪಶು ಎಂದು ಬಿಂಬಿಸಲು ಅದು ಪ್ರಯತ್ನಿಸುತ್ತ ಬಂದಿದೆ. ಈ ಮೋಸವನ್ನು ಬಯಲಿಗೆಳೆಯಲಾಗುವುದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಆರೆಸ್ಸೆಸ್/ಬಿಜೆಪಿಯ ಕೋಮುವಾದಿ ರಾಜಕೀಯವನ್ನು ಮತ್ತು ಭಯೋತ್ಪಾದನೆ ಮತ್ತು ಹಿಂಸಾಚಾರದ ತಂತ್ರಗಳನ್ನು ಕೇರಳದ ಜನತೆ ತಿರಸ್ಕರಿಸಿದ್ದಾರೆ ಎಂಬುದನ್ನು ವಿಧಾನಸಭಾ ಚುನಾವಣಾ ಫಲಿತಾಂಶಗಳು ಸ್ಪಷ್ಟವಾಗಿ ತೋರಿಸಿಕೊಟ್ಟಿವೆ. ಕೇಂದ್ರದಲ್ಲಿ ಅಧಿಕಾರ ವಹಿಸಿಕೊಂಡ ಹಿನ್ನೆಲೆಯಲ್ಲಿ ಕೇರಳದಲ್ಲೂ ಭಾರೀ ಪ್ರಯೋಜನ ಸಿಗುತ್ತದೆ ಎಂಬ ಅವರ ನಿರೀಕ್ಷೆಗಳು ಈಡೇರಿಲ್ಲ. ಅಲ್ಲದೆ ಸಮಾಜವನ್ನು ಕೋಮುಗ್ರಸ್ತಗೊಳಿಸುವ ಅವರ ಪ್ರಯತ್ನಗಳಿಗೆ ಸಿಪಿಐ(ಎಂ) ಮತ್ತು ಎಲ್‌ಡಿಎಫ್‌ನಿಂದ ಕಡು ಪ್ರತಿರೋಧವನ್ನು ಅದು ಎದುರಿಸಬೇಕಾಗಿದೆ. ಆದ್ದ–ರಿಂದ ಅದು ಇಂತಹ ಹಿಂಸಾತ್ಮಕ ದಾಳಿಗಳಿಗೆ ಇಳಿದಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಕೇರಳದ ಜನತೆ ಮತ್ತು ಸಮಸ್ತ ದೇಶದ ಜನತೆ ಬಿಜೆಪಿಯ ಇಂತಹ ದುಷ್ಟ ರಾಜಕೀಯವನ್ನು ಸೋಲಿಸಲು ಕಂಕಣ ಬದ್ಧರಾಗಿದ್ದಾರೆ ಎಂದು ಹೇಳಿದೆ.

ಅರ್ಥಹೀನ, ದೋಷಪೂರ್ಣ ರೂಪನ್‌ವಾಲ್ ಆಯೋಗ ವರದಿಯನ್ನು ತಿರಸ್ಕರಿಸಿ: ಡಿಎಸ್‌ಎಂಎಂ,ಎಸ್‌ಎಫ್‌ಐ ಆಗ್ರಹ

ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ವಿದ್ಯಾರ್ಥಿ ರೋಹಿತ್ ವೆಮುಲ 'ಸಾಂಸ್ಥಿಕ ಕೊಲೆ'ಯ ಕಾರಣಗಳನ್ನು ತನಿಖೆ ಮಾಡಲು ನೇಮಿಸಿದ್ದ ಅಲಹಾಬಾದ್ ಹೈಕೋರ್ಟಿನ ಮಾಜಿ ನ್ಯಾಯಾಧೀಶ ಎ.ಕೆ.ರೂಪನ್‌ವಾಲ್‌ರ ಏಕಸದಸ್ಯ ಆಯೋಗದ ವರದಿ ಕಳೆದ ವಾರ ಬಂದಿದ್ದು ಅದು ವ್ಯಾಪಕ ಖಂಡನೆಗೆ ಗುರಿಯಾಗಿದೆ.

ಇದು ಪರಿಶಿಷ್ಟ ಜಾತಿಗಳ ಮೇಲೆ ಅತ್ಯಾಚಾರ ತಡೆ ಕಾನೂನಿನ ಅಡಿಯಲ್ಲಿ ಸಿಲುಕಿರುವವರನ್ನು ರಕ್ಷಿಸಲಿಕ್ಕಾಗಿಯೇ ತಪ್ಪು ಮಾಹಿತಿಗಳ ಮೇಲೆ ನಿಂತಿರುವ ವರದಿ ಎಂದು ದಲಿತ ಶೋಷಣ ಮುಕ್ತಿ ಮಂಚ್ ಖಂಡಿಸಿದೆ. ಈ ದೋಷಪೂರ್ಣ, ಅರ್ಥಹೀನ ವರದಿಯನ್ನು ತಿರಸ್ಕರಿಸಿ ಶೈಕ್ಷಣಿಕ ಸಂಸ್ಥೆಗಳಲ್ಲಿ ಸಾಮಾಜಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳನ್ನು ಬರ್ಬರ ದಾಳಿಗಳಿಂದ ರಕ್ಷಿಸಲು ದಲಿತ ಮತ್ತು ವಿದ್ಯಾರ್ಥಿ ಆಂದೋಲನಗಳು ಆಗ್ರಹಿಸುತ್ತಿರುವ ಮತ್ತು ಬುದ್ಧಿಜೀವಿಗಳು ಹಾಗು ನ್ಯಾಯಾಂಗ ಪರಿಣಿತರು ಬೆಂಬಲಿಸಿರುವ 'ರೋಹಿತ್ ವೆಮುಲ ಕಾಯ್ದೆ'ಯನ್ನು ಸಂಸತ್ತು ಅಂಗೀಕರಿಸಬೇಕು ಎಂದು ಅದು ಆಗ್ರಹಿಸಿದೆ.

ಕೈಗಳಿಗೆ ಅಂಟಿದ ರಕ್ತವನ್ನು ಒರೆಸುವ ಪ್ರಯತ್ನ

ಈ ಆಯೋಗ ಹೈದರಾಬಾದ್ ಕೇಂದ್ರೀಯ ವಿವಿಯ ಆಡಳಿತ ಮತ್ತು ಆರೆಸ್ಸೆಸ್/ಬಿಜೆಪಿಯ ಕೈಗಳಿಗೆ ಮೆತ್ತಿರುವ ರಕ್ತವನ್ನು ಒರೆಸಿ ಹಾಕಲು ಎಲ್ಲ ಕಾನೂನಿನ ಪರಿಮಿತಿಗಳನ್ನು ಉಲ್ಲಂಘಿಸಿದೆ, ತನ್ನ ತನಿಖಾ ವ್ಯಾಪ್ತಿಯನ್ನು ಮೀರಿ ಹೋಗಿದೆ ಎಂದು ಎಸ್‌ಎಫ್‌ಐ ಕೇಂದ್ರ ಕಾರ್ಯಕಾರಿ ಸಮಿತಿ ಬಲವಾಗಿ ಖಂಡಿಸಿದೆ.

ಹೈದರಾಬಾದ್ ವಿವಿ ಉಪಕುಲಪತಿ ವಿವಿ ಅಪ್ಪಾರಾವ್‌ಗೆ ಕ್ಲೀನ್ ಚಿಟ್ ಕೊಟ್ಟಿರುವ ಈ ಆಯೋಗ ರೋಹಿತ್ ವೆಮುಲ ದಲಿತನೇ ಅಲ್ಲ ಎಂಬ ಸಂಘ ಪರಿವಾರದ ರಾಗಕ್ಕೆ ತಾಳ ಹಾಕುವ ಪ್ರಯತ್ನದಲ್ಲಿ ತನ್ನ ತನಿಖೆಯ ಮಿತಿಯನ್ನು ಮೀರಿ ಹೋಗಿ ರೋಹಿತ್‌ತಾಯಿ ತನಗೆ ಮತ್ತು ತನ್ನ ಕುಟುಂಬಕ್ಕೆ 'ದಲಿತ ಐಡೆಂಡಿಟಿ'ಯ ಸೋಗು ಹಾಕಿದ್ದಾರೆ ಎಂದು ಹೇಳುವ ಮಟ್ಟಕ್ಕೆ ಹೋಗಿದೆ.

ಆದರೆ ಇಂತಹ ಕುತಂತ್ರಗಳು ಫಲಿಸುವುದಿಲ್ಲ. ಏಕೆಂದರೆ ಈಗಾಗಲೇ ರೋಹಿತ್ ವೆಮುಲಾ ಸಾಂಸ್ಥಿಕ ಕೊಲೆಯ ವಿರುದ್ಧ ಪ್ರತಿಭಟನೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ಪೂರ್ವಾಗ್ರಹಗಳು ಮತ್ತು ಬ್ರಾಹ್ಮಣ್ಯದ ವಿರುದ್ಧ ಒಂದು ವಿಶಾಲ ಚಳುವಳಿಯಾಗಿ ಬೆಳೆದಿದೆ ಎಂದಿರುವ ಎಸ್‌ಎಫ್‌ಐ ಈ ದೋಷಪೂರ್ಣ, ಅರ್ಥಶೂನ್ಯ ವರದಿಯನ್ನು ಇಡಿಯಾಗಿ ತಿರಸ್ಕರಿಸಬೇಕು ಎಂದು ಆಗ್ರಹಿಸಿದೆ. ಇಂತಹ ತಂತ್ರಗಳಿಂದ ತನ್ನ ಅಪರಾಧವನ್ನು ಮುಚ್ಚಿಕೊಳ್ಳಬಹುದು ಎಂದು ಆರೆಸ್ಸೆಸ್/ಬಿಜೆಪಿ ಭಾವಿಸಿದ್ದರೆ ಬಹುಶಃ ಅದಕ್ಕಿನ್ನೂ ದೇಶದ ಸಮಕಾಲೀನ ವಿದ್ಯಾರ್ಥಿ ಆಂದೋಲನದ ಪ್ರಜ್ಞೆಯ ಅರಿವಿಲ್ಲ ಎಂದು ಎಸ್‌ಎಫ್‌ಐ ಕೇಂದ್ರ 'ಕಾರ್ಯಕಾರಿ ಸಮಿತಿ ಟಿಪ್ಪಣಿ ಮಾಡಿದೆ.

ವಿಶ್ವಾಸದ ಕೊರತೆ ಮತ್ತು ಪರಕೀಯ ಭಾವ ಶಿಖರಕ್ಕೇರಿದೆ, ಅದು ಅಪಾಯಕಾರಿ ಪರಿಣಾಮಗಳಿಗೆ ಕಾರಣವಾಗಬಹುದು

– ಕಾಶ್ಮೀರದ ಮುಖ್ಯಮಂತ್ರಿಗಳಿಗೆ ಮಹಮ್ಮದ್ ತರಿಗಾಮಿ ಪತ್ರ



ಅಕ್ಟೋಬರ್ 8 ರಂದು ಜಮ್ಮು ಮತ್ತು ಕಾಶ್ಮೀರದ ರಾಜಧಾನಿ ಶ್ರೀನಗರದಲ್ಲಿ 12 ವರ್ಷದ ಬಾಲಕ ಜುನೈದ್ ಅಹ್ಮದ್ ಭದ್ರತಾ ಪಡೆಗಳ ಪೆಲಟ್ ಗನ್ ಪ್ರಯೋಗಕ್ಕೆ ಬಲಿಯಾದ. ಪಡೆಗಳು ಕಲ್ಲು ತೂರುತ್ತಿದ್ದ ಜನಜಂಗುಳೀಯನ್ನು ಹತೋಟಿಗೆ ತರಲು ಪೆಲಟ್ ಗನ್‌ಗಳನ್ನು ಹಾರಿಸಿದರು ಎಂದು ಅಧಿಕಾರಿಗಳು ಹೇಳಿದ್ದಾರೆ. ಆದರೆ ಜುನೇದ್ ಈ ಪ್ರತಿಭಟನೆಯಲ್ಲಿ ಭಾಗವಹಿಸಿರಲಿಲ್ಲ, ಆತ ತನ್ನ ಮನೆಯ ಮುಂದೆ ನಿಂತಿದ್ದಾಗ ಪೆಲಟ್ ಗನ್‌ಗಳ ಸುರಿಮಳೆ ಅವನನ್ನು ಬಲಿ ತೆಗೆದುಕೊಂಡಿದೆ ಎನ್ನಲಾಗಿದೆ. ಕಾಶ್ಮೀರ ಕಣಿವೆಯಲ್ಲಿ ಪ್ರತ್ಯೇಕತಾವಾದಿ ಮುಖಂಡ ಬುರ್ಹಾನ್ ವಾನಿಯ ಎನ್‌ಕೌಂಟರ್ ಸಾವಿನ ನಂತರ ಆರಂಭವಾದ ಪ್ರತಿಭಟನೆಗಳ 91ನೇ ದಿನ ನಡೆದ 91ನೇ ಬಲಿ ಇದು ಎಂದು ಕೆಲವು ಪತ್ರಿಕೆಗಳು ಹೇಳಿವೆ.

ಅದೇನೇ ಇರಲಿ, ಇದು ಕಾಶ್ಮೀರದಾದ್ಯಂತ ತಲ್ಲಣ ಉಂಟುಮಾಡಿದೆ. ಆಳುವ ಪಿಡಿಪಿ ಪಕ್ಷದ ವಕ್ತಾರರೂ ಕೂಡ ಇದು 'ಅಸಮರ್ಥನೀಯ' ಎಂದಿದ್ದಾರೆ. ಆದರೆ ಪೆಲಟ್‌ಗನ್‌ಗಳ ಬಳಕೆ ನಿಲ್ಲಿಸಲಾಗುವುದು ಎಂದ ಮೇಲೂ ಇವುಗಳ ಬಳಕೆ ಮುಂದುವರೆಯುತ್ತಿರುವುದೇಕೆ ಎಂಬ ಪ್ರಶ್ನೆಗೆ ಅವರ ಬಳಿ ಉತ್ತರವಿಲ್ಲ.

ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರು ಮತ್ತು ಶಾಸಕರೂ ಆದ ಮೊಹಮ್ಮದ್ ಯೂಸುಫ್ ತರಿಗಾಮಿಯವರು ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಮೆಹಬೂಬಾ ಮುಫ್ತಿಯವರಿಗೆ ಬರೆದ ಪತ್ರದಲ್ಲಿ ಆ ಪ್ರಶ್ನೆಯನ್ನು ಎತ್ತಿದ್ದಾರೆ–"ಅದು ಮಾರಣಾಂತಿಕವಲ್ಲ ಎಂದು ಹೇಳಿಕೊಂಡರೂ ಮಾರಣಾಂತಿಕ ಎಂದು ಸಾಬೀತಾಗಿರುವುದರಿಂದ ಅದರ ಬಳಕೆಯನ್ನು ತಡೆಯುವ ಅಧಿಕಾರ, ನನಗೆ ತಿಳಿದಂತೆ, ಯುನಿಫೈಡ್ ಕಮಾಂಡ್‌ನ ಮುಖ್ಯಸ್ಥರಾಗಿ ನಿಮಗೆ ಇದೆ" ಎಂದು ನೆನಪಿಸಿದ್ದಾರೆ.

ಪರಿಸ್ಥಿತಿಯನ್ನು ಕೇವಲ ಕಾನೂನು ವ್ಯವಸ್ಥೆಯ ಸಮಸ್ಯೆಯೆಂದು ಎದುರಿಸುವಾಗ ವಿಪರೀತ ಮತ್ತು ವಿವೇಚನಾಶೂನ್ಯ ಬಲಪ್ರಯೋಗ ಸರಕಾರದಲ್ಲಿ ಜನಸಮೂಹಗಳ ನಂಬಿಕೆಯನ್ನು ಮತ್ತಷ್ಟು ಕುಂಠಿತಗೊಳಿಸುತ್ತದೆ, ಕಂದರವನ್ನು ಮತ್ತಷ್ಟು ಅಗಲಗೊಳಿಸಿ ಅದನ್ನು ಮುಚ್ಚುವುದೇ ಕಷ್ಟವಾಗುತ್ತದೆ ಎಂದೂ ನೆನಪಿಸಿದ್ದಾರೆ.

ಅವರ ಪತ್ರದ ಪೂರ್ಣ ಪಾಠವನ್ನು ಇಲ್ಲಿ ಕೊಡಲಾಗಿದೆ.

ಮಾನ್ಯ ಮೆಹಬೂಬಾ ಜೀ,

ಮತ್ತೊಬ ಜುನೈದನ ದುರಂತಮಯ ಮತ್ತು ಆಘಾತಕಾರೀ ಸಾವಿನೊಂದಿಗೆ ಎಲ್ಲ ಕಾಶ್ಮೀರಿ ತಂದೆ–ತಾಯಂದಿರು ಅರಳಬಹುದಾಗಿದ್ದ, ರಾಜ್ಯದ ಒಂದು ಆಸ್ತಿಯಾಗಬಹುದಿದ್ದ ಮತ್ತೊಬ್ಬ ಯುವ ಪುತ್ರನನ್ನು ಕಳಕೊಂಡಿದ್ದಾರೆ. ಪೆಲೆಟ್ ಹಾರಿಸಿ ಮಾಡಿರುವ ಈ ಭೀಕರ ಕೊಲೆ ನಿಮಗೂ ಯಾತನೆ ಉಂಟುಮಾಡಿರಬಹುದು ಎಂದು ನಾನು ನಂಬುತ್ತೇನೆ. ಆದರೂ ಇನ್ನೂ ಪೆಲಟ್ ಗನ್‌ಗಳನ್ನು, ಸಮಸ್ತ ಪ್ರತಿಪಕ್ಷಗಳು ಅದನ್ನು ಬಲವಾಗಿ ಖಂಡಿಸಿದರೂ ಮತ್ತು ಈ ವಿಷಯವನ್ನು ಸಂಸತ್ತಿನಲ್ಲಿ ಉತ್ಕಟತೆಯಿಂದ ಚರ್ಚಿಸಿದ್ದರೂ ಏಕೆ ಬಳಸಲಾಗುತ್ತಿದೆ ಎಂದು ಅರ್ಥವಾಗುತ್ತಿಲ್ಲ. ಇದನ್ನು ಜನಜಂಗುಳಿಯನ್ನು ಹತೋಟಿಯಲ್ಲಿಡುವ ಶಸ್ತ್ರಗಳ ಪಟ್ಟಿಯಿಂದ ಹಿಂತೆಗೆದುಕೊಳ್ಳಲಾಗುವುದು ಎಂಬ ಭರವಸೆಯನ್ನೂ ಕೊಡಲಾಗಿತ್ತು. ಅದು ಮಾರಣಾಂತಿಕವಲ್ಲ ಎಂದು ಹೇಳಿಕೊಂಡರೂ ಮಾರಣಾಂತಿಕ ಎಂದು ಸಾಬೀತಾಗಿರುವುದರಿಂದ ಅದರ ಬಳಕೆಯನ್ನು ತಡೆಯುವ ಅಧಿಕಾರ, ನನಗೆ ತಿಳಿದಂತೆ, ಯುನಿಫೈಡ್ ಕಮಾಂಡ್‌ನ ಮುಖ್ಯಸ್ಥರಾಗಿ ನಿಮಗೆ ಇದೆ.

ಜುನೈದ್ ಈಗಿಲ್ಲ, ಹೊರಟು ಹೋಗಿರುವ ನಮ್ಮ ಹತ್ತಾರು ಯುವಜನರಂತೆ ಇವನೂ ಆತನ ಗೋಳಿಡುತ್ತಿರುವ ತಾಯಿಯ ಬಳಿ ಮರಳಿ ಬರುವುದಿಲ್ಲ. ಆತನನ್ನು ಕೊಂದವರಿಗೆ ಸೂಕ್ತ ಶಿಕ್ಷೆ ವಿಧಿಸಿದರೆ ಆಕೆಯ ದುಃಖ ಕಡಿಮೆಯಾಗಬಹುದೇನೋ ಮತ್ತು ಅದು ಒಂದು ಉದಾಹರಣೆಯಾಗಿ ಇತರರ ಬೆಲೆಬಾಳುವ ಜೀವಗಳನ್ನು ಉಳಿಸಬಹುದು.

ಈ ಪ್ರಕರಣದ, ಮತ್ತು ನಿಜವಾಗಿ ಹೇಳಬೇಕೆಂದರೆ ಇಂತಹ ಎಲ್ಲ ಪ್ರಕರಣಗಳ ಆಮೂಲಾಗ್ರ ತನಿಖೆ ಮಾಡಿ, ಹೊಣೆ ನಿರ್ಧರಿಸುವುದು ಮತ್ತು ಶಿಕ್ಷೆ ವಿಧಿಸುವುದು ನ್ಯಾಯದ ಮತ್ತು ಮೂಲಭೂತ ಮಾನವ ಹಕ್ಕುಗಳ ರಕ್ಷಣೆಯ ದೃಷ್ಟಿಯಿಂದ ಅಗತ್ಯ. ಈ ವಿಷಯದಲ್ಲಿ ವಿಳಂಬ ಮತ್ತು ಉಪೇಕ್ಷೆ ಅನಾಹುತಕಾರಿಯಾಗಬಹುದು.

ಜೀವನಪರ್ಯಂತ ರಾಜಕೀಯ ಕಾರ್ಯಕರ್ತನಾಗಿರುವ ಮತ್ತು ಸಾರ್ವಜನಿಕ ಪ್ರತಿನಿಧಿಯಾಗಿರುವ ನಾನು ರಾಜ್ಯದಲ್ಲಿ ನಡೆಯುತ್ತಿರುವ ನೋವು ಭರಿತ ಕ್ಷೋಭೆಯಿಂದ ಅತ್ಯಂತ ಆತಂಕಿತನಾಗಿದ್ದೇನೆ. ಇದರಲ್ಲಿ ತೊಂಭತ್ತಕ್ಕೂ ಹೆಚ್ಚು ಮಂದಿ ಸತ್ತಿದ್ದಾರೆ, ಸಾವಿರಾರು ಮಂದಿ ಗಾಯಗೊಂಡಿದ್ದಾರೆ ಎಂದು ಬೇರೆ

ಪುಟ 8 ನೋಡಿ

ಮಾತೆಂದರೆ ಇದು

ನಾನು ಒಬ್ಬ ಪೂರ್ಣ ಕಮ್ಯುನಿಸ್ಟ್
ಆಗುವ ಮೊದಲೇ ಕ್ಯೂಬಾದ ರಾಜಕೀಯ
ಬಿಕ್ಕಟ್ಟಿನ ಸುಳಿಯಲ್ಲಿ ಸಿಕ್ಕಿಬಿದ್ದಿದ್ದೆ. ಇಂತಹ
ಪರಿಸ್ಥಿತಿಯಲ್ಲಿ ಒಂದು ರಾಜಕೀಯ
ಸಿದ್ಧಾಂತ ನನಗೆ ದೊರಕಿದ್ದು
ನನ್ನ ಪುಣ್ಯ ಎಂದೇ ಹೇಳಬೇಕು.
ಮಾರ್ಕ್ಸ್‌ವಾದ ನನಗೆ ದೊರೆತಿದ್ದು
ಕಾಡಿನಲ್ಲಿ ಕಳೆದು ಹೋದವನಿಗೆ
ಒಂದು ಮ್ಯಾಪ್ ದೊರಕಿದಂತೆ ಆಗಿತ್ತು.

– ಫಿಡೆಲ್ ಕ್ಯಾಸ್ಟ್ರೋ

ಇನ್ನೊಂದು ಮಸೂದೆ ವಾಪಸ್

ಸಂಪಾದಕೀಯ

ರಾಜ್ಯಪಾಲರು ಕರ್ನಾಟಕ ವಿಧಾನಸಭೆ ಮಂಜೂರು ಮಾಡಿದ ಇನ್ನೊಂದು ಮಸೂದೆಯನ್ನು ಸರಕಾರಕ್ಕೆ ಪುನರ್ಪರಿಶೀಲನೆಗೆಂದು ವಾಪಸು ಕಳಿಸಿದ್ದಾರೆ. 'ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ತಿದ್ದುಪಡಿ) ಮಸೂದೆ–2016'ಕ್ಕೆ ಇದೇ ಜುಲೈನಲ್ಲಿ ವಿಧಾನಮಂಡಲ ಅಧಿವೇಶನದಲ್ಲಿ ಅನುಮೋದನೆ ದೊರಕಿದ್ದು, ರಾಜ್ಯಪಾಲರ ಅಂಕಿತಕ್ಕೆ ಕಳಿಸಲಾಗಿತ್ತು.

ನಗರದ ಒಟ್ಟು ಪ್ರದೇಶದಲ್ಲಿ ಶೇ.15 ರಷ್ಟನ್ನು ಉದ್ಯಾನ, ಆಟದ ಮೈದಾನ ಇಂತಹ ಸಾರ್ವಜನಿಕ ಮುಕ್ತ ವಲಯಕ್ಕಾಗಿ (ಓಪನ್ ಸ್ಪೇಸ್) ಮೀಸಲಿಟ್ಟಿದ್ದನ್ನು ತಿದ್ದುಪಡಿಯ ಅನ್ವಯ ಶೇ 10ಕ್ಕೆ ಕಡಿತಗೊಳಿಸಲಾಗಿದೆ. ಹಾಗೆಯೇ ನಾಗರಿಕ ಸೌಲಭ್ಯಕ್ಕಾಗಿ (ಸಮುದಾಯ ಭವನ, ಶಾಲೆ ಇತ್ಯಾದಿ) ಶೇ 10ರಷ್ಟು ಮೀಸಲಿಟ್ಟಿದ್ದನ್ನು ಶೇ 5ಕ್ಕೆ ಇಳಿಸಲಾಗಿದೆ. ಈ ತಿದ್ದುಪಡಿ ಮಸೂದೆ ಕರ್ನಾಟಕದ 250 ಪಟ್ಟಣ ಹಾಗೂ ನಗರಗಳ ಮೇಲೆ ಅನ್ವಯವಾಗಲಿತ್ತು.

ಬೆಂಗಳೂರು ನಗರ ಇದರ ವ್ಯಾಪ್ತಿಗೆ ಬರುವುದಿಲ್ಲವಾದರೂ, ಕರ್ನಾಟಕ ಮುನ್ಸಿಪಲ್ ಕಾಯಿದೆ (ಕೆಎಂಸಿ)– 1976, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಾಯಿದೆ– 1976 ಹಾಗೂ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಕಾಯಿದೆಗಳಿಗೆ ತಿದ್ದುಪಡಿ ತರುವ ಮೂಲಕ ಬೆಂಗಳೂರು ನಗರವನ್ನು ಕೂಡ ಕಾಯಿದೆ ಅಡಿಯಲ್ಲಿ ತರಲಾಗುತ್ತದೆ ಎಂದು ಹೇಳಲಾಗಿತ್ತು.

ಇದು ಒಂದು 'ಟೆಸ್ಟ್ ಡೋಸ್' ಎಂದು ಹೇಳಲಾಗಿದ್ದು, ಇದು ಪಾಸಾದರೆ ಬೆಂಗಳೂರಿಗೂ ಇದನ್ನು ವಿಸ್ತರಿಸುವುದು ಮುಖ್ಯ ಉದ್ದೇಶ ಎಂದು ಹೇಳಲಾಗಿದೆ. ಬೆಂಗಳೂರಿಗೆ ಇದನ್ನು ವಿಸ್ತರಿಸಲು ಬರಿಯ ಕಾನೂನು ತಿದ್ದುಪಡಿ ಮಾತ್ರ ಸಾಕಾಗುವುದಿಲ್ಲ. ಬೆಂಗಳೂರಿನ ಮಟ್ಟಿಗೆ ಸಾರ್ವಜನಿಕ ಮುಕ್ತ ವಲಯ(ಓಪನ್ ಸ್ಪೇಸ್) ಮತ್ತು ನಾಗರಿಕ ಸೌಲಭ್ಯಗಳ ಬಗೆಗಿನ ನಿಬಂಧನೆಗಳು, ಬೆಂಗಳೂರಿಗೆ ತಯಾರಿಸಲಾದ 'ಮಾಸ್ಟರ್ ಪ್ಲಾನ್' ಭಾಗವಾಗಿ ಬರುತ್ತವೆ.

ಆದ್ದರಿಂದ 'ಮಾಸ್ಟರ್ ಪ್ಲಾನ್'ಗೂ ತಿದ್ದುಪಡಿ ತಂದು ಬೆಂಗಳೂರಿಗೂ ಅನ್ವಯಗೊಳಿಸುವ ಚಿಂತನೆ ನಡೆದಿತ್ತು ಎಂದು ಹೇಳಲಾಗಿದೆ.

ಹೊಸ ಕಾನೂನನ್ನು ಅಥವಾ ನೀತಿಗಳನ್ನು ಜಾರಿಗೊಳಿಸುವ ಮುನ್ನ ಸಾರ್ವಜನಿಕ ಚರ್ಚೆಗೆ ಒಳಪಡಿಸಲು ಅವುಗಳನ್ನು ಮಾಹಿತಿ ಹಕ್ಕು ಕಾಯ್ದೆಯ ಸೆಕ್ಷನ್ (4)(1)(ಬಿ) ಅಡಿಯಲ್ಲಿ ಬಹಿರಂಗಪಡಿಸಬೇಕು ಮತ್ತು ಆ ಕಾಯ್ದೆಯ ಹಿಂದಿರುವ ಉದ್ದೇಶ ಹಾಗೂ ಅದರ ಗುರಿಯನ್ನು ಸೆಕ್ಷನ್ (4)(1)(ಜ) ಅಡಿಯಲ್ಲಿ ಘೋಷಿಸಬೇಕು. ಇವೆರಡನ್ನೂ ಉಲ್ಲಂಘಿಸಿರುವ ತಿದ್ದುಪಡಿ ಮಸೂದೆ, ಜನತಂತ್ರದ ಪ್ರಕ್ರಿಯೆಗೆ ಒಳಪಡದೆ ತರಾತುರಿಯಲ್ಲಿ ರೂಪುಗೊಂಡಿತ್ತು. ವಿರೋಧ ಪಕ್ಷಗಳು ಡಿವೈಎಸ್ಪಿ ಗಣಪತಿ ಆತ್ಮಹತ್ಯೆ ಪ್ರಕರಣದಲ್ಲಿ ವಿಧಾನ ಮಂಡಲ ಗದ್ದಲದಲ್ಲಿ ಮುಳುಗಿದ್ದಾಗ ಈ ಮಸೂದೆ ಯಾವುದೇ ಚರ್ಚೆಯಿಲ್ಲದೆ ಪಾಸಾಗಿತ್ತು.

ಈ ತಿದ್ದುಪಡಿ ಮಸೂದೆ ವಿರುದ್ಧ ಹಲವು ಎನ್.ಜಿ.ಓ.ಗಳು, ಪರಿಸರ – ನಾಗರಿಕ ಸಂಘಟನೆಗಳು ದನಿಯೆತ್ತಿದ್ದವು.

ಪ್ರಪಂಚದಾದ್ಯಂತ ಹಸಿರು ಪ್ರದೇಶಗಳನ್ನು ಹೆಚ್ಚಿಸುವ, ಮಾಲಿನ್ಯವನ್ನು ಕಡಿತಗೊಳಿಸುವ, ನಗರವನ್ನು ಪರಿಸರ ಸ್ನೇಹಿಯನ್ನಾಗಿಸುವ ಪ್ರಯತ್ನ ನಡೆದರೆ, ಕರ್ನಾಟಕದಲ್ಲಿ ಮಾತ್ರ ಇದಕ್ಕೆ ವ್ಯತಿರಿಕ್ತವಾದ ಕಾರ್ಯಗಳು ಜರುಗುತ್ತಿವೆ. ಜಗತ್ತಿನ ಮುಂದುವರಿದ ರಾಷ್ಟ್ರಗಳು, ಎರಡು ಶತಮಾನಕ್ಕೂ ಹೆಚ್ಚು ಕಾಲ ನಗರೀಕರಣವನ್ನು ಕಂಡ ಬೃಹತ್ ನಗರಗಳು ಸಹ ಓಪನ್ ಸ್ಪೇಸ್ಗಳನ್ನು–ಹಸಿರು ಹಾಸುಗಳನ್ನು ಗಣನೀಯ ಪ್ರಮಾಣದಲ್ಲಿ ಉಳಿಸಿಕೊಂಡು ಮುನ್ನಡೆಯುತ್ತಿವೆ ಎಂಬುದು ಅವರ ವಾದವಾಗಿತ್ತು. ಇದು ರಿಯಲ್ ಎಸ್ಟೇಟ್ ಲಾಬಿಯ ಒತ್ತಡದಿಂದ ಬಂದಿರುವ ಮಸೂದೆ ಎಂಬುದು ನಾಗರಿಕ–ಪರಿಸರ ಸಂಘಟನೆಗಳ ವಾದವಾಗಿತ್ತು. ಈ ಸಂಘಟನೆಗಳಲ್ಲಿ ಕೆಲವು ರಾಜ್ಯಪಾಲರಿಗೆ ಮನವಿ ಸಲ್ಲಿಸಿ ಮಸೂದೆಗೆ ಅಂಕಿತ ಹಾಕದೆ ವಾಪಸು ಕಳಿಸಬೇಕೆಂದು ಒತ್ತಾಯಿಸಿದ್ದವು.

ಸರಕಾರ ಈ ವಿಮರ್ಶೆ–ಟೀಕೆಗಳಿಗೆ ಕೊಟ್ಟ ಉತ್ತರ ಸಹ ಅದನ್ನು ಪುಷ್ಟಿಗೊಳಿಸುವಂತಿತ್ತು. ಶೇ. 15 ಓಪನ್ ಸ್ಪೇಸ್, ಶೇ. 10 ನಾಗರಿಕ ಸೌಲಭ್ಯ, ಶೇ. 30 ದಾರಿ ಬಿಟ್ಟ ಮೇಲೆ ಸೈಟಿಗೆ ಉಳಿಯುತ್ತಿರುವುದು ಕೇವಲ ಶೆ. 45. ಏರುತ್ತಿರುವ ಭೂಮಿ ಮತ್ತು ಭೂಸ್ವಾಧೀನದ ವೆಚ್ಚದ ಜತೆ ಇದನ್ನು ತೆಗೆದುಕೊಂಡರೆ ಬಡ–ಮಧ್ಯಮ ವರ್ಗಗಳಿಗೆ ಸೈಟನ್ನು ಅವರು ಭರಿಸಬಹುದಾದ ಬೆಲೆಯಲ್ಲಿ ಕೊಡಲಾಗುತ್ತಿಲ್ಲ. ಆದ್ದರಿಂದ ಈ ತಿದ್ದುಪಡಿ ತಂದು ಶೇ. 10 ರಷ್ಟು ಹೆಚ್ಚು ಭೂಮಿ ಲಭ್ಯವಾಗುವಂತೆ ಮಾಡಿದೆ ಎಂಬುದು ಸರಕಾರದ ಅಧಿಕಾರಿಯೊಬ್ಬರು ಒಂದು ಪತ್ರಿಕೆಗೆ ಕೊಟ್ಟ ಸಮಜಾಯಿಷಿ. ಆದರೆ ಮನೆ, ನಿವೇಶನಗಳ ಬೆಲೆ ಏರುತ್ತಿರುವುದು ಸರಕಾರಿ ಮನೆ/ನಿವೇಶನ ಹಂಚಿಕೆ ನಿಂತು ಹೋಗಿರುವುದರಿಂದ ಮತ್ತು ಅದರ ವೈಫಲ್ಯದಿಂದ. ರೀಯಲ್ ಎಸ್ಟೇಟ್ ಲಾಬಿ ಇರುವ ಭೂಮಿಯನ್ನು ಕೊಂಡು ಮನೆ/ನಿವೇಶನಗಳ ಬೆಲೆ ಏರಿಸುತ್ತಿದೆ ಎಂಬುದು ಎಲ್ಲರಿಗೂ ತಿಳಿದ ವಿಷಯ.

ಸ್ವಚ್ಛ ಗಾಳಿ, ನೀರು, ಪರಿಸರ – ಇವು, ಯಾವುದೇ ಇತರ ಮೂಲಭೂತ ಹಕ್ಕುಗಳಿಗಿಂತ ಕಡಿಮೆಯದಲ್ಲ ಎಂಬುದು ಇಲ್ಲಿರುವ ನಂಬಿಕೆ. ಕರ್ನಾಟಕದ ನಗರಗಳಲ್ಲಿ 1976ರ ಕಾನೂನಿನ ಪ್ರಕಾರ ಕಡ್ಡಾಯಗೊಳಿಸಿದ ಓಪನ್ ಸ್ಪೇಸ್ ಕೇವಲ ಶೇ 15ರಷ್ಟು. ಲಂಡನ್ನಲ್ಲಿ ವಾಸವಾಗಿರುವ ಪ್ರತಿಯೊಬ್ಬ ಪ್ರಜೆಗೆ 31.68 ಚ.ಮೀ.ನಷ್ಟು ಓಪನ್ ಸ್ಪೇಸ್ ಇದ್ದರೆ, ನ್ಯೂಯಾರ್ಕ್ನಲ್ಲಿ 26.4 ಚ.ಮೀ.ನಷ್ಟಿದೆ.

ಕೆಎಂಸಿ ಕಾಯಿದೆ ಪ್ರಕಾರ, ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ ಶೇ.15ರಷ್ಟು ಓಪನ್ ಸ್ಪೇಸ್ ಇರಬೇಕಿತ್ತು. ಆದರೆ ವಾಸ್ತವಾಂಶದಲ್ಲಿ ಉಳಿದಿರುವುದು ಶೇ 3.5ರಷ್ಟು ಪ್ರದೇಶ ಮಾತ್ರ ಎಂಬುದು ಹಲವು ಅಧ್ಯಯನಗಳಿಂದ ತಿಳಿದು ಬಂದಿದೆ! ಅಂದರೆ, ಈ ಲೆಕ್ಕಾಚಾರದ ಪ್ರಕಾರ ಬೆಂಗಳೂರಿನ ನಿವಾಸಿಯೊಬ್ಬನಿಗೆ ದೊರಕುವುದು ಕೇವಲ 1.6 ಚ.ಮೀ. ಓಪನ್ ಸ್ಪೇಸ್ ಅಷ್ಟೆ! ಓಪನ್ ಸ್ಪೇಸ್ಗಾಗಿ ಮೀಸಲಿಡಬೇಕಿದ್ದ ಪ್ರದೇಶವನ್ನು ಪ್ರಭಾವಿ ಶಕ್ತಿಗಳು ಭಾರೀ ಮಟ್ಟದಲ್ಲಿ ಒತ್ತುವರಿ ಮಾಡಿಕೊಂಡಿದ್ದಾರೆ.

ವಿಶ್ವ ಆರೋಗ್ಯ ಸಂಘಟನೆಯ ಪ್ರಕಾರ, ಒಬ್ಬ ವ್ಯಕ್ತಿಗೆ ಕಡೆಯಪಕ್ಷ 10 ಚ.ಮೀ. ಓಪನ್ ಸ್ಪೇಸ್ ಇರಬೇಕು. ಕುಡಿಯುವ ನೀರು ಮತ್ತದರ ಗುಣಮಟ್ಟ, ಅಂತರ್ಜಲ, ಶುದ್ಧಗಾಳಿ ಮುಂತಾದವು ನಗರಗಳಲ್ಲಿ ಲಭ್ಯವಿರುವ ಹಸಿರು ಹಾಸಿನ ಮೇಲೆ ಅವಲಂಬಿತವಾಗಿರುತ್ತವೆ. ಹಾಗೆಯೇ, ಸಾರ್ವಜನಿಕರ ಮಾನಸಿಕ ಮತ್ತು ದೈಹಿಕ ಆರೋಗ್ಯವೂ ಇದಕ್ಕೆ ಹೊರತಲ್ಲವೆಂಬುದು ವಿಜ್ಞಾನಿಗಳ ನಂಬಿಕೆ.

ಉದಾಹರಣೆಗೆ 1993ರಲ್ಲಿ ಬೆಂಗಳೂರು ನಗರದ ಶೇ 2ರಷ್ಟು ಮಕ್ಕಳು ಆಸ್ತಮಾದಿಂದ ಬಳಲುತ್ತಿದ್ದರು. ಈ ಪ್ರಮಾಣ 2008ರಲ್ಲಿ ಶೇ 28ಕ್ಕೆ ಏರಿದೆ ಎಂಬುದು ಅಧ್ಯಯನದಿಂದ ತಿಳಿದುಬಂದಿದೆ. ಕಡಿತಗೊಳ್ಳುತ್ತಿರುವ ಹಸಿರು ಹಾಸು ಇದಕ್ಕೆ ಕಾರಣ. ಕಳೆದ ನಾಲ್ಕು ದಶಕಗಳಲ್ಲಿ ಬೆಂಗಳೂರಿನ ಶೇ. 66ರಷ್ಟು ಹಸಿರು ಹಾಸು, ಶೇ 74ರಷ್ಟು ಕೆರೆಗಳು ನಾಶವಾಗಿವೆ.

ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ತಜ್ಞರ ಪ್ರಕಾರ, ನಗರದ ಆರೋಗ್ಯ ಸುಸ್ಥಿರವಾಗಿರಲು, ಪ್ರತಿಯೊಬ್ಬ ನಾಗರಿಕನಿಗೂ ಒಂದು ಮರ ಎಂಬಂತೆ ಹಸಿರು ಹಾಸು ಇರಬೇಕು. ಆದರೆ ಹಸಿರನ್ನು ಧ್ವಂಸ ಮಾಡುತ್ತಿರುವ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯವೈಖರಿಯ ಪ್ರತಿಫಲವಾಗಿ ಈಗ ಒಬ್ಬ ನಾಗರಿಕನಿಗೆ ಉಳಿದಿರುವುದು ಕೇವಲ 0.1 ಮರವಷ್ಟೆ.

ಇವೆಲ್ಲವನ್ನೂ ಗಮನಿಸಿದರೆ, ಇಂದು ಶ್ವಾಸಕೋಶ ಸಂಬಂಧಿತ ರೋಗಗಳು ಹೆಚ್ಚಾಗುತ್ತಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಆದ್ದರಿಂದಲೇ ಬೆಂಗಳೂರನ್ನು ಅಲರ್ಜಿ ನಗರವೆಂದು ವೈದ್ಯರು ಬಣ್ಣಿಸಿದ್ದಾರೆ. ಇಂತಹ ಬೆಳವಣಿಗೆ ಹಿನ್ನೆಲೆಯಲ್ಲಿ ಬೆಂಗಳೂರನ್ನು 'ಸಾವಿನಂಚಿನಲ್ಲಿರುವ ನಗರ' ಎಂದು ತಜ್ಞರು ವ್ಯಾಖ್ಯಾನಿಸಿದ್ದಾರೆ. ನಗರವಾಸಿಗಳ ಮಾನಸಿಕ ಆರೋಗ್ಯ ಪರೋಕ್ಷವಾಗಿ ಹಸಿರು ಪ್ರದೇಶಗಳಿಂದ ಪ್ರಭಾವಿತವಾಗುತ್ತದೆ.

ತಮ್ಮನ್ನು ಆರಿಸಿ ಕಳಿಸಿರುವ ಜನರಿಗೆ ಯಾವುದೇ ನಿಷ್ಠೆಯನ್ನೂ ತೋರದೆ ಗುತ್ತಿಗೆದಾರರು–ರಿಯಲ್ ಎಸ್ಟೇಟ್ ಲಾಬಿಗೆ ಸರ್ಕಾರ ಮಣಿದಿದೆ ಎಂಬ ಗುಮಾನಿ ಜನರಲ್ಲಿ ಮೂಡಿದೆ. ಬಿಜೆಪಿ, ಜೆಡಿ(ಎಸ್) ಪಕ್ಷಗಳು ಸದನದ ಒಳಗೆ ಈ ತಿದ್ದುಪಡಿಯನ್ನು ವಿರೋಧಿಸದೆ ಆ ಮೇಲೆ ಬೊಬ್ಬೆ ಹಾಕುತ್ತಿದ್ದರು. ರಾಜ್ಯಪಾಲರು ಪರಿಸರ–ನಾಗರಿಕ ಸಂಘಟನೆಗಳ ವಿರೋಧವನ್ನು ತೋರಿಸಿ, ಮಸೂದೆಯನ್ನು ವಾಪಸು ಕಳಿಸಿದ್ದಾರೆ. ರಾಜ್ಯಪಾಲರಿಗೆ ಅವರದ್ದೇ ಆದ ಬೇರೆ ಉದ್ದೇಶಗಳು ಇದ್ದರೂ, ಈ ಮಸೂದೆಯ ಹೂರಣ, ಅದು ಪಾಸಾದ ರೀತಿಯನ್ನು ಗಮನಿಸಿದರೆ ಅವರ ಕ್ರಮ ಈ ನಿರ್ದಿಷ್ಟ ಪ್ರಕರಣದಲ್ಲಿ ತಪ್ಪು ಎಂದು ಹೇಳುವಂತಿಲ್ಲ.

ನಮ್ಮ ಚುರು-ಟ್ವೀಟ್

ನಮ್ಮ ಗಮನ ತಪ್ಪು ಜಾಗದಲ್ಲಿ
ಕೇಂದ್ರೀಕೃತವಾಗಿದೆ. ಬ್ಯಾಂಕುಗಳು
ಸಮಸ್ಯೆ ಅಲ್ಲ. ದೊಡ್ಡ ಸುಸ್ತಿದಾರರು
ಮತ್ತು ಅವರಿಂದ ಸಾಲ ಮರುಪಾವತಿ
ಮಾಡಲು ಸರಕಾರಕ್ಕೆ ಮನಸ್ಸಿಲ್ಲದ್ದು
ಸಮಸ್ಯೆ.

– ಸೀತಾರಾಂ ಯೆಚುರಿ

ನಾಳಿನ ಕಾರ್ಯಕ್ರಮಗಳು :

ಅಕ್ಟೋಬರ್ 16 : "ಸ್ವಾತಂತ್ರ್ಯ–70, ದಲಿತರ ಸ್ಥಿತಿಗತಿ ಮತ್ತು ನಾವು ನೀವು" – ವಿಚಾರ ಸಂಕಿರಣ, ಡಾ. ಬಿ.ಆರ್. ಅಂಬೇಡ್ಕರ್‌ರವರ 125ನೇ ಜನ್ಮ ಜಯಂತಿ ವರ್ಷಾಚರಣೆ ಸಮಿತಿ ಮತ್ತು ದಲಿತ ಹಕ್ಕುಗಳ ಸಮಿತಿ, ಕರ್ನಾಟಕ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಂಗಳೂರು.

ಅಕ್ಟೋಬರ್ 16–17 : "ಸಹಿಷ್ಣುತೆ ಎಂಬುದು ಗೆಲುವು – ಮಹಿಳಾ ಕರ್ನಾಟಕ ಸಮಾವೇಶ–2016", ಚಿಂತನ ಉತ್ತರ ಕನ್ನಡ : ಶಿರಸಿ, ಉತ್ತರ ಕನ್ನಡ.

ಅಕ್ಟೋಬರ್ 17 : ದಕ್ಷಿಣ ಕನ್ನಡ ಡಿವೈಎಫ್ಐ–ಎಸ್ಎಫ್ಐ ಕಾರ್ಯಕರ್ತರ ಮೇಲಿನ ಸುಳ್ಳು ಕೇಸು ದಾಖಲಾತಿ ವಿರುದ್ಧ ಪ್ರತಿಭಟನೆ, ಮಿನಿವಿಧಾನ ಸೌಧದಿಂದ ಜಿಲ್ಲಾಧಿಕಾರಿ ಕಛೇರಿ ವರೆಗೆ ಮೆರವಣಿಗೆ,

ಅಕ್ಟೋಬರ್ 18 : ದಕ್ಷಿಣ ಕನ್ನಡ ಜಿಲ್ಲಾ ಬೀದಿಬದಿ ವ್ಯಾಪಾರಸ್ಥರ ಸಂಘ(ಸಿಐಟಿಯು)ದ 5ನೇ ವಾರ್ಷಿಕೋತ್ಸವ ಹಾಗೂ ಶ್ರಮ ಸಂಭ್ರಮ–2016. ಪುರಭವನ್, ಮಂಗಳೂರು.

ಅಕ್ಟೋಬರ್ 20 : ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರಿಂದ ಬೆಂಗಳೂರು ಚಲೋ

ಅಕ್ಟೋಬರ್ 23: "ದಲಿತರಿಗೆ ಭೂಮಿ, ಮನೆ ನಿವೇಶನಕ್ಕಾಗಿ" ವಿಚಾರ ಸಂಕಿರಣ, ದಲಿತ ಹಕ್ಕುಗಳ ಸಮಿತಿ, ಸೆನೆಟ್ ಸಭಾಂಗಣ, ಬೆಂಗಳೂರು.

ಅಕ್ಟೋಬರ್ 23 : ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘಟನೆ(ಎಐಎಡಬ್ಲ್ಯೂಯು) ಉಡುಪಿ ಜಿಲ್ಲಾ ಸಮ್ಮೇಳನ, ಉಡುಪಿ.

ಅಕ್ಟೋಬರ್ 24: ದಲಿತರ ಮೇಲಿನ ಧಾಳಿ, ದೌರ್ಜನ್ಯ ಖಂಡಿಸಿ ಎಐಎಡಬ್ಲ್ಯೂಯು ವತಿಯಿಂದ ರಾಷ್ಟ್ರವ್ಯಾಪಿ ಪ್ರತಿಭಟನೆ

ನವೆಂಬರ್ 18 : ಭೂಮಿ ವಸತಿ, ನಿವೇಶನಕ್ಕಾಗಿ ರೈತ, ಕಾರ್ಮಿಕ, ಕೂಲಿಕಾರ, ದಲಿತರಿಂದ ರಾಜ್ಯಾದ್ಯಂತ 'ಜೈಲ್ ಭರೋ' ಚಳುವಳಿ.

ಡಿಸೆಂಬರ್ 19–21 : ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘಟನೆ(ಎಐಎಡಬ್ಲ್ಯೂಯು), 6ನೇ ಕರ್ನಾಟಕ ರಾಜ್ಯ ಸಮ್ಮೇಳನ, ಕುಂದಾಪುರ, ಉಡುಪಿ.

ಮನುಸ್ಮೃತಿ ಎಂಬ ಮಲವ ಸ್ವಚ್ಛ ಮಾಡೋಣ
ಬನ್ನಿ – ಕನಕ ಪಡೆಯೆಂದು ಮುಖವಾಡ
ಧರಿಸಿದ ಕನಕಾಂಗರ ಪಡೆಯ ತಲೆಯೊಳಗಿನ
ಮನುಸ್ಮೃತಿ ಎಂಬ ಮಲವನ್ನು ಸ್ವಚ್ಛ ಮಾಡೋಣ
ಬನ್ನಿ. ಕನಕದಾಸರು ನಮಗೆ ನೀಡಿದ ಪೊರಕೆ,
ವಚನಕಾರರು ನಮಗೆ ನೀಡಿದ ಹಲ ಹಲವು
ರೀತಿಯ ಪೊರಕೆ, ಅಂಬೇಡ್ಕರ್ ರವರು ನೀಡಿದ
ಸಮಾಜಶಾಸ್ತ್ರೀಯ ಪೊರಕೆ, ಕೊಸಾಂಬಿಯವರು
ನೀಡಿದ ಇತಿಹಾಸದ ಪೊರಕೆಗಳಿಂದ ಇವರೆಲ್ಲರ
ತಲೆಯಲ್ಲಿನ ವೇದಾಂತದ ಕಸವನ್ನು ಗುಡಿಸಿ ಸ್ವಚ್ಛ
ಮಾಡೋಣ ಬನ್ನಿ.

– ಜಿ. ಎನ್. ನಾಗರಾಜ್

(ಸಂಘ ಪರಿವಾರದ 'ಕನಕನಡೆ'ಗೆ ಪ್ರತಿಕ್ರಿಯಿಸುತ್ತಾ)

ಟಿಪ್ಪು ಜಯಂತಿ : ಕೊಳ್ಳಿ ಹಿಡಿದಿರುವ ಸಂಘ ಪರಿವಾರ, ಸೋ ಎನ್ನುವ ಕಾಂಗ್ರೆಸ್ ಸರಕಾರ.

ಎಸ್.ವೈ.ಗುರುಶಾಂತ್

ಬ್ರಿಟೀಷ್ ವಸಾಹತುಶಾಹಿಗಳಿಗೆ ಭಾರೀ ಪ್ರತಿರೋಧ ಒಡ್ಡಿ ಶರಣಾಗದೇ ಸೆಣಸಿ ರಣರಂಗದಲ್ಲೇ ಹುತಾತ್ಮನಾದ ಹಜರತ್ ಟಿಪ್ಪು ಸುಲ್ತಾನ್‌ನ ಜಯಂತಿ ಆಚರಣೆಗೆ ಸರ್ಕಾರ ಕರೆ ನೀಡಿ ಇನ್ನೇನು ನವೆಂಬರ್ 10ಕ್ಕೆ ಒಂದು ವರುಷವಾಗುತ್ತದೆ.

ಇದಕ್ಕೆ ಸಂಘ ಪರಿವಾರದ ತೀವ್ರ ವಿರೋಧವಿತ್ತು. ಕಳೆದ ವರುಷ ಕೊಡಗು ಜಿಲ್ಲೆಯಲ್ಲಿ ಆದ ಕೆಲ ಅಹಿತಕರ ಘಟನೆಗಳನ್ನು ಮುಂದೆ ಮಾಡಿ ರಾಜ್ಯದಲ್ಲಿ ಅದನ್ನು ರದ್ದುಗೊಳಿಸಬೇಕೆಂದು ಬಿಜೆಪಿ ಒತ್ತಡ ಹೇರುತ್ತಿದೆ. ಈ ವರುಷವೂ ಆಚರಣೆ ನಡೆಯಲಿದೆಯೆಂದು ಸರಕಾರ ಸ್ಪಷ್ಟಪಡಿಸಿ, ಕಾರ್ಯಕ್ರಮಗಳನ್ನು ಘೋಷಿಸಿರುವುದರಿಂದ ಅನಿಶ್ಚಿತತೆ ನಿವಾರಣೆಯಾಗಿದೆ. ಆದರೆ ಆತಂಕಗಳು ಉಳಿದಿವೆ.

ಹುನ್ನಾರಗಳು

ಟಿಪ್ಪು ಜಯಂತ್ರಿ ಆಚರಿಸಕೂಡದು ಎಂಬ ಆರ್‌ಎಸ್‌ಎಸ್‌ನ ವಿರೋಧದಲ್ಲಿ ಟಿಪ್ಪು ಇಸ್ಲಾಂ ಮತಧರ್ಮದ ಅನುಯಾಯಿಯಾಗಿದ್ದ ಎಂಬ ಕೋಮುವಾದೀ ಅಂಶವಿದೆ. ಹಾಗೆಯೇ ಆತ ಬ್ರಿಟೀಷ್ ವಸಾಹತುಶಾಹಿಗಳ ಕಡು ವಿರೋಧಿ ಎಂಬುದೂ ಮತ್ತೊಂದು ಪ್ರಧಾನ ಸಂಗತಿಯಾಗಿದೆ. ಹೀಗಾಗಿ ನವ ವಸಾಹತುಶಾಹಿಗಳಿಗೆ ರತ್ನಗಂಬಳಿ ಹಾಕಿ ಸ್ವಾಗತಿಸಿ ಸೇವೆಗೈಯ್ಯುತ್ತಿರುವ ಸಂಘ ಪರಿವಾರ ಜನತೆಯ ನೈಜ ದೇಶಪ್ರೇಮ, ಪ್ರತಿರೋಧ ಬೆಳೆಯದಂತೆ ತಡೆಯಲು, ಜನರನ್ನು ವಿಭಜಿಸಿ ದೇಶ ದುರ್ಬಲಗೊಳಿಸಿ ಶೋಷಣೆ, ಸುಲಿಗೆ ನಿರಾತಂಕವಾಗಿಸಲು ತನ್ನ 'ಹಿಂದುತ್ವ'ದ ಕೋಮುವಾದಿ ಅಜೆಂಡಾವನ್ನು ವ್ಯಾಪಕವಾಗಿ ಜಾರಿಗೊಳಿಸಲು ಹೊರಟಿದೆ. ನಿಜಕ್ಕೂ ದೇಶಪ್ರೇಮವಿದ್ದಲ್ಲಿ ವಸಾಹತುಶಾಹಿಗಳ ಎದುರಿನ ಎಲ್ಲಾ ಪ್ರತಿರೋಧವನ್ನು ಸಕಾರಾತ್ಮಕವಾಗಿ ಪರಿಗಣಿಸಿ, ಈಗಿನ ಜನರನ್ನು ಅಣಿಗೊಳಿಸಬೇಕಿತ್ತು. ಇದು ಅದಕ್ಕೆ ಬೇಕಿಲ್ಲ.

ಟಿಪ್ಪುವಿನ ವಿರುದ್ಧದ 'ಸಂಘಿ'ಗಳ ಅಪಪ್ರಚಾರ ಇಂದು–ನೆನ್ನೆಯದೇನಲ್ಲ. ಆದರೆ ಈಗ ಕರ್ನಾಟಕಕ್ಕೆ, ದೇಶಕ್ಕೆ ಟಿಪ್ಪು ಕೊಡುಗೆಗಳನ್ನು ಸ್ಮರಿಸುವ, ಜಯಂತಿಯ ಸಂದರ್ಭವನ್ನು ತಮ್ಮ 'ಮತೀಯ ವಿಭಜನೆಯ' ಉದ್ದೇಶಕ್ಕೆ ಬಳಸಲು ತೀವ್ರ ಕಾರ್ಯಾಚರಣೆಯ ಉದ್ದೇಶಕ್ಕೆ ಇಳಿದಿದೆ. ಈ ಪಡೆ ಕೊಡಗು ಜಿಲ್ಲೆಯಲ್ಲಿ ಮಾಡಿದ ಅನಾಹುತವೇ ಇಂದು ಸಾಕ್ಷಿ. ಈಗಲೂ ಅಲ್ಲಿಂದ ಇಲ್ಲಿಯವರೆಗೆ ಅಂದು ನಡೆದ ಗಲಭೆ, ಕೊಲೆಗಳ ರಾಜಕೀಯ ಅದರ ಪರಿಣಾಮಗಳನ್ನು ರಾಜಕೀಯವಾಗಿ ಮತ್ತು ಸಂಘಟನಾತ್ಮಕವಾಗಿ ಕ್ರೋಢಿಕರಿಸಿಕೊಳ್ಳಲು ಹೊಸ ಹುನ್ನಾರಗಳಿಗೆ ಇಳಿದಿದೆ ಎಂಬುದು ಅತ್ಯಂತ ದಿಗ್ಭ್ರಮೆಗೊಳಿಸುವ ಸಂಗತಿಯಾಗಿದೆ.

2015ರ ನವೆಂಬರ್ 10ರಂದು ಮಡಿಕೇರಿಯಲ್ಲಿ ನಡೆದ ಟಿಪ್ಪು ಜಯಂತ್ರಿಯನ್ನು ವಿರೋಧಿಸಲು ವಿಶ್ವ ಹಿಂದೂ ಪರಿಷತ್, ಹಿಂದೂ ಜಾಗರಣಾ ವೇದಿಕೆ ಮುಂತಾದವು ಜನರನ್ನು ಸಂಘಟಿಸಿ ದ್ವೇಷ ಹುಟ್ಟು ಹಾಕಿದ್ದರು. ಜಯಂತಿ ಆಚರಣೆಗೆ ಬರುವವರನ್ನು ತಡೆಯುವ ಸಂದರ್ಭದಲ್ಲಿ 'ಪ್ರತಿಧಾಳಿ'ಯನ್ನು ಆಹ್ವಾನಿಸಿ ತಪ್ಪಿಸಿಕೊಳ್ಳಲು ಓಡಿ ಹೋದಾಗ ಬಿದ್ದು ದೇವಪಂಡ ಕುಟ್ಟಪ್ಪನವರು ಸಾವನ್ನಪ್ಪಿದರು. ಇದಕ್ಕೆ ಪ್ರತೀಕಾರವಾಗಿ ಮನೆಗೆ ಹಿಂದಿರುಗುತ್ತಿದ್ದವರ ಮೇಲೆ ಪರಿವಾರದ ಪುಂಡರು ಗುಂಡು ಹಾರಿಸಿದಾಗ ನೆಲ್ಲುಹುದಿಕೇರಿಯ ಶಾಹುಲ್ ಹಮೀದ್ ಎನ್ನುವ ಅಮಾಯಕ ಯುವಕನ ಹತ್ಯೆಯಾಯಿತು. ಹಾಗೇ ಗಲಭೆಯಲ್ಲಿ ಆಸ್ತಿ–ಪಾಸ್ತಿಗಳಿಗೆ, ಹಾನಿಯಾಗಿ ತೀವ್ರ ದ್ವೇಷದ ವಾತಾವರಣ ಸೃಷ್ಠಿಯಾಗಿತ್ತು.

ಈ ಒಟ್ಟು ಘಟನೆಗಳನ್ನು ಮತ್ತು ಅದರಿಂದ ಉಂಟಾದ ಸನ್ನಿವೇಶಗಳನ್ನು ಬಳಸಲು ಸಂಘಪರಿವಾರ ಅತ್ಯಂತ ಯೋಜಿತ ರೀತಿಯಲ್ಲಿ ಕಾರ್ಯಕ್ಕೆ ಇಳಿದಿರುವುದು ಸ್ಪಷ್ಟ. ಅದರಲ್ಲಿ ಹಿಂದೂ–ಮುಸ್ಲಿಂರ ನಡುವೆ ದ್ವೇಷದ ಮನೋಭಾವನೆ ಹೆಚ್ಚಿಸುವಾಗಲೇ ಬಹಳ ಪ್ರಮುಖವಾಗಿ ಟಿಪ್ಪು ವಿರುದ್ಧ ಕೊಡವ ಜನಾಂಗದವರನ್ನೂ ಎತ್ತಿ ಕಟ್ಟಲು 'ಸಂಘಿ'ಗಳು ಅಪಾರವಾಗಿ ಯತ್ನಿಸಿದ್ದರು.

ಆತಂಕಕಾರಿ ಬೆಳವಣಿಗೆಗಳು

ಕೊಡಗಿನ ರಾಜಕೀಯ ಬಲಾ ಬಲಗಳ ಪಲ್ಲಟಗಳಲ್ಲಿ ಕೊಡವ ಸಮುದಾಯದ ಬಹುದೊಡ್ಡ ವಿಭಾಗ ಬಿಜೆಪಿಯ ಬೆಂಬಲಿಗರು. ಇವರ ನಡುವೆ ಆರ್.ಎಸ್.ಎಸ್. ಸಹ ಸಕ್ರಿಯವಾಗಿದೆ. ಜೊತೆಗೆ ಕೊಡಗು ಮುಕ್ತಿ ಮೋರ್ಚಾ, ಮುಂತಾದ ಹಲವು ಹೆಸರುಗಳಲ್ಲಿ 'ಕೊಡವ ಪ್ರತ್ಯೇಕ(ಲ್ಯಾಂಡ್)ತೆ ಪ್ರತಿಪಾದಿಸುತ್ತಾ ಬಂದಿರುವ 'ಕೊಡಗು ನ್ಯಾಷನಲ್ ಕೌನ್ಸಿಲ್'ನ ಎನ್.ಯು. ನಾಚಪ್ಪನವರ ಪ್ರತ್ಯೇಕತಾವಾದ ಮತ್ತು ಜನಾಂಗೀಯ ಶ್ರೇಷ್ಠತೆಯ ವ್ಯಸನವೂ ಒಂದು ಹಂತದಲ್ಲಿ ಬೇರಿಳಿಸುತ್ತಿದೆ.

ಹಲವಾರು ರಾಜಕೀಯ ಸ್ಥಿತ್ಯಂತರಗಳಲ್ಲಿರುವ ಕೊಡವರಲ್ಲಿರುವ ತನ್ನ ನೆಲೆಯನ್ನು ಕೇವಲ ರಾಜಕೀಯ ಪಕ್ಷದ ರಾಜಕಾರಣಕ್ಕೆ ಸೀಮಿತಗೊಳಿಸಿದಲ್ಲಿ ಅದನ್ನು ಕಳೆದುಕೊಳ್ಳುವ ಆತಂಕ ಸಂಘ ಪರಿವಾರಕ್ಕೆ ಇದೆ. (ಕಾಂಗ್ರೆಸ್ ಮತ್ತಿತರ ಕಡೆಗೆ ವಾಲಿದರೆ) ಇದನ್ನು ಇನ್ನಷ್ಟು ಉಗ್ರ ಹಿಂದುತ್ವಕ್ಕೆ ತರದೇ ತನ್ನ ನೆಲೆ ಬಹುಕಾಲ ಉಳಿಯಲಾರದು ಎಂಬ ಅಂದಾಜಿಗೆ ಬಂದಿರುವ ಆರ್.ಎಸ್.ಎಸ್.–ಪರಿವಾರ ಅದಕ್ಕಾಗಿ ಟಿಪ್ಪುವಿನ ವಿರುದ್ಧ ಕೊಡವರನ್ನು ಪ್ರಚೋಧಿಸಲು ಯುತ್ನಿಸುತ್ತಿದೆ. ಟಿಪ್ಪು ಜಯಂತಿಯನ್ನು ಒಂದು ನೆಪವಾಗಿ ಬಳಸಲು ದೀರ್ಘ ಕಾರ್ಯಾಚರಣೆಗೆ ಇಳಿದಿದೆ.

ಇದಕ್ಕಾಗಿ ಅದು ಹುಟ್ಟು ಹಾಕಿದ್ದೇ 'ದೇವಟೆ ಪರಂಬು' 'ಪುರಾಣ !

ಅಂತರ್ಮತೀಯ ಘರ್ಷಣೆಗೆ ಪ್ರಚೋದನೆ

'ಹಿಂದೆ ಹೈದರಾಲಿ ಮತ್ತು ಟಿಪ್ಪು ಸುಲ್ತಾನ್‌ರವರು ಕೊಡಗನ್ನು ಆಳುತ್ತಿದ್ದಾಗ (1776 ರ ಸುಮಾರಿನಿಂದ 12ವರ್ಷಗಳು) ಸಾವಿರಾರು 'ಕೊಡವ'ರನ್ನು ಕಗ್ಗೊಲೆ ಮಾಡಿದ್ದಾನೆ. ಮಹಿಳೆಯರ ಮೇಲೆ ಅತ್ಯಾಚಾರ ಎಸಗಲಾಗಿದೆ. ಅದಕ್ಕಾಗಿ ಈಗ 'ಹುತಾತ್ಮರಾದ ಕೊಡವರಿಗೆ' ಒಂದು ಸ್ಮಾರಕ ನಿರ್ಮಿಸಬೇಕು' ಎಂಬುದು ಸಂಘಪರಿವಾರದ ಸೂಚನೆ. ಇದನ್ನು ತಾನೇ ನೇರವಾಗಿ ಮಾಡಲು ಹೋಗದೇ ಅದಕ್ಕಾಗಿ ಕೊಡವ ಪ್ರತ್ಯೇಕತಾವಾದಿ ನಂದಿನೆರವಂಡ ನಾಚಪ್ಪನನ್ನು ಬಳಸುತ್ತಿದೆ.

'ಕೊಡವರು ಹಿಂದುಗಳಲ್ಲ' ಎಂದು ಪ್ರಬಲವಾಗಿ ಪ್ರತಿಪಾದಿಸುತ್ತಿದ್ದ ನಾಚಪ್ಪ ಇಂದು 'ಹಿಂದುತ್ವ'ದ ದಾಳವಾಗಿ ಆಟಕ್ಕೆ ಇಳಿದಿದ್ದಾನೆ. ಟಿಪ್ಪುವಿನಿಂದ ಕೊಡವರ ಸಾಮೂಹಿಕ ಹತ್ಯೆಯಾಗಿದೆ ಎಂದೂ, ಅದಕ್ಕಾಗಿ ಒಂದು ಸ್ಮಾರಕವನ್ನು ನಿರ್ಮಿಸಬೇಕೆಂದು ಹೊರಟಿದ್ದಾನೆ. ಹತ್ಯೆಗೀಡಾದವರ ಸಂಖ್ಯೆ ಮೊದ ಮೊದಲು 5 ಸಾವಿರದಿಂದ ಆರಂಭಗೊಂಡು ಈಗ ಅದು 60,000 ತಲುಪಿದೆ. ! ಹತ್ಯೆಯಾದ ಜಾಗವನ್ನೂ ಹುಡುಕುತ್ತಾ ಎಲ್ಲೆಲ್ಲೋ ಸುತ್ತಾಡಿದ ಸಿಎನ್‌ಸಿಯ ನಾಯಕ ನಾಚಪ್ಪ ಕೊನೆಗೆ ಅಯ್ಯಂಗೇರಿ ಹತ್ತಿರದ (ಭಾಗಮಂಡಲದ ಬಳಿಯ) ಮೀಸಲು ಅರಣ್ಯ ಪ್ರದೇಶದೊಳಗೆ ಹೋಗಿ ಅಲ್ಲಿ ಸ್ಮಾರಕ ನಿರ್ಮಿಸಲು ಕಲ್ಲುಗಳನ್ನು ನೆಟ್ಟಿದ್ದಾನೆ! ಒಂದು ದಿನ ಯಾರೋ ಕೆಲವು ಕಿಡಿಗೇಡಿಗಳು ಈ ಸ್ಮಾರಕದ ಕಲ್ಲುಗಳನ್ನು ಕಡೆವಿದ್ದಾರೆ. ಇದು ಬಹುತೇಕ ಮೇ 12, 2016ರ ಸಂಜೆ ಆಗಿರುವ ದೂರು? ಇದೆ. ಸ್ಮಾರಕದ ಹೆಸರಲ್ಲಿ ಮುಂದೆ ನಡೆಯಬಹುದಾದ ದುರ್ಘಟನೆಗಳ ಗಂಭೀರ ಅಪಾಯಗಳನ್ನು ಮನಗಂಡ ಸುತ್ತಲಿನ ಗ್ರಾಮಸ್ಥರು ತೀವ್ರವಾಗಿ ವಿರೋಧಿಸುತ್ತಿದ್ದಾರೆ. ಈ ಪರಿಸರದಲ್ಲಿ ಗೌಡ, ಮುಸ್ಲಿಂ ಮುಂತಾದವರು ಅಧಿಕ ಸಂಖ್ಯೆಯಲ್ಲಿದ್ದಾರೆ.

ಸುಳ್ಳುಗಳ ಸರಮಾಲೆ

'ಇಲ್ಲಿಯೇ' ಕೊಡವರ ಹತ್ಯೆಯಾಗಿದ್ದು ಎಂಬುದಕ್ಕೆ ಯಾವುದೇ ಸಾಕ್ಷ್ಯ, ಪುರಾವೆಗಳು ಇಲ್ಲ. ಹೇಳಲಾಗುತ್ತಿರುವ ಘಟನೆ ನಡೆದು 230 ವರುಷಗಳಾಗಿವೆ (1785). ಈಗ ತೋರಿಸುವ ಇತಿಹಾಸ ಎನ್ನುವುದನ್ನು ಬ್ರಿಟೀಷ್ ಇತಿಹಾಸಕಾರರು ಇಲ್ಲವೇ ಅವರ ಆರಾಧಕರು ಬರೆದ ಕಥೆಗಳಾಗಿವೆ. ಅಲ್ಲಿಯೂ 60 ಸಾವಿರ ಹತ್ಯೆಯಾದ ಬಗ್ಗೆ ಪ್ರಸ್ತಾಪ ಇಲ್ಲ. ಮೇಲಾಗಿ ಇಡೀ ಕೊಡಗಿನ ಜನಸಂಖ್ಯೆಯೇ ಸುಮಾರು ಅಷ್ಟಿದ್ದಾಗ ಕೊಡವರೇ ಆ ಸಂಖ್ಯೆಯಲ್ಲಿ ಇದ್ದರು ಎಂದರೆ ಈಗ ನಂಬುವುದಾದರೂ ಹೇಗೆ?

ಕೊಡವರ 'ವೇದ'ವೆಂದೇ ಹೇಳಲಾಗುವ 'ಪಟ್ಟೋಲೆ ಪಳಮೆ'ಯಲ್ಲಿಯೂ ಇಂತಹ ಹತ್ಯೆಗಳ ಉಲ್ಲೇಖವಿಲ್ಲ. ಟಿಪ್ಪು ದೇವಟಿ ಪರಂಬುವಿನ ಪ್ರದೇಶಕ್ಕೆ ಕೆಲವರನ್ನು ಬಂಧಿಸಿ ತಂದ ಪ್ರಸ್ತಾಪವಿದೆಯೇ ಹೊರತು ಸಾಮೂಹಿಕ ಹತ್ಯೆಗಳ ಪ್ರಸ್ತಾಪವೇ ಇಲ್ಲ. ಟಿಪ್ಪುವಿನ ಸೈನ್ಯದಲ್ಲಿ ಕೊಡವರೂ ಸೈನಿಕರಾಗಿದ್ದರು. ಒಂದಂಶ ನಿಜ !. ಬ್ರಿಟೀಷರ ಪ್ರವೇಶದ ಸಂದರ್ಭದಲ್ಲಿ ಟಿಪ್ಪುವನ್ನು ವಿರೋಧಿಸಿ ಬ್ರಿಟೀಶರ ಜೊತೆ ಕೈಜೋಡಿಸಿದವರ ಮತ್ತು ದಂಗೆ ಎದ್ದವರ ಮೇಲೆ ಆತ ಉಗ್ರ ದಂಡನೀಯ ಕ್ರಮಗಳನ್ನು ಕೈಗೊಂಡಿದ್ದ. ಅದರಲ್ಲಿ ಕೊಡವರು ಇದ್ದರು. ಕೊಡವರು ಎಂಬ ಏಕ ಕಾರಣಕ್ಕೆ ಟಿಪ್ಪು ದಂಡಿಸಿದ ಸಂಭವಗಳೇ ಇಲ್ಲ ಎಂದು ಇತಿಹಾಸಕಾರರು ಹೇಳುತ್ತಾರೆ. ಹಾಗೆಯೇ ಬಂಧಿಸಿದವರನ್ನೆಲ್ಲಾ ಇಸ್ಲಾಂ ಮತಧರ್ಮಕ್ಕೆ ಮತಾಂತರಗೊಳಿಸಲಾಗಿದೆ ಎಂಬುದೂ ಪೂರ್ಣ ಸತ್ಯವಲ್ಲ ಎಂದೂ ಹೇಳುತ್ತಾರೆ.

230 ವರುಷಗಳ ಹಿಂದೆ ಹಿಡಿದೊಯ್ದ 85,000 ಜನರಲ್ಲಿ ತಪ್ಪಿಸಿಕೊಂಡ 12000 ಕೊಡವರನ್ನೂ ಮತಾಂತರ ಮಾಡಿದ್ದ ಎನ್ನುವುದು ಹೌದಾದರೆ ಇಂದಿಗೆ ಅವರ ಸಂ–ಖ್ಯೆ ಎಷ್ಟಿರಬೇಕಿತ್ತು? ಹಲವು ಲಕ್ಷಗಳನ್ನು ದಾಟಬೇಕಿತ್ತು. ಆದರೆ ಈಗ ಅವರ ಸಂಖ್ಯೆ 18 ಸಾವಿರ ಮಾತ್ರ!. ಹಾಗೆಯೇ ಮತಾಂತರ ಮಾಡಿದ ಕೊಡವರು ಅವರ ಊರು–ಮನೆಗಳಿಗೆ ವಾಪಸಾದಾಗ ಕೊಡವರು ಇವರನ್ನು ತಮ್ಮ ಕುಟುಂಬದೊಳಗೆ ಸ್ವೀಕರಿಸಲಿಲ್ಲ ಯಾಕೆ? ಇವರನ್ನು ಬಹಿಷ್ಕರಿಸಿ ಹೊರಗಿಟ್ಟಿದ್ದೇಕೆ? ಯಾವ ಹಿತಾಸಕ್ತಿಗಳು ಇದ್ದವು ಎಂದು ಹಿರಿಯ ಚಿಂತಕ ಎ.ಕೆ.ಸುಬ್ಬಯ್ಯನವರು ಪ್ರಶ್ನಿಸುತ್ತಾರೆ. ಅಂತಹವರನ್ನು ಹೊರದೂಡಿದ್ದರಲ್ಲಿ 'ಆಸ್ತಿ ಹಕ್ಕಿನ' ಬಾಚಿಕೊಳ್ಳುವ ಸ್ವಾರ್ಥ ಹಿತಾಸಕ್ತಿ ಇರುವುದಬಬು ಗುರುತಿಸುತ್ತಾರೆ ಅವರು. ಮುಂದುವರೆದು ಅಂದು ಅಲ್ಲಿಯೇ ಉಳಿದವರು ಎನ್ನಲಾದ 73,000 ಜನರು ಈಗ ಇರುವ ಯಾವ ಕುರುಹುಗಳೂ ಇಲ್ಲ ಎನ್ನುತ್ತಾರೆ. !

ಅದೇ ರೀತಿ ಕೊಡವರ ಮೇಲೆ ಟಿಪ್ಪುನಿಂದ ಮಾತ್ರ ದಂಡನೆ ಆಗಿದೆ ಎಂಬ ಮಾತನ್ನು ಕೊಡವರೇ ಆದ ಇತಿಹಾಸಕಾರರು, ಸಾಂಸ್ಕೃತಿಕ ಚಿಂತಕರು (ಲೆಫ್ಟಿನೆಂಟ್ ಕೆ.ಸಿ.ಪೊನ್ನಪ್ಪ, ಪ್ರೊ. ಕೆ.ಕೆ.ಸುಬ್ಬಯ್ಯ) ನಂತಹವರೂ ಅಲ್ಲಗಳೆಯುತ್ತಾರೆ. ಹಾವೇರಿ ರಾಜಮನೆತನ ಕ್ರಿ.1600 ರಿಂದ 1834ರವರೆಗೂ ಆಡಳಿತದಲ್ಲೂ ಕೊಡವರು ಮತ್ತು ಇತರೆ ಜಾತಿ–ಸಮುದಾಯಗಳ ಮೇಲೆ ದಾಳಿ ನಡೆದಿದೆ. ಅವರಿಗೆಲ್ಲಾ ಸ್ಮಾರಕ ನಿರ್ಮಿಸಿ ಈಗ ನ್ಯಾಯ ಕೊಡಬಹುದೇ ಎಂದೂ ಡಾ.ಐ.ಆರ್.ದುರ್ಗಾಪ್ರಸಾದ್ ಪ್ರಶ್ನಿಸುತ್ತಾರೆ.

ಆದರೆ ಸಂಘ ಪರಿವಾರದ ವಿತಂಡವಾದಿಗಳಿಗೆ ಚರಿತ್ರೆಯ ಸತ್ಯಗಳು ಬೇಕಿಲ್ಲ. ಅವರ ದುರುದ್ದೇಶಗಳಿಗೆ ಎಂತಹುದೇ ಇತಿಹಾಸ ನಿರ್ಮಿಸಬಲ್ಲರು ಅವರು !

ಈ ಎಲ್ಲಾ ಕೃತ್ಯಗಳನ್ನು ಗಮನಿಸಿದಾಗ ಕೊಡಗಿನಲ್ಲಿ ಅಂತರ್ಮತೀಯ ಘರ್ಷಣೆಯನ್ನು ಹುಟ್ಟು ಹಾಕಲು ಸಂಘ ಪರಿವಾರ– ಬಿಜೆಪಿ ಶಕ್ತಿಗಳು ಉತ್ಸುಕವಾಗಿ ಕಾಯಕ ಪ್ರವೃತ್ತರಾಗಿದ್ದಾರೆ, ಎಂಬುದು ಸ್ಪಷ್ಟ.

ಪ್ರತಿರೋಧ

ಇಂತಹ ಯತ್ನಕ್ಕೆ ಜಿಲ್ಲೆಯಲ್ಲಿ ವ್ಯಾಪಕ ಪ್ರತಿರೋಧವೂ ಇದೆ. ಪ್ರಗತಿಪರರು ಮಾತ್ರವಲ್ಲ, ಜನಸಾಮಾನ್ಯರೂ ಈ ಹುನ್ನಾರಗಳನ್ನು ವಿರೋಧಿಸುತ್ತಿದ್ದಾರೆ. ಇಡೀ ಕೊಡಗು ಜಿಲ್ಲೆ ಎಂದರೆ ಕೊಡವರು ಮಾತ್ರ ಎಂಬ ಲಿಖಿತ, ಅಲಿಖಿತ ವಾದಗಳನ್ನು ಅಲ್ಲಗಳೆವ, ವಿರೋಧಿಸುವ ಸಮುದಾಯಗಳೂ ಇವೆ. ಕೊಡವರಲ್ಲದೇ 18 ಮೂಲ ನಿವಾಸಿಗಳ ಅಸ್ತಿತ್ವವನ್ನೂ ಪ್ರತಿಪಾದಿಸುವ ಅನಿವಾರ್ಯತೆ ಅಲ್ಲಿ ಬಂದಿದೆ. ಸಿಪಿಐ(ಎಂ) ಮತ್ತು ಕೊಡಗು ಸೌಹಾರ್ದ ವೇದಿಕೆ, ಸಮಾನ ಮನಸ್ಕರ ವೇದಿಕೆ ಸತ್ಯ ಸಂಗತಿಗಳನ್ನು ಹೊರ ಜಗತ್ತಿಗೆ ಬಿಚ್ಚಿಡುತ್ತಿವೆ.

ಕಾಂಗ್ರೆಸ್ ಏನು ಮಾಡುತ್ತಿದೆ?

ಆದರೆ ರಾಜ್ಯದಲ್ಲಿ ಅಧಿಕಾರರೂಢ, ಕೊಡಗು ಜಿಲ್ಲೆಯಲ್ಲಿ ಬಿಜೆಪಿಗೆ ಸ್ಪರ್ಧಿಯಾಗಿರುವ, ಕಾಂಗ್ರೆಸ್ ಪಕ್ಷದ ಪಾತ್ರ ಅತ್ಯಂತ ಅನುಮಾನಾಸ್ಪದ ಹಾಗೂ ಆಕ್ಷೇಪಾರ್ಹವಾಗಿದೆ.

ದೇವಟಿ ಪಂರಬುವಿನಲ್ಲಿ ಸ್ಮಾರಕ ನಿರ್ಮಿಸುವ ಸಿಎನ್‌ಸಿ ಪ್ರಯತ್ನಗಳನ್ನೂ ತಡೆಯುವ ಯಾವ ಥರದ ಪ್ರಯತ್ನಗಳು ನಡೆಯಲಿಲ್ಲ. ಇಡೀ ವಿದ್ಯಾಮಾನಗಳಲ್ಲಿ ಕಾಂಗ್ರೆಸ್ ಪಕ್ಷವೇ ಪೂರ್ಣ ನಾಪತ್ತೆಯಾಗಿದೆ.! ಇಲ್ಲಿ ಏಳುವ ಪ್ರಶ್ನೆಯೆಂದರೆ, ಸ್ಮಾರಕದ ಕಲ್ಲುಗಳನ್ನು ನಿಲ್ಲಿಸಿರುವ (ಕೆಡವಿರುವ) ಪ್ರದೇಶ ಮೀಸಲು ಅರಣ್ಯ ಪ್ರದೇಶ. ಇಲಾಖೆ ಅನುಮತಿ ಇಲ್ಲದೇ ಯಾರೂ ಪ್ರವೇಶಿಸುವಂತಿಲ್ಲದ ಜಾಗದಲ್ಲಿ ನಾಚಪ್ಪನವರ ತಂಡ ಪ್ರವೇಶಿದ್ದು ಹೇಗೆ? ಅಲ್ಲದೆ, ಜೆ.ಸಿ.ಬಿ. ಯಂತ್ರಗಳಿಂದ ನೆಲ ಸಮತಟ್ಟು ಮಾಡಿ, ಬೃಹತ್ ಗಾತ್ರದ ಬಂಡೆಗೆ ಸ್ಮಾರಕ ಬಂಡೆ, ಕಂಬಗಳನ್ನು ವಾಹನಗಳಲ್ಲಿ ಸಾಗಿಸಿದ್ದು ಹೇಗೆ?

ಘಟನೆ ವರದಿಯಾದ ನಂತರವಾದರೂ ಅದನ್ನು ತೆರವುಗೊಳಿಸದೇ ಅಲ್ಲೇ ಬಿಟ್ಟಿದ್ದು ಯಾಕೆ? ಬಳಿಕ ಅವರದ್ದು ಅಕ್ರಮ, ಕಾನೂನು ಬಾಹಿರ ಕೃತ್ಯ ಎಂದು ತಿಳಿದಿದ್ದರೂ ಜಾಗದ ಒಡೆತನ ಸರಕಾರದ್ದೇ ಆಗಿರುವುದು, ದಾಖಲೆಗಳೇ ಇರುವಾಗ ನಾಚಪ್ಪನವರಿಗೆ 'ಆ ಜಾಗ ನಿಮ್ಮದು ಎನ್ನಲು ಯಾವ ದಾಖಲೆಗಳಿವೆ. ಇದ್ದರೆ ತಂದು ತೋರಿಸಿ' ಎಂದು 'ನೋಟೀಸ್ ನೀಡಿದ್ದು ಯಾಕೆ? ಒತ್ತಡದ ಬಳಿಕ ಇಲಾಖೆ ತನಿಖೆಗೆ ಆದೇಶಿದ್ದು ಜಿಲ್ಲಾ ಅರಣ್ಯ ಅಧಿಕಾರಿಗಳು ಸೂಕ್ತವಾಗಿ ಪಾಲಿಸಬೇಕಾದ ನಿಯಮಗಳನ್ನು ಪಾಲಿಸದೇ ಅವರ ಕ್ರಮ ಹೈಕೋರ್ಟ್‌ನಲ್ಲಿ ಪ್ರಶ್ನಿಸಲು ಅನುವು ಮಾಡಿಕೊಟ್ಟು ಅಲ್ಲಿ ತಾಂತ್ರಿಕ ಕಾರಣಗಳಿಂದ ರದ್ದುಗೊಳಿಸುವಂತೆ ಮಾಡಿದ್ದು ಯಾಕೆ? ಅಲ್ಲದೇ ಪ್ರಕರಣದ ಗಂಭೀರತೆ ಅರಿತು ಹೈಕೋರ್ಟ್ ಮುಂದೆ ಸರಕಾರದ ವಕೀಲರು ಸಮರ್ಥವಾಗಿ ವಾದ ಮಂಡಿಸಿ ಅಲ್ಲಿದ್ದ ಕಲ್ಲುಗಳನ್ನು ತೆಗೆಸಲಿಲ್ಲ ಯಾಕೆ?

ಈ ಸಂಗತಿಯ ಬಗ್ಗೆ ನಾನು ಸಿಪಿಐ(ಎಂ) ನಿಯೋಗದೊಂದಿಗೆ ಸ್ಥಳಕ್ಕೆ ಭೇಟಿ ನೀಡಿ, ಅದರ ಬಗ್ಗೆ ರಾಜ್ಯ ಗೃಹಮಂತ್ರಿ, ಅರಣ್ಯ ಮಂತ್ರಿಗಳಿಗೆ ವಿವರ ನೀಡಿ ಕ್ರಮವಹಿಸಲು ಕೇಳಿದ್ದರೂ ಅವರು ಮೌನಿಗಳಾಗಿರುವುದು ಯಾಕೆ? ಕೊಡಗಿನ ಅರಣ್ಯಾಧಿಕಾರಿಗಳಾದ ಮನೋಜ್‌ಕುಮಾರ್, ಚೆಂಗಪ್ಪ ಹಾಗೂ ಸಿ.ಎನ್.ಸಿ.ಯ ನಾಚಪ್ಪನವರ ನಡುವೆ ಅಸಹಜ ಹಾಗೂ ಶಾಮೀಲಿನ ಬಾಂಧ್ಯವ್ಯ ಇರುವ ಬಗ್ಗೆ ಸಾರ್ವಜನಿಕವಾಗಿಯೇ ಪ್ರಶ್ನೆಗಳನ್ನು ಎತ್ತಿದ ನಂತರವೂ ಸರಕಾರ ಮೌನವಾಗಿರುವುದೇಕೆ?

ಈ ಸಂಗತಿಗಳೇ ತೋರಿಸುತ್ತವೆ, ಸಂಘ ಪರಿವಾರ ಮತ್ತು ಪ್ರತ್ಯೇಕತಾವಾದಿಗಳ ಕೃತ್ಯಗಳಿಗೆ ಕಾಂಗ್ರೆಸ್‌ನ 'ಜಾತ್ಯಾತೀತ' 'ಅಹಿಂದ' ಸರಕಾರವೇ ಕುಮ್ಮಕ್ಕು ನೀಡಿ ಪ್ರೋತ್ಸಾಹಿಸುತ್ತಿದೆ, ರಕ್ಷಿಸುತ್ತಿದೆ ಎಂಬುದನ್ನು.

ಪಟ್ಟು ಬಿಡದ ಪರಿವಾರ

ಇಷ್ಟಾದ ಮೇಲೆ, ಸಾರ್ವಜನಿಕ ಪ್ರತಿರೋಧ ಬೆಳೆದ ಬಳಿಕವೂ ಈ ಆಗಸ್ಟ್ ಮೊದಲ ವಾರದಲ್ಲಿ ಆರ್‌ಎಸ್‌ಎಸ್‌ನ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್‌ರವರು ಕೊಡಗಿನಲ್ಲಿ ವಿಶೇಷ ಬೈಠಕ್‌ಗಳನ್ನು ನಡೆಸಿದ್ದಾರೆ. 'ಕೊಡವರಿಗೆ ಸ್ಮಾರಕ' ಎಂಬ ನಾಚಪ್ಪನವರ ಬೇಡಿಕೆಗೆ ವಿವಿಧ ಸಮುದಾಯಗಳು ಪ್ರತಿಭಟಿಸಿ, ಬಿಜೆಪಿಯಿಂದ ದೂರ ಸರಿಯುತ್ತಿರುವುದರಿಂದ ತೇಪೆ ಹಾಕಿ ಅವರನ್ನು ಹಿಂದುತ್ವದ ಕಾಲಾಳುಗಳನ್ನಾಗಿಸಲು ಹೊರಟಿದ್ದಾರೆ. ಅವರನ್ನು ಒಳ ಸೆಳೆಯುವ ತಂತ್ರ ಜಾರಿಗೊಳಿಸುವ ಕಸರತ್ತು ಇದಾಗಿತ್ತು. ಅದಕ್ಕಾಗಿ, 'ಕೊಡವರ ಸ್ಮಾರಕ'ದ ಬದಲು 'ಹಿಂದೂ ಸ್ಮಾರಕ' ಎಂದು ಬದಲು ಮಾಡಲು ಭಟ್ಟರು ಪ್ರಸ್ತಾಪ ಇಟ್ಟಿದ್ದಾ–ರೆ. ಹೇಗೂ ಕೊಡವರು ಮುಸ್ಲಿಂರ ವಿರೋಧಿಗಳನ್ನಾಗಿಸಿ ಆಯಿತು. ಇನ್ನೂ ಹಿಂದೂ ಮತ ಕ್ರೋಢೀಕರಣ ಎನ್ನುವ ತಂತ್ರಗಾರಿಕೆ! ಆದರೆ ಇಂತಹ ಪ್ರಸ್ತಾಪಗಳಿಗೆ ಗೌಡ ಭಾಷಿಕರು, ಇತರೆ ಸಮುದಾಯದವರು ಸದ್ಯ ಒಪ್ಪಿಲ್ಲ. ಆದರೆ ಮುಂದೆ? ಬಿಜೆಪಿಗೆ ಪರ್ಯಾಯ ಎಂದು ಹೇಳಿಕೊಳ್ಳುವ ಕಾಂಗ್ರೆಸ್ಸೇ ಶರಣಾಗತಿಯಾಗಿರುವಾಗ ಕೆಲ ವಿಭಾಗಗಳಲ್ಲಿ ಆತಂಕ ಸಹಜ. ಆದರೆ ಜನರ ಪ್ರತಿರೋಧ, ಪರ್ಯಾಯದ ಹೊಸ ರಾಜಕೀಯ ಪ್ರತಿಕ್ರಿಯೆಯಾಗುವ ಅನಿವಾರ್ಯತೆ ಇದೆ.

ಸಿಪಿಐ(ಎಂ) ಮಧ್ಯ ಪ್ರವೇಶ :

ಈ ಒಟ್ಟು ವಿದ್ಯಾಮಾನಗಳು ಕೇವಲ ಕೊಡಗು ಮಾತ್ರವಲ್ಲ ಇಡೀ ದೇಶದಲ್ಲಿ ವ್ಯಾಪಕ ಪರಿಣಾಮ ಬೀರುವಂತಹುದು. ಸ್ಮಾರಕ ರಚಿಸುವುದಿರಲಿ ಅಲ್ಲಿರುವ ಕಲ್ಲುಗಳನ್ನು ಅಲ್ಲೇ ಬಿಟ್ಟು ವಿವಾದದ ಕೇಂದ್ರವೆಂದು ಮಾಡಿದರೂ ಚೆಡ್ಡಿ ಪಡೆ ಅದನ್ನು ಒಂದು ಯಾತ್ರಾ ಸ್ಥಳವನ್ನಾಗಿ ಮಾಡಬಹುದು. ಮೇಲಾಗಿ ಅದು ತಲಕಾವೇರಿ ಬಳಿಯೇ ಇರುವುದು ಸಮಸ್ಯೆಯ ತೀವ್ರತೆಯನ್ನು ಹೆಚ್ಚಿಸುತ್ತದೆ. ಟಿಪ್ಪು ಜಯಂತಿ ಹಾಗೂ ದೇವಟಿ ಪರಂಬು ಘಟನೆಗಳನ್ನು ಸರಿಯಾಗಿ ಗ್ರಹಿಸಿದ ಸಿಪಿಐ(ಎಂ) ಕೊಡಗು ಜಿಲ್ಲೆಯಲ್ಲಿ ಅಂತರ್ಮತೀಯ ಸಂಘರ್ಷ ಹುಟ್ಟು ಹಾಕುವ ಅಪಾಯಕಾರಿ ಪ್ರವೃತ್ತಿಗಳನ್ನು ಖಂಡಿಸಿದೆ. ನಮ್ಮ ನಿಯೋಗ ಅಲ್ಲಿಗೆ ಭೇಟಿ ಮಾಡಿದೆ. ಸರಕಾರಕ್ಕೆ, ಮಂತ್ರಿಗಳಿಗೆ ಆಗ್ರಹಿಸಿದೆ. ಜನರ ಮೂಲ ಸಮಸ್ಯೆಗಳನ್ನು, ಕಾಫಿ ಬೆಳೆಗಾರರಿಗೆ ಕೇಂದ್ರ ಸರಕಾರ ಎಸಗುತ್ತಿರುವ ದ್ರೋಹವನ್ನು ಮರೆಸಲು ಕೋಮುವಾದಿಗಳಿಂದ ಯೋಜಿತ ಯತ್ನಗಳು ನಡೆದಿವೆ. ಇದನ್ನು ಎಲ್ಲಾ ಪ್ರಗತಿಪರ ಸಂಘಟನೆಗಳು, ಜನತೆ ವಿಫಲಗೊಳಿಸಬೇಕಿದೆ.

ಈಗಲಾದರೂ ಸರಕಾರ ಎಚ್ಚೆತ್ತು ಕ್ಷಿಪ್ರವಾಗಿ ಕಾರ್ಯಾಚರಣೆಗೆ ಇಳಿಯುವುದು ಅಗತ್ಯ. ಇಲ್ಲವಾದಲ್ಲಿ ಚುನಾವಣೆಯ ತಂತ್ರದಲ್ಲಿ ಇಳಿದಿರುವ ಬಿಜೆಪಿ ಮತ್ತಷ್ಟೂ ಆಕ್ರಮಣಕಾರಿಯಾಗಿ ವರ್ತಿಸಬಲ್ಲುದು. ಟಿಪ್ಪು ಜಯಂತಿಗೆ ಕರೆ ನೀಡಿ ಕೈ ಕಟ್ಟಿ ಕುಳಿತು ಆಗುವ ಅನಾಹುತಗಳಿಂದ ಲಾಭ ಹೊಡೆಯಲು ಕಾಂಗ್ರೆಸ್ ಯತ್ನಿಸಿದರೆ ಅದ್ಕಕೆ ತಕ್ಕ ಶಾಸ್ತಿ ಕಾದಿದೆ ಎಂದೇ ಅರ್ಥ. ●

ದಲಿತ, ಪ್ರಗತಿಪರರಿಗೆ ಭರವಸೆ ಮೂಡಿಸಿದ
ಉಡುಪಿ ಚಲೋ ಚಳುವಳಿ

ಕರ್ನಾಟಕದಲ್ಲಿ ಇತ್ತೀಚಿನ ದಿನಗಳಲ್ಲಿ ಕೋಮುವಾದಿ ಹಾಗೂ ಬಲಪಂಥೀಯ ಶಕ್ತಿಗಳ ಸಾಮಾಜಿಕ-ರಾಜಕೀಯ-ಆರ್ಥಿಕ ಧೋರಣೆಗಳ ವಿರುದ್ಧ ದಲಿತ, ಎಡ, ಪ್ರಗತಿಪರ, ಸೆಕ್ಯುಲರ್ ಪ್ರಜಾಸತ್ತಾತ್ಮಕ ವ್ಯಕ್ತಿಗಳು, ಶಕ್ತಿಗಳು, ಸಂಘಟನೆಗಳು ಒಗ್ಗೂಡಿದ ಹಲವು ಚಳುವಳಿಗಳು ನಡೆದಿವೆ. ವೇದಿಕೆಗಳು ರೂಪುಗೊಂಡಿವೆ. ಜನನುಡಿ, ಡಾ. ಕಲಬುರ್ಗಿ ಹತ್ಯಾ ವಿರೋಧಿ ಚಳುವಳಿ/ಸಮಿತಿ, ಮೌಢ್ಯಾಚಾರಣೆ-ವಿರೋಧಿ ಕಾನೂನಿಗೆ ಒತ್ತಾಯಿಸಿ ಚಳುವಳಿ – ಕೆಲವು ಉದಾಹರಣೆಗಳು. ಗುಜರಾತಿನ ಉನಾ ಚಳುವಳಿಯಿಂದ ಸ್ಫೂರ್ತಿ ಪಡೆದ ಅಕ್ಟೋಬರ್ 4 ರಿಂದ 9ರ ವರೆಗೆ ನಡೆದ 'ಉಡುಪಿ ಚಲೋ' ಇಂತಹ ಇತ್ತೀಚಿನ ಚಳುವಳಿ. ಈ ಚಳುವಳಿಯ ಸಮಾರೋಪದ ಕಿರು ವರದಿ ಮತ್ತು ಒಂದು ನೋಟ.

ಅಕ್ಟೋಬರ್ 9, 2016 ಕೋಮುವಾದದ ವಿರುದ್ಧ ದಲಿತ, ಪ್ರಗತಿಪರರ ಹೋರಾಟಕ್ಕೆ ಸ್ಫೂರ್ತಿಯಾದ ದಿನ. ಅಂದು 'ಆಹಾರ ನಮ್ಮ ಆಯ್ಕೆ, ಭೂಮಿ ನಮ್ಮ ಹಕ್ಕು' ಎಂಬ ಘೋಷಣೆಯ ಅಡಿಯಲ್ಲಿ ಸಾವಿರಾರು ದಲಿತರು, ವಿದ್ಯಾರ್ಥಿ, ಯುವಜನರು ಪ್ರಗತಿಪರ ಹೋರಾಟಗಾರರು ಉಡುಪಿ ಚಲೋ ಚಳುವಳಿಯ ಸಮಾರೋಪದಲ್ಲಿ ಭಾಗವಹಿಸಿದರು. ಉಡುಪಿಯ ಅಜ್ಜರಕಾಡಿನಿಂದ ಬಸ್‌ಸ್ಟ್ಯಾಂಡ್ ಮಾರ್ಗವಾಗಿ ಬೀಡಿನ ಗುಡ್ಡೆಯಲ್ಲಿರುವ ಬಯಲು ರಂಗದವರೆಗೆ ಆಕರ್ಷಕ ಮೆರವಣಿಗೆಯಲ್ಲಿ ಹೋಗಿ ಸಾರ್ವಜನಿಕ ಸಭೆ ನಡೆಯಿತು. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಕ್ರಾಂತಿಗೀತೆಗಳು ಭಾಗವಹಿಸಿದವರ ಗಮನ ಸೆಳೆಯಿತು. ಆರಂಭದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕುಂದೂರಿನಲ್ಲಿ ದನದ ಮಾಂಸ ಸೇವಿಸಿದ್ದಾರೆಂಬ ಕಾರಣಕ್ಕೆ ಹಲ್ಲೆಗೊಳಗಾದ ಬಾಲರಾಜುರವರು ಮೆರವಣಿಗೆಗೆ ಚಾಲನೆ ನೀಡಿದರು.

ಸಮಾರೋಪ ಸಭೆಯಲ್ಲಿ ಗುಜರಾತಿನ 'ಉನಾ' ಚಳುವಳಿಯ ನೇತಾರ ಜಗ್ನೇಶ್ ಮೇವಾನಿ ಪ್ರಮುಖ ಭಾಷಣಕಾರರಾಗಿದ್ದರು. ಕರಾವಳಿ ಕರ್ನಾಟಕವನ್ನು ಹಿಂದುತ್ವವಾದಿಗಳ ಪ್ರಯೋಗ ಶಾಲೆಯನ್ನಾಗಿ ಮಾಡುತ್ತಿರುವುದನ್ನು ಪ್ರಗತಿಪರರೆಲ್ಲರೂ ತಡೆಯಬೇಕು ಎಂದು ಕರೆ ನೀಡಿದ ಜಗ್ನೇಶ, 2002ರ ಗುಜರಾತ್ ಗಲಭೆಯಲ್ಲಿ ಮುಸ್ಲಿಂರ ಮೇಲೆ ಧಾಳಿ ನಡೆಸಿದಾಗ, ದಲಿತರ ಮೇಲೆ 746 ಮೊಕದ್ದಮೆಗಳು ದಾಖಲಾಗಿವೆ ಎಂದು ಹೇಳಿದರು. ಆದರೆ ಮೇಲ್ಜಾತಿಗೆ ಸೇರಿದ ಹಿಂದೂ ಸಮುದಾಯದವರ ಮೇಲೆ ದಾಖಲಾದ ಮೊಕದ್ದಮೆ 56 ಮಾತ್ರ. ಇದನ್ನು ದಲಿತರು ಅರ್ಥಮಾಡಿಕೊಳ್ಳಬೇಕು" ಎಂದರು. "ಅದಾನಿ, ಅಂಬಾನಿಯವರಿಗೆ ಸಾವಿರಾರು ಎಕ್ರೆ ಭೂಮಿ ಹಂಚುವುದನ್ನು ನಿಲ್ಲಿಸಿ, ಭೂರಹಿತ ದಲಿತರಿಗೆ ನೀಡಬೇಕು" ಎಂದು ಆಗ್ರಹಿಸಿದರು. ಕರ್ನಾಟಕ ಸರಕಾರವು ಹಿಂದುಳಿದ ವರ್ಗ, ಆದಿವಾಸಿ ಹಾಗೂ ದಲಿತರಿಗೆ ಎಷ್ಟು ಭೂಮಿ ನೀಡಿದೆ ಮತ್ತು ಕಾರ್ಪೋರೇಟ್ ಕಂಪೆನಿಗಳಿಗೆ ಎಷ್ಟು ಭೂಮಿ ನೀಡಿದೆ ಎಂಬ ಬಗ್ಗೆ ಶ್ವೇತಪತ್ರ ಹೊರಡಿಸಬೇಕು ಎಂದೂ ಅವರು ಒತ್ತಾಯಿಸಿದರು. ಮುಂದುವರಿದು ಮಾತನಾಡಿದ ಅವರು ಉಡುಪಿ ಕೃಷ್ಣ ದೇವಸ್ಥಾನದಲ್ಲಿ ಜಾತಿ ಭೇದದ ಪಂಕ್ತಿಭೇದದ ಪದ್ಧತಿಯನ್ನು ಕೊನೆಗಾಣಿಸಬೇಕು, ಇಲ್ಲವಾದಲ್ಲಿ ಎರಡು ತಿಂಗಳ ಬಳಿಕ ತೀವ್ರ ಪ್ರತಿಭಟನೆಯನ್ನು ನಡೆಸಲಾಗುವುದೆಂದು ಎಚ್ಚರಿಸಿದರು. ಅದಕ್ಕಾಗಿ ತಾನು ಜೈಲು ಸೇರಲು ಸಿದ್ಧನಾಗಿಯೇ ಬರುವುದಾಗಿ ಘೋಷಿಸಿದರು.

ಉಡುಪಿಯ ಡಿ.ಎಸ್.ಎಸ್. ಮುಖಂಡರಾದ ಹಾಗೂ ಸ್ವಾಭಿಮಾನಿ ಸಂಘರ್ಷ ಸಮಿತಿಯ ಸಂಚಾಲಕರಾದ ಸುಂದರ್ ಮಾಸ್ತರ್ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಇನ್ನೋರ್ವ ಸಂಚಾಲಕ ಶ್ಯಾಮರಾಜ್ ಬಿರ್ತಿ, ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ದಿನೇಶ್ ಅಮೀನ್ ಮತ್ತು ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್. ದ್ವಾರಕನಾಥ್, ಡಿ.ಎಸ್.ಎಸ್. ಮುಖಂಡ ಜಯನ್ ಮಲ್ಪೆ, ಡಿ.ವೈ.ಎಫ್.ಐ. ರಾಜ್ಯ ಅಧ್ಯಕ್ಷರಾದ ಮುನೀರ್ ಕಾಟಿಪಳ್ಳ ಮತ್ತಿತರರು ಇದ್ದರು. ಈ ಜಾಥಾದ ಪ್ರಮುಖರಲ್ಲಿ ಒಬ್ಬರಾದ ಅನಂತ ನಾಯಕ್ ಮಾತನಾಡಿ "2012ರಲ್ಲಿ ಪಂಕ್ತಿ ಭೇದದ ವಿರುದ್ಧ ಉಡುಪಿಯ ಶ್ರೀಕೃಷ್ಣ ಮಠದ ಎದುರಿನಲ್ಲಿ ಪೊಲೀಸ್ ದೌರ್ಜನ್ಯ ಎದುರಿಸಿ, ಸಿ.ಪಿ.ಐ.(ಎಂ.) ನಡೆಸಿದ ಹೋರಾಟವನ್ನು ಶ್ಲಾಘಿಸಿದರು. ಅಂದು ನೀಡಿದ್ದ ಎಚ್ಚರಿಕೆಯನ್ನು ಆಡಳಿತ ನಿರ್ಲಕ್ಷಿಸಿರುವುದು ಖಂಡನೀಯ ಎಂದರು.



ಅಕ್ಟೋಬರ್ 4 ರಂದು ಬೆಂಗಳೂರಿನಲ್ಲಿ ಮಾಜಿ ಅಡ್ವೋಕೇಟ್ ಜನರಲ್ ಪ್ರೊ.ರವಿವರ್ಮ ಕುಮಾರ್‌ರವರಿಂದ ಉದ್ಘಾಟನೆಗೊಂಡ ಜಾಥಾವು (ಜನಶಕ್ತಿ ಹಿಂದಿನ ಸಂಚಿಕೆ 42ನ್ನು ನೋಡಿ) ತುಮಕೂರು, ಹಾಸನ, ಚಿಕ್ಕಮಗಳೂರು ಜಿಲ್ಲೆಯ ವಿವಿಧ ನಗರಗಳನ್ನು ಹಾದು ಅಕ್ಟೋಬರ್ 7ರ ಮಧ್ಯರಾತ್ರಿ ಉಡುಪಿಯನ್ನು ತಲುಪಿತು.

ಅಕ್ಟೋಬರ್ 8 ರಂದು ದನ ಸಾಗಾಟ ಮಾಡುತ್ತಿದ್ದನೆಂದು ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತರಿಂದ ಹತ್ಯೆಗೀಡಾದ ಬಿಜೆಪಿ ಕಾರ್ಯಕರ್ತ ಪ್ರವೀಣ್ ಪೂಜಾರಿ ಮನೆಗೆ ಜಾಥಾ ತಂಡದ ಸದಸ್ಯರು ಭೇಟಿ ನೀಡಿ ಕುಟುಂಬಕ್ಕೆ ಸಾಂತ್ವನ ಹೇಳಿದರು. ಕುಟುಂಬವಿಡೀ ಇನ್ನೂ ದುಃಖದ ಮಡುವಿನಲ್ಲೇ ಇದೆ. ತನ್ನ ಮಗನ ಮೇಲಿನ ಸುಳ್ಳು ಆರೋಪಗಳಿಂದ ಬೆಂದು ಬಸವಳಿದಿದೆ. ಮಗ ನಡೆಸುತ್ತಿದ್ದ ಚಿಲ್ಲರೆ ಅಂಗಡಿಯನ್ನು ತಾಯಿಯೇ ನಡೆಸುತ್ತಿರುವುದು, ಕುಟುಂಬದ ಸಂಕಷ್ಟತನಕ್ಕೆ ಹಿಡಿದ ಕನ್ನಡಿಯಾಗಿತ್ತು.

ಯುವಜನರ ಭಾಗವಹಿಸುವಿಕೆ:

ಉಡುಪಿ ಚಲೋ ಕಾರ್ಯಕ್ರಮದ ಒಟ್ಟು ತಯಾರಿ, ಭಾಗವಹಿಸುವಿಕೆ ಇತ್ಯಾದಿಯಲ್ಲಿ ಯುವಕ, ಯುವತಿಯರು ದೊಡ್ಡ ಪ್ರಮಾಣದಲ್ಲಿ ತೊಡಗಿಸಿಕೊಂಡಿದ್ದರು ಎಂಬುದನ್ನು ಗಮನಿಸಬೇಕು. ಇವರಲ್ಲಿ ದಲಿತರು, ಮುಸಲ್ಮಾನರು, ಹಿಂದುಳಿದವರು, ದಲಿತ-ಬಡವರ ಪರವಾಗಿರುವ ಮೇಲ್ಜಾತಿಯವರು- ಹೀಗೆ ಎಲ್ಲರೂ ಇದ್ದರು. ಉತ್ತಮ ಹಾಡುಗಳ ಹೊಸ ಕವನಗಳ ಸೃಷ್ಟಿಯಾಯಿತು. ಈ ಯುವಜನರು ವಿದ್ಯಾರ್ಥಿ, ಯುವಜನರಿರುವ ಹಾಸ್ಟೆಲ್, ಮೊಹಲ್ಲಾಗಳಿಗೆ ಭೇಟಿ ನೀಡಿ ಚರ್ಚೆ ನಡೆಸಿದರು. ಮೆರವಣಿಗೆ, ಸಭೆಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸಿದರು. ಆದರೂ ಸ್ಥಳೀಯರ ಭಾಗವಹಿಸುವಿಕೆ ಇನ್ನೂ ಹೆಚ್ಚಿರಬೇಕಿತ್ತು.

ಸಾಮಾಜಿಕ ಮಾಧ್ಯಮಗಳ ಸೂಕ್ತ ಬಳಕೆ:

ಸಮಾಜದಲ್ಲಿ ಹೊಸ ವಿದ್ಯಾವಂತ ಮಧ್ಯಮ ವರ್ಗವೊಂದು ಸೃಷ್ಟಿಯಾಗಿದೆ. ಅವರೆಲ್ಲ ಬಹುತೇಕ ಬಡವರ್ಗ ಹಿನ್ನೆಲೆಯಿಂದ ಬಂದವರು. ಆದರೆ ಶಿಕ್ಷಣ, ಉದ್ಯೋಗದ ಮೂಲಕ ಒಂದಿಷ್ಟು ಆದಾಯ ಗಳಿಸುತ್ತಿರುವವರು. ಈ ವಿಭಾಗ ಬದಲಾವಣೆ ಬಯಸುತ್ತಿದೆ. ಆದರೆ ಇವರೆಗೆ ಯಾವುದೇ ಚಳುವಳಿ/ಸಂಘಟನೆಗಳ ಚೌಕಟ್ಟಿಗೆ ನಿಲುಕದವರು ಅಥವಾ ಆ ಕಟ್ಟುಪಾಡುಗಳಿಗೆ ಒಳಪಡಲು ಇಷ್ಟವಿಲ್ಲದವರು ಇದ್ದಾರೆ. ಇವರು ಸಾಮಾಜಿಕ ಮಾಧ್ಯಮಗಳಲ್ಲಿ ಸಕ್ರಿಯರಾಗಿದ್ದಾರೆ. ಅಲ್ಲಿ ಬರುವ ಪ್ರಗತಿಪರ ಚಿಂತನೆಗಳಿಗೆ ಪ್ರತಿಕ್ರಿಯೆ ನೀಡುವರು, ಪ್ರೇರಿತರಾಗುವರು. ಉಡುಪಿ ಚಲೋ ಕಾರ್ಯಕ್ರಮದಲ್ಲಿ ಈ ವಿಭಾಗ ಭಾಗವಹಿಸಿ ಬಹುಶಃ ಮೊದಲ ಬಾರಿಗೆ ಬೀದಿಗಿಳಿದಿದೆ. ಇದು ಒಂದು ಸಕಾರಾತ್ಮಕ ಬೆಳವಣಿಗೆ.



ಒಟ್ಟು 16 'ವ್ಯಾಟ್ಸಪ್' ಗುಂಪುಗಳನ್ನು ಮಾಡಲಾಗಿದ್ದು, ಸುಮಾರು 4 ಸಾವಿರ ಜನರನ್ನು ತಲುಪಲಾಗಿದೆ. ಈ ಗುಂಪುಗಳಲ್ಲಿ ಚರ್ಚೆ ನಡೆದಿದೆ. ಬೇರೆ ಗುಂಪುಗಳಿಗೆ 'ಶೇರ್' ಮಾಡಿದ್ದಾರೆ. 'ಲೈಕ್' ಮಾಡಿದ್ದಾರೆ. ಇದರಿಂದಲೂ ಚಳುವಳಿಯ ಪರವಾಗಿ ಸಾಕಷ್ಟು ಜನರನ್ನು ಪ್ರೇರೇಪಿಸಲು ಸಾಧ್ಯವಾಗಿದೆ.

ಸಮಾರೋಪದ 5 ಪ್ರಮುಖ ನಿರ್ಣಯಗಳು:

1) ಬಡವರ ಆಹಾರದ ಹಕ್ಕು ರಕ್ಷಣೆಯಾಗಬೇಕು. ಗೋರಕ್ಷಣೆ ಹೆಸರಿನ ಗೂಂಡಾಗಿರಿಯನ್ನು ನಿಷೇಧಿಸಬೇಕು.
2) ದಲಿತ-ದಮನಿತರಿಗೆ ಭೂಮಿ ಹಂಚಬೇಕು.
3) ಮೀಸಲಾತಿ ನಿಯಮ ಖಾಸಗಿಕ್ಷೇತ್ರಕ್ಕೂ ಅನ್ವಯವಾಗಬೇಕು. ಸಾರ್ವಜನಿಕ ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ನೀತಿ ಘೋಷಣೆಯಾಗಬೇಕು.
4) ಎರಡು ತಿಂಗಳಲ್ಲಿ ದಲಿತರಿಗೆ ಭೂಮಿ ನೀಡದಿದ್ದರೆ ವಿಧಾನಸೌಧಕ್ಕೆ ಮುತ್ತಿಗೆ.
5) ಉಡುಪಿ ಕೃಷ್ಣ ದೇವಸ್ಥಾನದಲ್ಲಿ ನಡೆಯುತ್ತಿರುವ ಪಂಕ್ತಿಭೇದ ನಿಲ್ಲಿಸಬೇಕು. ಇಲ್ಲದಿದ್ದರೆ ಮಠಕ್ಕೆ ಮುತ್ತಿಗೆ.

ಎಡ ಸಾಮೂಹಿಕ ಸಂಘಟನೆಗಳ. ಭಾಗವಹಿಸುವಿಕೆ:

ಎಡ ಸಾಮೂಹಿಕ ಸಂಘಟನೆಗಳ ಸಾಕಷ್ಟು ಕಾರ್ಯಕರ್ತರು ನಾಯಕರು ಮೆರವಣಿಗೆ ಮತ್ತು ಸಭೆಯಲ್ಲಿ ಭಾಗವಹಿಸಿದ್ದಾರೆ. ದೂರದೂರದ ಜಿಲ್ಲೆಗಳಿಂದ ದಲಿತ ಚಳುವಳಿಯ ಕಾರ್ಯಕರ್ತರು ಮುಖಂಡರೊಂದಿಗೆ ಕೆಲವರು ಬಂದಿದ್ದರೆ, ಸ್ವತಂತ್ರವಾಗಿ ಅನೇಕರು ಬಂದಿದ್ದರು. ಜಾಥಾದಲ್ಲಿ ಸಿ.ಪಿ.ಐ.ಎಂ. ರಾಜ್ಯ ಸಮಿತಿ ಸದಸ್ಯ ಎಸ್. ವೈ. ಗುರುಶಾಂತ್ ಮತ್ತಿತರರು ಜೊತೆಗೂಡಿದ್ದರು. ವಿವಿಧ ಹಂತಗಳ ಕಾರ್ಯಕ್ರಮಗಳಲ್ಲಿ ಜಿ.ಎನ್.ನಾಗರಾಜ್, ಬಾಲಕೃಷ್ಣಶೆಟ್ಟಿ, ಕೆ.ಎಸ್.ಲಕ್ಷ್ಮಿ, ಮುಜೀಬ್, ಬಿ.ರಾಜಶೇಖರಮೂರ್ತಿ, ಕೆ.ಎನ್.ಉಮೇಶ್, ಕೆ.ಮಹಂತೇಶ್, ಧರ್ಮೇಶ್, ನವೀನ್‌ಕುಮಾರ್, ಬಿ.ಎಸ್.ಸೋಫಿನ್ ಕೆ.ಎಸ್.ವಿಮಲಾ, ಗೌರಮ್ಮ, ಕೆ.ನೀಲಾ, ಎಸ್.ಸತ್ಯಾ ಮುಂತಾದವರು ಪಾಲ್ಗೊಂಡಿದ್ದರು. ಜಾಥಾದ ಹಾದಿಯುದ್ದಕ್ಕೂ ಸ್ವಾಗತಿಸುವಲ್ಲಿ ಎಡ ಸಾಮೂಹಿಕ ಸಂಘಟನೆಗಳು ಪಾಲ್ಗೊಂಡಿವೆ.

ನೀಲಿ-ಕೆಂಪು ಬಾವುಟ

ಒಟ್ಟಾರೆಯಾಗಿ ದಲಿತರು, ಎಡಪಂಥೀಯರು, ಪ್ರಗತಿಪರರು ಒಂದಾಗಿ, ಭೂಮಿಯ ಹಕ್ಕಿಗಾಗಿ, ಆಹಾರದ ಸ್ವಾತಂತ್ರ್ಯಕ್ಕಾಗಿ, ಕೋಮುವಾದ, ಜಾತಿ ತಾರತಮ್ಯದ ವಿರುದ್ಧ ಹೋರಾಟ ನಡೆಸಬೇಕೆಂಬ ಕಳಕಳಿ ಸಭೆಯಲ್ಲಿ ಮಾತನಾಡಿದ ಎಲ್ಲರ ಭಾಷಣಗಳಲ್ಲಿಯೂ ವ್ಯಕ್ತವಾಗಿದೆ. ಎಲ್ಲ ಬಣ್ಣದ ಬಾವುಟಗಳು ಒಂದಾಗಬೇಕೆಂದು ಜಿಗ್ನೇಶ್ ಮೇವಾನಿ ಕೂಡಾ ಹೇಳಿದರು. ಆದರೆ 'ಹೂ ಚೆಲ್ಲಿ' ಸ್ವಾಗತ ಕೋರುತ್ತಿದ್ದ ಸಿ.ಐ.ಟಿ.ಯು. ಕಾರ್ಯಕರ್ತರೊಂದಿಗೆ ಮಾತಿನ ಚಕಮಕಿ ನಡೆಸಿದ ಕೆಲವು ವ್ಯಕ್ತಿಗಳು ಬಾವುಟವನ್ನು ಮಡಚಿ ಇಡುವಂತೆ ಒತ್ತಾಯಿಸಿದರು. "ನಾವು ಮೆರವಣಿಗೆಯಲ್ಲಿ ಬರುವಾಗ ಸಿ.ಐ.ಟಿ.ಯು. ಬಾವುಟ ತರುವುದಿಲ್ಲ. ಸ್ವಾಗತ ಕೋರಲು ಮಾತ್ರ ಬಳಸುತ್ತೇವೆ" ಎಂದು ಹೇಳಿದರೂ ಕೇಳಲಿಲ್ಲ. ಏಕ ಸಂಸ್ಕೃತಿಯ ವಿರುದ್ಧ ಹೋರಾಡುವವರು, ಬೇರೆ ಬಾವುಟಗಳೇ ಕಣ್ಣಿಗೆ ಕಾಣಕೂಡದು ಎಂದು ಆಗ್ರಹಿಸುವುದು ಎಷ್ಟು ನ್ಯಾಯ ಎಂದು ಜನರು ಆಡಿಕೊಳ್ಳುತ್ತಿದ್ದರು. ಸೆಪ್ಟೆಂಬರ್ 2ರ ಮುಷ್ಕರದಲ್ಲಿ ಎಲ್ಲ ಬಣ್ಣದ ಬಾವುಟಗಳು ಒಂದೆಡೆ ಸೇರಿರುವುದರಿಂದಲೇ 18 ಕೋಟಿ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸುವಂತಾಯಿತು ಎಂಬುದನ್ನು ಮರೆಯಲು ಸಾಧ್ಯವಿಲ್ಲ.

'ಆಹಾರ ನಮ್ಮ ಆಯ್ಕೆ, ಭೂಮಿ ನಮ್ಮ ಹಕ್ಕು' ಎಂಬುದು ಸರಿಯಾದ ಘೋಷಣೆ. ಬಹುಶಃ ಕರ್ನಾಟಕದಲ್ಲಂತೂ ದಲಿತ ಚಳುವಳಿ, ಸಾಮಾಜಿಕದೊಂದಿಗೆ ದೈನಂದಿನ ಬದುಕಿನ ಮತ್ತು ಆರ್ಥಿಕ ಪ್ರಶ್ನೆಗಳನ್ನು ಮೊದಲ ಬಾರಿ ಎತ್ತಿಕೊಳ್ಳುತ್ತಿರುವುದರ ಶುಭಸೂಚನೆ. ಆದರೆ ಒಂದೇ ಉದ್ದೇಶವುಳ್ಳವರಲ್ಲಿ ಬಾವುಟ ನಮ್ಮ ಆಯ್ಕೆ ಯಾಕಾಗಬಾರದು? ಅದರಿಂದ ಅಂಬೇಡ್ಕರ್‌ರವರಿಗೆ ಅಗೌರವ ತೋರಿದಂತಾಗುವುದಿಲ್ಲ. ಬದಲಾಗಿ ಚಳುವಳಿಯನ್ನು ಇನ್ನಷ್ಟು ಬಲಿಷ್ಠಗೊಳಿಸಲು ಸಾಧ್ಯವಾಗುತ್ತದೆ. ಎಲ್ಲಾ ದಲಿತ, ಎಡ, ಪ್ರಗತಿಪರ, ಪ್ರಜಾಸತ್ತಾತ್ಮಕ, ಸೆಕ್ಯುಲರ್ ವ್ಯಕ್ತಿ, ಶಕ್ತಿ, ಸಂಘಟನೆಗಳು ಒಟ್ಟಾಗಿ ಪ್ರಬಲ ಬಲಪಂಥೀಯ ದಾಳಿ ಎದುರಿಸುವ ಅಗತ್ಯ ಇರುವಾಗ ಇಂತಹ ಧೋರಣೆ ಸೂಕ್ತವಲ್ಲ.

ಆದ್ದರಿಂದ ನೀಲಿ ಬಾವುಟ ಮಾತ್ರವೇ ಇರಬೇಕೆಂದು ಆದೇಶ ಮಾಡಿದ ಸಂಘಟಕರು, ಬೇರೆ ಬಣ್ಣದ ಬಾವುಟಗಳೂ ಜತೆಯಾದಲ್ಲಿ ಅದರ ವ್ಯಾಪಕತೆ ಹೆಚ್ಚುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಈ ಬಗ್ಗೆ ಹಿಂದೆ ಹಲವು ಬಾರಿ ಅನುಭವ ಹಂಚಿಕೊಳ್ಳುವ ಚರ್ಚೆಯನ್ನು ಮಾಡಲಾಗಿತ್ತು ಕೂಡ. ಒಂದೇ ಉದ್ದೇಶವುಳ್ಳ ವಿವಿಧ ಶಕ್ತಿಗಳ ಒಂದಾಗುವಿಕೆಯಿಂದ ಸಂಕುಚಿತತೆಯ ಗೋಡೆ ಒಡೆದು ವಿಶಾಲತೆ ಪ್ರಾಪ್ತವಾಗುವುದು. ಭಿನ್ನ ಅಭಿಪ್ರಾಯಗಳೂ ಕೂಡ ಪ್ರಜಾಸತ್ತಾತ್ಮಕ ಸಂವಾದದಲ್ಲಿ ಹೊಸ ಅರಿವು, ಸ್ವರೂಪ ಪಡೆಯಲು ಸಾಧ್ಯ.

ಕೇಳಿಸಿದ್ದು

ಹೇಗೆ ಗುಜರಾತಿನ ನಮ್ಮ ದಲಿತ, ಆದಿವಾಸಿ, ಹಿಂದುಳಿದವರ ಕೇಸರೀಕರಣ ಆಯಿತು. ಅದರ ಪರಿಣಾಮ 2002ರ ಗುಜರಾತ್ ದಂಗೆಯಲ್ಲಿ ನಮ್ಮ ಸಮುದಾಯದ ಕೆಲವರು ಅವರುಗಳ ಭೂಮೆಯಲ್ಲಿ ಭಾಗಿಯಾಗಿ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯಗಳ ಮೇಲೆ ದಾಳಿಗಳನ್ನು ನಡೆಸಿದರು. ಆದರೆ ಆ ದಂಗೆಯ ನಂತರ ಆದ ಬಂಧನಗಳಲ್ಲಿ ಇಬ್ಬರು ಬ್ರಾಹ್ಮಣ ಮತ್ತು ನಾಲ್ವರು ಬನಿಯಾ ಸೇರಿದಂತೆ ಒಟ್ಟು ಕೇವಲ 27 ಮಂದಿ ಮೇಜ್ಜಾತಿಯ ಜನರ ಬಂಧನವಾಗಿದೆ. ಆ ದಂಗೆಗಳ ನಿಜವಾದ ಬಲಿಪಶುಗಳು ದಲಿತ ಆದಿವಾಸಿ ಮತ್ತು ಮುಸ್ಲಿಂ ಸಮುದಾಯಗಳ ಜನರು ಆಗಿದ್ದರೂ ಸಹ, 746 ಜನ ದಲಿತರನ್ನು ಜೈಲಿಗೆ ಹಾಕಲಾಗಿದೆ ಮತ್ತು ಹಿಂದುಳಿದ ವರ್ಗದ 797 ಜನರನ್ನು ಜೈಲಿನಲ್ಲಿ ತಳ್ಳಲಾಯಿತು. ಅವರ ಒಟ್ಟು ಯೋಜನೆಯ ನೀಲನಕ್ಷೆ ಹೇಗಿದೆ ಎಂದರೆ 2002 ರ ದಂಗೆಯ ಆರೋಪಿಗಳಾಗಿ ಮೇಲ್ಜಾತಿಯ ಕೇವಲ 27 ರಿಂದ 30 ಜನರನ್ನು ಜೈಲಿಗೆ ಕಳುಹಿಸಿದ್ದರೆ, ಹಿಂದುಳಿದ ಮತ್ತು ದಲಿತ ಸಮುದಾಯಕ್ಕೆ ಸೇರಿದ ಸುಮಾರು 1500ಕ್ಕೂ ಹೆಚ್ಚು ಜನರನ್ನು ಜೈಲಿಗೆ ತಳ್ಳಲಾಗಿದೆ. ಇವರ ಈ ರಾಜಕೀಯ ತಂತ್ರವನ್ನು ಅರ್ಥಮಾಡಿಕೊಳ್ಳದಿದ್ದರೆ ಒಂದಲ್ಲ ಒಂದು ದಿನ ನಮಗೂ ಇದೇ ಗತಿ ಆಗಲಿದೆ.

– ಜಿಗ್ನೇಶ್ ಮೇವಾನಿ

ಅತಿಥಿ ಅಂಕಣ



ಪ್ರೊ. ವಿ.ಎನ್. ಲಕ್ಷ್ಮಿನಾರಾಯಣ

ಕಳೆದ 25 ವರ್ಷಗಳ 'ಚಿಂತನಾ ವಿನ್ಯಾಸ ಪಲ್ಲಟ'

ಅದರ ಅರ್ಥ ಇಷ್ಟೆ: ಪ್ರತಿಯೊಂದು ತಾತ್ವಿಕ ಪರಿಕಲ್ಪನೆಯನ್ನೂ ಜಾಗತಿಕ ಬಂಡವಾಳದ ಆಶಯವನ್ನು ಬಿಂಬಿಸುವಂತೆ ಮರುವ್ಯಾಖ್ಯಾನ ಮಾಡುವುದು. ಅನ್ಯಾಯವನ್ನು ಕಾನೂನುಬದ್ಧಗೊಳಿಸಿ ನ್ಯಾಯವೆಂದು ಹೇಳುವುದು. ಎಲ್ಲ ಬಗೆಯ ಅಕ್ರಮಗಳನ್ನು ಸಕ್ರಮಗೊಳಿಸುವುದು. ಅನೈತಿಕತೆಗೆ ನೀತಿಯನ್ನು ಹೊಂದಿಸಿ ತಾತ್ವೀಕರಿಸುವುದು. ಮಾನವೀಯ ಆಸಕ್ತಿ, ಅನುಕಂಪ, ಕರುಣೆಗಳನ್ನು ಕೆಳಗೆ ಹಾಕಿ ಸ್ವಕೇಂದ್ರಿತ ಹಿತಾಸಕ್ತಿಯನ್ನು ವೈಭವೀಕರಿಸಿ ವೃತ್ತಿ ಧರ್ಮವೆಂದು ಸಾರುವುದು. ಸ್ವಾರ್ಥಪರತೆಯನ್ನು ಸಾರ್ಥಕ ಬದುಕೆಂದು, ಅಸಾಮಾಜಿಕತೆಯನ್ನು ಬುದ್ಧಿವಂತಿಕೆಯೆಂದು ನಿರ್ವಚಿಸುವುದು. ಪೂರ್ಣ ಚಿತ್ರವನ್ನು ಮರೆಮಾಚಿ ಆಂಶಿಕ ಚಿತ್ರವನ್ನು ಸಾಂದರ್ಭಿಕ ಅನುಕೂಲಕ್ಕೆ ತಕ್ಕಂತೆ ತೋರಿಸಿ ಅದೇ ಇಡೀ ಚಿತ್ರವೆಂದು ನಂಬಿಸುವುದು. ತಪ್ಪು-ಸರಿ, ಒಳ್ಳೆಯದು-ಕೆಟ್ಟದ್ದು, ನ್ಯಾಯ-ಅನ್ಯಾಯ, ಉದ್ಯೋಗ-ನಿರುದ್ಯೋಗ, ಬಡತನ-ಸಿರಿತನ, ನೀತಿ-ಅನೀತಿ, ಧರ್ಮ-ಅಧರ್ಮ, ಮಾನವೀಯತೆ-ಅಮಾನವೀಯತೆ, ಮುಂತಾದ ದ್ವಂದ್ವಾತ್ಮಕ ವಿಭಾಗಗಳ ನಡುವಿನ ಗೆರೆಗಳನ್ನು ಅಳಿಸಿಹಾಕುವಂಥ, ಇಲ್ಲವೆ ಮಸುಕುಗೊಳಿಸುವಂತೆ ಸಂಕೀರ್ಣಗೊಳಿಸಿದ ಧೂರ್ತ ವಾದಗಳನ್ನು ತರ್ಕಬದ್ಧವಾಗಿ ಮಂಡಿಸಿ ಜನರ ಯೋಚನಾಲಹರಿಯಲ್ಲೇ ಗೊಂದಲ ಹುಟ್ಟಿಸುವುದು.

ನ್ಯಾಯ, ನೀತಿ, ಧರ್ಮ ಮತ್ತು ಮಾನವೀಯ ಸಂಬಂಧಗಳು ಯಾವುದೇ ನಾಗರಿಕ ಸಮಾಜದ ತಳಹದಿ. ಇವು ಇಲ್ಲದ ಸಮಾಜ ಅನಾಗರಿಕ ಸಮಾಜ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಬಿಳಿಯರು, ಮತ್ತು ಕುಲೀನರು 'ಅನಾಗರಿಕ'ರೆಂದು ಕರೆಯುವ ಕರಿಯರು, ಆದಿವಾಸಿಗಳು, ವಿವಿಧ ಪ್ರದೇಶಗಳ ಮೂಲ ನಿವಾಸಿಗಳು, ಹಿಂದುಳಿದವರು, ಅಶಿಕ್ಷಿತರು, ಬಡವರು, ಮತ್ತು ಹಳ್ಳಿಗಾಡಿನ ಜನರಲ್ಲಿ ನಿಜವಾದ ನ್ಯಾಯ, ನೀತಿ, ಧರ್ಮ ಮತ್ತು ಮಾನವೀಯ ಸಂಬಂಧಗಳು ಇವೆ. ಹಾಗಿದ್ದರೂ ಅವನ್ನು 'ನಾಗರಿಕ ಸಮಾಜ' ದ ಶಿಷ್ಟರು, ವಿದ್ಯಾವಂತರೆನಿಸಿಕೊಂಡವರು, ಒಪ್ಪುವುದಿಲ್ಲ. ಅಂದಮೇಲೆ ಯಾವುದು ನ್ಯಾಯ? ಯಾವುದು ನೀತಿ? ಯಾವುದು ಧರ್ಮ? ಮತ್ತು ಮಾನವೀಯ ಸಂಬಂಧಗಳೆಂದರೆ ಯಾವುವು? ಇವನ್ನು ಸರಿ ಅಥವ ತಪ್ಪೆಂದು ಯಾರು ಹೇಗೆ ನಿರ್ಧರಿಸುತ್ತಾರೆ?

ಆಳುವವರ ಮತ್ತು ಆಳಿಸಿಕೊಳ್ಳುವವರ ನ್ಯಾಯ-ನೀತಿ ಬೇರೆಯೆ?

ಜಗತ್ತಿಗೇ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಲಿಸಿದರೆಂದು ನಂಬುವ ಬ್ರಿಟಿಷರು ತಮ್ಮ ಆಡಳಿತಕ್ಕೆ ಒಳಪಟ್ಟ ಭಾರತೀಯರನ್ನು ಹುಳುಗಳೆಂಬಂತೆ ನಡೆಸಿಕೊಳ್ಳುತ್ತಿದ್ದುದನ್ನು ಅವರ ಯಾವ ನ್ಯಾಯಾಲಯವೂ ಅನ್ಯಾಯವೆಂದು ಪರಿಗಣಿಸುತ್ತಿರಲಿಲ್ಲ.

ಬ್ರಿಟಿಷ್ ಸಂಜಾತರೇ ಆದ ಕ್ರೂರ ವ್ಯಾಪಾರಿಗಳು ಆಫ್ರಿಕನರನ್ನು ಹಡಗುಗಳಲ್ಲಿ ತುಂಬಿಕೊಡು ಬಂದು ಅಮೆರಿಕದ ಬಿಳಿಯ ಶ್ರೀಮಂತರಿಗೆ ಮಾರಾಟಮಾಡುವುದು, ಆ ಕಾಲದ 'ನಾಗರಿಕ' ಸಮಾಜದ ನ್ಯಾಯ, ನೀತಿ, ಧರ್ಮ ಮತ್ತು ಮಾನವೀಯ ಸಂಬಂಧಗಳಿಗೆ ಅನುಸಾರವಾಗಿಯೇ ಇತ್ತು.

ಎಲ್ಲರೂ ಆಧ್ಯಾತಿಕವಾಗಿ ಸಮಾನರೆಂದು ಸಾರುವ ಬ್ರಾಹ್ಮಣಧರ್ಮವನ್ನು ಆಧರಿಸಿದ ವಿವಿಧ ಹಿಂದೂ ಮತಧರ್ಮಗಳಿಗೆ ಸೇರಿದ ರಾಜರು, ಪಾಳೆಯಗಾರರು, ಧರ್ಮಗುರುಗಳು ವರ್ಣವ್ಯವಸ್ಥೆಯ ಶ್ರೇಣೀಕರಣದಲ್ಲಿ ಕೆಳಜಾತಿಯ ಜನರೆನಿಸಿಕೊಂಡವರನ್ನು, ಬಡವರನ್ನು ಮತ್ತು ಹೆಂಗಸರನ್ನು ಗುಲಾಮರಿಗಿಂತ ಹೀನವಾಗಿ, ಪ್ರಾಣಿಗಳಿಗಿಂತ ಕಡೆಯಾಗಿ ನಡೆಸಿಕೊಳ್ಳುತ್ತಿದ್ದುದು, ಈಗಲೂ ನಡೆಸಿಕೊಳ್ಳುತ್ತಿರುವುದು ಅವರ ಪ್ರಕಾರ 'ಸರಿ'ಯಾಗಿಯೇ ಇದೆ.

ವಿಶ್ವ ಭ್ರಾತೃತ್ವವನ್ನು ಸಾರುವ ಇಸ್ಲಾಂ ಧರ್ಮವನ್ನು ರಾಷ್ಟ್ರೀಯವಾಗಿ ಅಧಿಕೃತ ಧರ್ಮವೆಂದು ಅನುಸರಿಸುವ ದೇಶಗಳಲ್ಲಿ ಬಡವರು-ಶ್ರೀಮಂತರ ನಡುವೆ ಇರುವ ಸಾಮಾಜಿಕ ಮತ್ತು ಆರ್ಥಿಕ ಅಂತರ ನ್ಯಾಯಸಮ್ಮತವೆಂದೆ ಆ ಸಮಾಜಗಳ ಧರ್ಮಗುರುಗಳು ಮತ್ತು ಆಳುವ ವರ್ಗದ ಜನ ನಂಬುತ್ತಾರೆ.

ಎಲ್ಲರೂ ಸ್ವರ್ಗದಲ್ಲಿರುವ ದೇವರ ಮಕ್ಕಳೇ ಎಂದು ನಂಬುವ ಯಹೂದಿಗಳಿಗೆ, ಕ್ರೈಸ್ತರಿಗೆ, ಭೂಮಿಯ ಮೇಲಿರುವ ಎಲ್ಲರಿಗೂ ಸೇರಿದ ಜೀವನಾವಶ್ಯಕ ವಸ್ತುಗಳ ಒಡೆತನ ಕೆಲವೇ ಜನರ ಕೈಲಿರುವುದು, ಜಗತ್ತಿನ ಬಹುತೇಕ ಜನರು ಎರಡು ಹೊತ್ತಿನ ಕೂಳಿಗೂ ಪಡಬಾರದ ಯಾತನೆ ಪಡುವುದು ದಯಾಮಯನಾದ ದೇವರ ಇಚ್ಛೆಗೆ ಅನುಸಾರವಾಗಿಯೇ ಇದೆ ಎಂದು ತೋರುತ್ತದೆ. ತಾವು ಉಳ್ಳವರಾಗಿದ್ದುಕೊಂಡು ಇಲ್ಲದವರ ಬಗ್ಗೆ ದಯೆ, ಕರುಣೆ ಅನುಕಂಪಗಳನ್ನು ಇಟ್ಟುಕೊಂಡರೆ ಅವು ಅವರಿಗೆ ಆದರ್ಶಪ್ರಾಯವಾದ ಧಾರ್ಮಿಕ ಮೌಲ್ಯಗಳೆನಿಸುತ್ತವೆ.

ರಾಜಕೀಯವಾಗಿ ಒಂದು ಪ್ರದೇಶದ ಬಲಿಷ್ಠರು ಮತ್ತೊಂದು ಪ್ರದೇಶದ ಜನರನ್ನು ಯುದ್ಧದಲ್ಲಿ ಗೆದ್ದು ಆಳುವುದು, ಅಂದರೆ ಆಯುಧ, ಹಿಂಸೆ, ದಬ್ಬಾಳಿಕೆಗಳ ಮೂಲಕ ಅವರ ಆಸ್ತಿ-ಜೀವಗಳನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುವುದು ಅಂತಾರಾಷ್ಟ್ರೀಯವಾಗಿ ನ್ಯಾಯಯುತವೆಂದೇ ಪರಿಗಣಿಸಲ್ಪಡುತ್ತಿದೆ. ಬೆರಳೆಣಿಕೆಯ ಸಂಖ್ಯೆಯ ಜಾಗತಿಕ ಶ್ರೀಮಂತರು ದೈತ್ಯ ಉದ್ಯಮಗಳ ಹೆಸರಿನಲ್ಲಿ ಜಗತ್ತಿನ ಜನಸಮುದಾಯಗಳ ಆರ್ಥಿಕತೆಯನ್ನೇ ಬುಡಮೇಲು ಮಾಡುವುದೂ ಸಹ ಆ ಉದ್ಯಮಿಗಳು ತಮಗಾಗಿ, ತಾವೇ ರೂಪಿಸಿಕೊಂಡಿರುವ ಜಾಗತಿಕ ಮಟ್ಟದ ನ್ಯಾಯ, ನೀತಿ, ಧರ್ಮ ಮತ್ತು ಮಾನವೀಯ ಸಂಬಂಧಗಳಿಗೆ ಅನುಸಾರವಾಗಿಯೇ ಇದೆ.

ಅಂದಮೇಲೆ ಎಲ್ಲವೂ ಸರಿಯಾಗಿಯೇ ಇರಬೇಕಲ್ಲ! ಎಲ್ಲ ನಾಗರಿಕ ಸರ್ಕಾರಗಳೂ, ಜನರಿಂದಲೇ ಚುನಾಯಿತವಾಗಿ, ಜನರ ಹೆಸರಿನಲ್ಲಿ ಜಾರಿಗೆ ತಂದಿರುವ ಸಂವಿಧಾನಗಳಲ್ಲಿ ರೂಪಿಸಿರುವ ನ್ಯಾಯ, ನೀತಿ, ಧರ್ಮ ಮತ್ತು ಮಾನವೀಯ ಸಂಬಂಧಗಳ ತಳಹದಿಯ ಮೇಲೇ ನಿಂತಿರುವಾಗ ತೊಂದರೆ ಎಲ್ಲಿದೆ?

ಆದರೆ ಜಗತ್ತಿನ ಜನಸಮುದಾಯದ ದಿನನಿತ್ಯದ ಅನುಭವ ತಲೆ ತಲಾಂತರದಿಂದಲೂ ಬೇರೆ-ಯೇ ಆಗಿದೆ. ಅವರ ಅನುಭವಕ್ಕೆ ಉಳ್ಳವರು ನಿಯಂತ್ರಿಸುತ್ತಿರುವ ನಾಗರಿಕ ಸಮಾಜದ ಈ ನ್ಯಾಯ, ನೀತಿ, ಧರ್ಮ ಮತ್ತು ಮಾನವೀಯ ಸಂಬಂಧಗಳ ಪರಿಕಲ್ಪನೆಗಳು ಹೊಂದುತ್ತಿಲ್ಲ. ಯಾರನ್ನೇ ಕೇಳಿದರೂ ಎಲ್ಲಾ ಕಡೆ ಅನ್ಯಾಯ ಅನೀತಿ ಅಧರ್ಮಗಳೇ ತುಂಬಿವೆಯೆಂದು ಹೇಳುತ್ತಾರೆ. ಮಾನವೀಯತೆ ಎಂಬುದು ಮಾಯವಾಗಿದೆ ಎಂದು ಪರಿತಾಪ ಪಡುತ್ತಾರೆ. ಭಾರತದಲ್ಲಂತೂ ಧರ್ಮ ಕ್ಷೀಣಿಸಿ, ಅಧರ್ಮದ ಕೈ ಮೇಲಾದಾಗ ಭಗವಂತನೇ ಅವತಾರವೆತ್ತಿ ಧರ್ಮಸಂಸ್ಥಾಪನೆ ಮಾಡುತ್ತಾನೆಂದು ಭಗವದ್ಗೀತೆಯಲ್ಲಿ ಹೇಳಿದೆ. ಆದರೆ ಹಾಗೇನೂ ಇಲ್ಲಿಯವರೆಗೆ ಆಗಿಲ್ಲ. ಹಾಗಿದ್ದರೆ ಸಾವಿರಾರು ಜನ ಸಜ್ಜನರು ಶ್ರದ್ಧೆಯಿಂದ ದಿನವೂ ಪಠಿಸುವ ಭಗವದ್ಗೀತೆಯ ಮಾತಿಗೆ ಅರ್ಥವಿಲ್ಲವೆ? ಇದನ್ನೆಲ್ಲಾ ಅರ್ಥಮಾಡಿಕೊಳ್ಳವುದು ಹೇಗೆ?

ಈ ಪ್ರಶ್ನೆಗೆ ಸಿಗುವ ಒಂದು ಉತ್ತರ: ಬಹುಪಾಲು ಬಡವರು, ಅನಕ್ಷರಸ್ಥರೇ ತುಂಬಿರುವ ಜನಸಮುದಾಯದ ಅನುಭವದ ಗ್ರಹಿಕೆಯಲ್ಲೇ ತಪ್ಪಿರಲು ಸಾಧ್ಯ ಎಂಬುದು. ಇನ್ನೊಂದು ಉತ್ತರ: ನ್ಯಾಯ, ನೀತಿ, ಧರ್ಮ ಮತ್ತು ಮಾನವೀಯ ಸಂಬಂಧಗಳು ಎಂಬ ಪದಗಳು ಎಲ್ಲರಿಗೂ ಒಂದೇ ರೀತಿಯಾಗಿ ಕಂಡರೂ ಅವುಗಳ ಅರ್ಥ ಮಾತ್ರ ಆಳುವವರಿಗೆ ಮತ್ತು ಉಳ್ಳವರಿಗೆ ಆಗುವ ರೀತಿಯಲ್ಲೇ ಜನಸಾಮಾನ್ಯರಾದ ಬಡವರು ಮತ್ತು ಆಳಿಸಿಕೊಳ್ಳವವರಿಗೆ ಆಗದಂತೆ ಬಳಕೆಯಾಗುತ್ತಿರಬಹುದು.. ಅಂದರೆ, ಆಳುವವರ ನ್ಯಾಯ-ನೀತಿ, ಆಳಿಸಿಕೊಳ್ಳುವವರ ನ್ಯಾಯ-ನೀತಿ, ಆಗಿಲ್ಲ. ಶ್ರೀಮಂತರ ಧರ್ಮ ಬಡವರ ಧರ್ಮ ಆಗಿಲ್ಲ. ಉದ್ಯಮಿಗಳ ಮಾನವೀಯ ಸಂಬಂಧಗಳು ಬಡವರಿಗೂ ಅನ್ವಯವಾಗಬಲ್ಲ ಮಾನವೀಯ ಸಂಬಂಧಗಳು ಆಗಿಲ್ಲ. ಇದು ಕೇವಲ ಕೆಲವು ಜನರ ಮನಸ್ಸಿನ ಕಲ್ಪನೆಯಾಗಿರದೆ ಸಾವಿರಾರು ವರ್ಷಗಳಿಂದ ಆಳುವವರು ನಾನಾ ರೀತಿಗಳಲ್ಲಿ ಕಾಯ್ದುಕೊಂಡು ಬಂದಿರುವ ಆಳಿಸಿಕೊಳ್ಳುವವರ ಜೊತೆಗಿನ ತಮ್ಮ ಸಂಬಂಧಗಳನ್ನು ಆಧರಿಸಿದ ಪರಿಕಲ್ಪನೆಗಳಾಗಿರಬಹುದು. ಆಳಿಸಿಕೊಳ್ಳುವ ಜನರು ತಮಗೆ ಎಷ್ಟೇ ಕಷ್ಟವಾದರೂ ಬಿಡದೆ ಬದಲಾಯಿಸಲು ಯತ್ನಿಸುತ್ತಿರುವ ಅರ್ಥಗಳಾಗಿರಬಹುದು, ಆದ್ದರಿಂದ ಇವೆಲ್ಲಾ ಚರಿತ್ರೆಯುದ್ದಕ್ಕೂ ನಿರಂತರವಾಗಿ ಘರ್ಷಣೆಗೊಳಗಾಗುತ್ತಲೇ ಬರುತ್ತಿರುವ, ಎರಡು ಪರಸ್ಪರ ವಿರುದ್ಧವಾದ ಜೀವನದೃಷ್ಟಿಗಳ ನಡುವಿನ ಸಂಘರ್ಷ. ಇದನ್ನೇ ಕಾರ್ಲ್ ಮಾರ್ಕ್ಸ್ ವರ್ಗಸಂಘರ್ಷ ಎಂದು ಕರೆದಿದ್ದಾರೆ. ಇಡೀ ಮನುಕುಲದ ಚರಿತ್ರೆ ವರ್ಗ ಸಂಘರ್ಷದ ಚರಿತ್ರೆ ಎಂದು ಅವರು ಹೇಳಿದ್ದಾರೆ. ಈ ವ್ಯತ್ಯಾಸವನ್ನು ಗಮನದಲ್ಲಿರಿಸಿಕೊಂಡು ಈಗ ಚಾಲ್ತಿಯಲ್ಲಿರುವ ಎಲ್ಲರೀತಿಯ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ನೈತಿಕಮೌಲ್ಯಗಳನ್ನು ಅರ್ಥಮಾಡಿಕೊಂಡರೆ ಯಾವುದು ನ್ಯಾಯ, ನೀತಿ, ಧರ್ಮ ಮತ್ತು ಮಾನವೀಯತೆಗಳು, ಯಾವುದು ಅಲ್ಲ ಎಂಬುದು ಸ್ಪಷ್ಟವಾಗಬಹುದು.

ಸಂವಿಧಾನ, ಕಾನೂನು, ನ್ಯಾಯ

ಯಾವುದೇ ದೇಶದ ಸಂವಿಧಾನವೆಂದರೆ, ಆಳುವವರು, ಆಳಿಸಿಕೊಳ್ಳುವವರ ಹೆಸರಿನಲ್ಲಿ ಜಾರಿಗೆ ತರುವ ಅಧಿಕಾರದ ಕೈಪಿಡಿ. ಇದರ ನೀತಿ-ನಿಯಮಾವಳಿಗಳ ಘೋಷಿತ ಆಶಯ ಮತ್ತು ಉದ್ದೇಶಗಳು ಸಮಸ್ತ ಜನರ ಕಲ್ಯಾಣಕ್ಕಾಗಿ ಎಂದಿದ್ದರೂ ಅನುಷ್ಠಾನದಲ್ಲಿ ಬಹಳ ಮಟ್ಟಿಗೆ ಆಳುವವರ್ಗದ ಹಿತಾಸಕ್ತಿಗಳನ್ನು ಕಾಯುವಂತೆ ರೂಪಿತವಾಗಿರುತ್ತವೆ. ಆಳುವವರು ಮತ್ತು ಆಳಿಸಿಕೊಳ್ಳುವವರ ಹಿತಾಸಕ್ತಿಗಳು ಒಂದೇ ಆಗಿದ್ದಾಗ ಸಂವಿಧಾನದ ಆಶಯ-ಉದ್ದೇಶಗಳಿಗೂ, ಅನುಷ್ಠಾನದಲ್ಲಿ ರಕ್ಷಿತವಾಗುವ ಆಶಯ-ಉದ್ದೇಶಗಳಿಗೂ ಮಧ್ಯೆ ಬಿರುಕು ಅಥವಾ ಕಂದಕಗಳು ಇರುವುದಿಲ್ಲ. ಆಗ ಮಾತ್ರ ವರ್ಗ ಸಂಘರ್ಷ ಇರುವುದಿಲ್ಲ. ಅಂಥ ಸಂವಿಧಾನ ಜನಪರವಾದ ಆದರ್ಶ ಸಂವಿಧಾನ. ಅಂಥ ಸಂವಿಧಾನಾತ್ಮಕ ಸರ್ಕಾರ ಮಾತ್ರ 'ಜನರ ಸರ್ಕಾರ', ಕಡೆಯಪಕ್ಷ, 'ಜನಪರ ಸರ್ಕಾರ' ವಾದರೂ ಆಗಿರಲು ಸಾಧ್ಯ. ಸಮಾಜವಾದೀ ಸಂವಿಧಾನ ಇಂಥ ಸಂವಿಧಾನ. ಅದನ್ನಾಧರಿಸಿ ರಚಿತವಾಗುವ ಸರ್ಕಾರ ಸಮಾಜವಾದಿ ಸರ್ಕಾರ. ಇವನ್ನು ಹೊರತುಪಡಿಸಿ ಉಳಿದೆಲ್ಲ ರೀತಿಯ ಸಂವಿಧಾನಗಳೂ ಆಳಿಸಿಕೊಳ್ಳುವವರ? ಸಂವಿಧಾನ. ಅಂದರೆ, ಜನರ ಹೆಸರನ್ನು ಹೇಳಿಕೊಂಡು ಆಳುವವರ್ಗದ ಹಿತವನ್ನು ಕಾಯುವ ಸಂವಿಧಾನಗಳು. ಅಂಥ ಜನಪರವಲ್ಲದ ಸಂವಿಧಾನಗಳು ಬಡವರು, ಶ್ರಮಿಕರು ಮತ್ತು ದುರ್ಬಲರ ಹಿತಕಾಯುವಂತೆ ರಚಿತವಾಗಿವೆ ಎಂದು ಮೇಲ್ನೋಟಕ್ಕೆ ಕಂಡುಬರುತ್ತವೆ. ಆದರೆ, ಆಳದಲ್ಲಿ, ಅದರ ಮೂಲ ಸ್ವರೂಪದಲ್ಲಿ, ಶ್ರೀಮಂತರು, ಉದ್ಯಮಿಗಳು ಮತ್ತು ಅವರನ್ನು ಸಮರ್ಥಿಸುವವರ ಸ್ವಹಿತಾಸಕ್ತಿಯನ್ನು ಕಾಪಾಡುವಂತೆ ರಚಿತವಾಗಿರುತ್ತವೆ. ಯಾರ ಹೆಸರಿನಲ್ಲಿ ಸಂವಿಧಾನವಿದೆಯೋ ಅಂಥ ಸಾಮಾನ್ಯ ಜನರ ಬದುಕನ್ನು ಬಲಿಕೊಟ್ಟು ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವಂಥ ನೀತಿ-ನಿಯಮಾವಳಿಗಳನ್ನು ಕಾನೂನಿನ ಹೆಸರಿನಲ್ಲಿ ಜಾರಿಗೊಳಿಸುವಂತೆ ಇರುತ್ತವೆ.

ಸಂವಿಧಾನದಲ್ಲಿ ಏನೇ ಬದಲಾವಣೆ-ತಿದ್ದುಪಡಿಗಳನ್ನು ಬೇಕಾದರೂ ಜನರಿಂದ ಚುನಾಯಿತವಾದ ಸರ್ಕಾರಗಳು ತರಬಹುದು. ಆದರೆ ಅಂಥ ಬದಲಾವಣೆ-ತಿದ್ದುಪಡಿಗಳು 'ಕಾನೂನುಬದ್ಧ'ವಾಗಿರಬೇಕೆಂದರೆ ಸಂವಿಧಾನದ ಮೂಲಸ್ವರೂಪವನ್ನು ಬದಲಾಯಿಸಬಾರದು. ಭಾರತದ ಸಂವಿಧಾನದ ಮೂಲ ಸ್ವರೂಪದಲ್ಲಿ ಖಾಸಗಿ ಆಸ್ತಿ ನಾಗರಿಕರ ಮೂಲಭೂತ ಹಕ್ಕು. ಈಗಿರುವಂತೆ ಭೂಮಿಯ ಖಾಸಗಿ ಒಡೆತನವನ್ನು ಸಾಮಾಜಿಕ ಒಡೆತನವೆಂದು ಬದಲಾಯಿಸಲು ಹೊರಟರೆ ನಮ್ಮ ಸಂವಿಧಾನದ ಮೂಲ ಸ್ವರೂಪಕ್ಕೆ ಧಕ್ಕೆ ತಗುಲುತ್ತದೆ. ಒಂದು ಸಾಂವಿಧಾನಿಕ ತಿದ್ದುಪಡಿ ಅಥವಾ ಬದಲಾವಣೆ ಬಹುಸಂಖ್ಯಾತರಾದ ಆಳಿಸಿಕೊಳ್ಳುವ ಜನರ ಹಿತವನ್ನು ಕಾಯುವಂತಿದ್ದರೂ ಆಳುವವರ್ಗದ ಹಿತಕ್ಕೆ ಧಕ್ಕೆ ತರುವಂತಿದ್ದರೆ ಅಂಥ ತಿದ್ದುಪಡಿ-ಬದಲಾವಣೆಗಳನ್ನು 'ಸಂವಿಧಾನಬದ್ಧವಾಗಿಲ್ಲ' ಎಂದು ಊರ್ಜಿತವಲ್ಲವೆಂದು ಅತ್ಯುನ್ನತ ನ್ಯಾಯಾಲಯವು ಘೋಷಿಸುತ್ತದೆ. ನ್ಯಾಯಾಧೀಶರು ವೈಯಕ್ತಿಕವಾಗಿ ಎಷ್ಟೇ ಬಡವರ ಪರ, ನ್ಯಾಯಪರವಾಗಿರಬೇಕೆಂದು ಬಯಸಿದರೂ ಸಂವಿಧಾನದ ಮೂಲಸ್ವರೂಪಕ್ಕೆ ಧಕ್ಕೆ ತರುವಂಥ ಆದರೆ ಬಹುಸಂಖ್ಯಾತ ಬಡವರ ಹಿತವನ್ನು ಕಾಯುವಂಥ ನ್ಯಾಯವನ್ನು ಕೊಡಲಾಗದಂತೆ ಸಂವಿಧಾನವು ನ್ಯಾಯಾಲಯದ ಕೈಗಳನ್ನು ಕಟ್ಟಿಬಿಟ್ಟಿರುತ್ತದೆ. ಜನರಿಂದ ಚುನಾಯಿತರಾಗಿ ಬಹುಮತ ಹೊಂದಿ ಅಧಿಕಾರಕ್ಕೆ ಬರುವ ಕಮುನಿಸ್ಟ್ ಪಕ್ಷಗಳ ಸರ್ಕಾರಗಳೂ ಸಹ ಸಾಂವಿಧಾನಿಕವಾಗಿ ಈ ವಿಷಯದಲ್ಲಿ ಅಸಹಾಯಕವಾಗಿರುತ್ತವೆ.

ಇದರ ಅರ್ಥ, ಉಳ್ಳವರ ಹಿತವನ್ನು ಕಾಯುವಂತೆ ರಚಿತವಾದ ಸಂವಿಧಾನದ ಚೌಕಟ್ಟಿನಲ್ಲಿ ಕಾನೂನು ಮತ್ತು ನ್ಯಾಯ ಎರಡೂ ಒಂದೇ ಅಲ್ಲ. ಸರಳವಾಗಿ ಹೇಳಬೇಕೆಂದರೆ, ಆಳುವವರು ಯಾವುದನ್ನು 'ಸರಿ' ಎಂದು ಹೇಳುತ್ತಾರೋ ಅದೇ ಕಾನೂನು. ಯಾವುದು ಎಲ್ಲರಿಗೂ ಒಳ್ಳೆಯದೋ ಅದು ನ್ಯಾಯ. ಆದ್ದರಿಂದ ಸಾಮಾಜಿಕ ನ್ಯಾಯದ ಪ್ರಶ್ನೆ ಬಂದಾಗ ನ್ಯಾಯಾಲಯಗಳನ್ನು ಶ್ರೀಮಂತರ ಪರವೆಂದು ಅಥವ ಬಡವರ ಪರ ಅಲ್ಲವೆಂದು ದೂಷಿಸುವುದರಲ್ಲಿ ಅರ್ಥವಿಲ್ಲ. ಆದರೆ ಆಳುವವರ್ಗದ ಹಿತಕಾಯುವಂತೆ ರಚಿತವಾದ ಸಂವಿಧಾನವನ್ನು ನಿರ್ಲಕ್ಷಿಸಿ ಅಥವ ಧಿಕ್ಕರಿಸಿ ಬಡವರ ಪರವಾದ ನ್ಯಾಯವನ್ನು ಪಡೆಯುವಂತೆಯೂ ಇಲ್ಲ. ಅಂಥ ಯಾವುದೇ ಪ್ರಯತ್ನವನ್ನು ಸರ್ಕಾರ 'ದೇಶದ್ರೋಹ'ವೆಂದು ಸಾರುತ್ತದೆ. ಯಾರೂ ಕಾನೂನನ್ನು ಕೈಗೆತ್ತಿಕೊಳ್ಳಬಾರದು ಎಂದು ತಾಕೀತು ಮಾಡುತ್ತದೆ. ಇಂಥ ಇಕ್ಕಟ್ಟಿನಿಂದ ಪಾರಾಗಿ ವ್ಯಕ್ತಿ ಮಟ್ಟದಲ್ಲಿ, ತಮ್ಮದೇ ಆದ ರೀತಿಯಲ್ಲಿ ನ್ಯಾಯ ಪಡೆಯಲು ಯತ್ನಿಸುವ ಜನರನ್ನು ಸರ್ಕಾರ ಸಾಮಾಜಿಕ ಅಪರಾಧಿಗಳೆಂದು, ಸಮಾಜಘಾತುಕ ಶಕ್ತಿಗಳೆಂದು ಹೆಸರಿಸಿ ನ್ಯಾಯಾಲಯಗಳ ಮೂಲಕ ಶಿಕ್ಷಿಸುತ್ತದೆ. ಸಾಂಘಿಕವಾಗಿ, ಸಂಘಟಿತ ರೂಪದಲ್ಲಿ ತತ್ವ-ಪ್ರಣಾಳಿಕೆಗಳ ಮೂಲಕ ಬಡವರ ಪರವಾದ ಸಂವಿಧಾನವನ್ನು ಪ್ರತಿಪಾದಿಸುವ ಯತ್ನಗಳನ್ನು 'ಅಪಾಯಕಾರಿ'ಯೆಂದು, ಅಂಥ ಪ್ರಯತ್ನ ಮಾಡುವವರೆಲ್ಲರೂ ಸಂವಿಧಾನದಲ್ಲೆ ನಂಬಿಕೆ ಇಲ್ಲದವರೆಂದು, 'ದೇಶದ್ರೋಹಿ'ಗಳೆಂದು ಪರಿಗಣಿಸಿ ಹತ್ತಿಕ್ಕುತ್ತದೆ. ಆಳುವ ವರ್ಗದ ಸಂವಿಧಾನಬದ್ಧ ಹಿಂಸೆಗೆ ಪ್ರತಿಯಾಗಿ ಶಸ್ತ್ರಸಹಿತರಾಗಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುವವರನ್ನು ರಾಜಕೀಯ ಭಯೋತ್ಪಾದಕರೆಂದು, ತೀವ್ರಗಾಮಿಗಳೆಂದು ಘೋಷಿಸಿ ನಿರ್ದಯವಾಗಿ ಕೊಂದು ಹಾಕುತ್ತದೆ. ಬ್ರಿಟಿಷರ ಕಾಲದಿಂದ ಹಿಡಿದು ಪ್ರಸ್ತುತ ಕಾಲದ ವಿವಿಧ ಬಗೆಯ ಸಂಘರ್ಷಗಳಲ್ಲಿ ಸಮಾನವಾಗಿ ಕಂಡುಬರುವ ವಿದ್ಯಮಾನಗಳು ಇವು. ಇಂದು ಜಾಗತಿಕ ಬಂಡವಾಳ ಸಾಮಾನ್ಯ ಜನರಲ್ಲಿ ಪ್ರತಿಷ್ಠಾಪಿಸುತ್ತಿರುವ 'ನ್ಯಾಯ, ನೀತಿ, ಧರ್ಮ ಮತ್ತು ಮಾನವೀಯ ಸಂಬಂಧಗಳು' ಬಹುಸಂಖ್ಯಾತ ಬಡವರ ಹಿತಾಸಕ್ತಿಗಳನ್ನು ದಮನಮಾಡಿ ಉಳ್ಳವರ ಹಿತಾಸಕ್ತಿಗಳನ್ನು ಕಾಯುವಂಥ ರಾಜಕೀಯ ಮೌಲ್ಯಗಳಾಗಿವೆ.

ಕಳೆದ 25 ವರ್ಷಗಳ ನ್ಯಾಯ, ನೀತಿ, ಧರ್ಮಗಳ ಧೂರ್ತ ನಿರ್ವಚನೆ

ಕಳೆದ 25 ವರ್ಷಗಳ ಹಿಂದೆ ಭಾರತದಲ್ಲಿ ಉದಾರೀಕರಣ-ಖಾಸಗೀಕರಣ-ಜಾಗತೀಕರಣಗಳೆಂಬ ಜಾಗತಿಕ ರಾಜಕೀಯದ ಆರ್ಥಿಕತೆಯಲ್ಲಿ 'ಚಿಂತನಾ ವಿನ್ಯಾಸ ಪಲ್ಲಟ' (paradigm Shift) ಎಂಬ ಪದವನ್ನು ಅರ್ಥಪಂಡಿತರು ಮತ್ತು ರಾಜಕೀಯಪಂಡಿತರು ಮೇಲಿಂದಮೇಲೆ ಬಳಸಿದರು. ಅವರನ್ನು ಅನುಸರಿಸಿ ಶಿಕ್ಷಣತಜ್ಞರು ಮತ್ತು ಕಲಾ ಮೀಮಾಂಸಕರೂ ಸಹ ಈ ಪದವನ್ನು ಮೇಲಿಂದ ಮೇಲೆ ಬಳಸಿ ಅದರಲ್ಲಿ ಏನೋ ಗಹನವಾದ

ಪುಟ 11 ಕ್ಕೆ



ಹಿಂದುತ್ವದ ಗುರಿಸಾಧನೆಗೆ ಸಶಸ್ತ್ರ ಪಡೆಗಳ ದುರುಪಯೋಗ

ಸಾಮಾನ್ಯವಾಗಿ ವಿಜಯದಶಮಿ ದಿನದಂದು ಹಿಂದುತ್ವ ಶಕ್ತಿಗಳಿಂದ ಎರಡು ಭಾಷಣಗಳನ್ನು ಕೇಳುತ್ತೇವೆ– ಒಂದು ಆರ್‌ಎಸ್‌ಎಸ್ ಮುಖ್ಯಸ್ಥ ನಾಗ್ಪುರದಲ್ಲಿ ಮಾಡುವುದು ಹಾಗೂ ಇನ್ನೊಂದು ಶಿವಸೇನೆಯ ಮುಖ್ಯಸ್ಥ ಮುಂಬಯಿಯಲ್ಲಿ ಮಾಡುವ ಭಾಷಣ. ಈ ವರ್ಷ ಆ ಪ್ರಕಾರದ ಮೂರನೇ ಭಾಷಣದ ಸೇರ್ಪಡೆಯಾಯಿತು– ಲಖನೌನಲ್ಲಿ ರಾಮಲೀಲಾಕ್ಕೆ ಸೇರಿದ್ದ ಜನರನ್ನುದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಮಾಡಿದ ಭಾಷಣ. ಇದು ದಸರಾದೊಂದಿಗೆ ಬೆರೆಸಿದ ರಾಜಕೀಯವನ್ನು ಈ ಬಾರಿಯ ವಿಶೇಷತೆಯನ್ನಾಗಿ ಮಾಡಿದೆ.

ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಮತ್ತು ಶಿವಸೇನೆ ಅಧ್ಯಕ್ಷ ಉದ್ಧವ್ ಠಾಕ್ರೆ ಇಬ್ಬರೂ ಹತೋಟಿ ರೇಖೆ ನಡೆಸಿದ "ಸೀಮಿತ ಪ್ರಹಾರ"ಕ್ಕಾಗಿ (ಸರ್ಜಿಕಲ್ ಸ್ಟ್ರೈಕ್ಸ್) ಪ್ರಧಾನಿಮೋದಿಯನ್ನು ಹೊಗಳಿದರು. ಹಿಂದುತ್ವ ಶಿಬಿರದಲ್ಲಿ ಮೋದಿ ಇನ್ನಷ್ಟು ಎತ್ತರದ ವ್ಯಕ್ತಿತ್ವವನ್ನು ಗಳಿಸಿದ್ದಾರೆ ಎಂಬುದಕ್ಕೆ ಸಿಕ್ಕಿರುವ ಒಂದು ಸ್ವೀಕಾರ.

ಆರ್‌ಎಸ್‌ಎಸ್ ಮುಖ್ಯಸ್ಥರು ನಿರೀಕ್ಷಿತ ದಾಟಿಯಲ್ಲೇ ಮಾತಾಡಿದ್ದಾರೆ. ಆರ್‌ಎಸ್‌ಎಸ್ ಸೃಷ್ಟಿಯಾದ 'ಗೋರಕ್ಷಕ'ರು ಕಾನೂನು ವಿಧಿಸಿದಂತೆ ಗೋವುಗಳನ್ನು ರಕ್ಷಿಸುವಲ್ಲಿ ಉತ್ತಮ ಕೆಲಸ ಮಾಡುತ್ತಿದ್ದಾರೆ ಎಂದು ಅವರನ್ನು ಸಮರ್ಥಿಸಿದರು. ಆಡಳಿತಗಾರರು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಅವರು ಎಚ್ಚರಿಸಿದರು. ಅವರ ಪ್ರಕಾರ ಕಾನೂನನ್ನು ಮುರಿಯುವವರು 'ಗೋರಕ್ಷಕರು' ಅಲ್ಲ. ಈ ರೀತಿಯಾಗಿ ಗೋರಕ್ಷೆಯ ಹೆಸರಿನಲ್ಲಿ ದಲಿತರು ಮತ್ತು ಮುಸ್ಲಿಮರ ವಿರುದ್ಧ ಭಯೋತ್ಪಾದನೆಯನ್ನು ಈ ಗೋಕಾವಲುಭಟರು ಹರಿಬಿಟ್ಟಿರುವುದನ್ನು ತಳ್ಳಿಹಾಕಿದರು. ಉತ್ತರ ಪ್ರದೇಶ, ಜಾರ್ಖಂಡ್, ಗುಜರಾತ್ ಮತ್ತು ದೇಶದ ಇತರ ಸ್ಥಳಗಳಲ್ಲಿ ಕೊಚ್ಚಿ ಹಾಕುವ ಮಂದಿ ಗೋರಕ್ಷಣೆಯ ಹೆಸರಿನಲ್ಲಿ ನಡೆಸಿದ ಹತ್ಯೆಗಳ ಸರಣಿಯ ನಂತರ ಆರ್‌ಎಸ್‌ಎಸ್ ಮುಖ್ಯಸ್ಥರು ಮಾಡಿದ ಈ ಘೋಷಣೆಯು ಮುಸ್ಲಿಮರು ಮತ್ತು ದಲಿತರ ವಿರುದ್ಧ ಗೋಹತ್ಯೆ ಹಾಗೂ ಗೋಮಾಂಸ ಭಕ್ಷಣೆಯ ನೆವದಲ್ಲಿ ಆರ್‌ಎಸ್‌ಎಸ್ ಸಂಘಟನೆಗಳು ತಮ್ಮ ಹಿಂಸೆ ಮತ್ತು ಬೆದರಿಕೆಗಳನ್ನು ಮುಂದುವರಿಸಲಿವೆ ಎನ್ನುವುದರ ಸ್ಪಷ್ಟ ಸಂಕೇತವಾಗಿದೆ.

ಲಖನೌಗೆ ಮೋದಿ ಲಗ್ಗೆ ಇಟ್ಟಿದ್ದಕ್ಕೆ ಸಂಬಂಧಿಸಿ ಹೇಳುವುದಾದರೆ, ಮುಂಬರುವ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯೇ ಅವರ ಲಕ್ಷ್ಯ ಎಂಬುದು ಸ್ವಯಂವೇದ್ಯ. ತಮ್ಮ ರಾಜಕೀಯ ಸಂದೇಶಕ್ಕೆ ಧಾರ್ಮಿಕ ನುಡಿಗಟ್ಟಿನ ಲೇಪನವನ್ನು ನೀಡಲು ಮೋದಿ ಧಾರ್ಮಿಕ ಹಬ್ಬವನ್ನು ಬಳಸಿಕೊಂಡರು. 'ಜೈ ಶ್ರೀರಾಮ್' ಘೋಷಣೆಯೊಂದಿಗೆ ಭಾಷಣ ಆರಂಭಿಸಿದ ಅವರು, ರಾಮಾಯಣದ ದೃಷ್ಟಾಂತಗಳನ್ನು ಉಲ್ಲೇಖಿಸುತ್ತಾ ಭಯೋತ್ಪಾದನೆಯ ವಿರುದ್ಧ ಹೋರಾಡುವ ಮಾತುಗಳನ್ನಾಡಿದರು. ಅವರ ಸಂದೇಶ ಸ್ಪಷ್ಟವಾಗಿತ್ತು– ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯ ಸಮರದಲ್ಲಿ ರಾಜಕೀಯದೊಂದಿಗೆ ಧರ್ಮವನ್ನು ಬೆರೆಸಲಾಗುವುದು ಹಾಗೂ ಒಂದು ಕರ್ಕಶ ಕೋಮುವಾದಿ ಕಾರ್ಯಸೂಚಿಯೊಂದಿಗೆ ಚುನಾವಣಾ ಹೋರಾಟ ನಡೆಸಲಾಗುವುದು. ಸೇನೆಯ 'ಸೀಮಿತ ಪ್ರಹಾರ' ಈಗಾಗಲೇ ಉತ್ತರ ಪ್ರದೇಶದಲ್ಲಿ ಬಿಜೆಪಿಯ ಚುನಾವಣಾ ಪ್ರಚಾರದ ಒಂದು ಅಂಶ ಆಗಿಬಿಟ್ಟಿದೆ.

ತೀರಾ ಕಳವಳದ ಸಂಗತಿಯೆಂದರೆ, ಬಿಜೆಪಿಯ ಸಂಕುಚಿತ ರಾಜಕೀಯ ಉದ್ದೇಶ ಸಾಧನೆಗೆ ಸೇನೆಯನ್ನು ಬಳಸಿಕೊಳ್ಳಲಾಗುತ್ತಿರುವುದು. ರಾಜಸ್ಥಾನದಲ್ಲಿ, ಮುಖ್ಯಮಂತ್ರಿ ವಸುಂಧರಾ ರಾಜೇ, 'ಸೇನಾ ಪಡೆಗಳನ್ನು ಶತ್ರುಗಳಿಂದ ರಕ್ಷಿಸಲು' ರಾಜಸ್ಥಾನ ಸಂಸ್ಕೃತ ಅಕಾಡೆಮಿ ಏರ್ಪಡಿಸಿದ್ದ 'ರಾಷ್ಟ್ರ ರಕ್ಷಾ ಯಜ್ಞ'ದಲ್ಲಿ ಭಾಗವಹಿಸಿದರು. ಶ್ರೀ ಮಾತೇಶ್ವರಿ ತನೋಟ್ ರಾಯ್ ದೇವಸ್ಥಾನದಲ್ಲಿ 21 'ದೇಶಪ್ರೇಮಿ ಬ್ರಾಹ್ಮಣರು' ಅಕ್ಟೋಬರ್ ಆರರಂದು ಈ ಯಜ್ಞವನ್ನು ನಡೆಸಿದರು. ಸಂಸ್ಕೃತ ಅಕಾಡೆಮಿಯ ಅಧ್ಯಕ್ಷ ಜಯ ದವೆ ಯವರ ಪ್ರಕಾರ "ಹಿಂದೆ ಕೂಡ ಕ್ಷತ್ರಿಯರು ಯುದ್ಧಗಳನ್ನು ಮಾಡುವಾಗ, ಅವರನ್ನು ರಕ್ಷಿಸಲೆಂದು ಬ್ರಾಹ್ಮಣರು ಈ ರೀತಿಯ ಸಮಾರಂಭಗಳನ್ನು ನಡೆಸಿದ್ದರು".

ಇದಕ್ಕೂ ಮುನ್ನ, ರಕ್ಷಣಾ ಸಚಿವ ಮನೋಹರ ಪಾರ್ರಿಕರ್ "ಸೀಮಿತ ಪ್ರಹಾರ ನಡೆಸುವುದಕ್ಕೂ ಮುನ್ನ ಭಾರತೀಯ ಸೈನಿಕರು ತನ್ನ ಸಾಮರ್ಥ್ಯ ಗೊತ್ತಿರದ ಹನುಮಂತನಂತಿದ್ದರು" ಎಂದಿದ್ದರು. ಈ ರೀತಿಯಾಗಿ ಸರಕಾರವೇ ಭಾರತೀಯ ಸಶಸ್ತ್ರ ಪಡೆಗಳನ್ನು ಹಿಂದುತ್ವದ ಭಾಷೆಯಲ್ಲಿ ಬಿಂಬಿಸುತ್ತಿದೆ ಮತ್ತು ಅದರ ಪಾತ್ರವನ್ನು ವರ್ಣಿಸಲು ಕಟ್ಟಾ ಜಾತಿವಾದಿ ಹಾಗೂ ಧಾರ್ಮಿಕ ಪ್ರತಿಮೆಗಳನ್ನು ಬಳಸುತ್ತಿದೆ. ಇದು ಅಪಾಯಕಾರಿ ಸರಕು, ಸಶಸ್ತ್ರ ಪಡೆಗಳ ಸಮಗ್ರತೆ ಮತ್ತು ಜಾತ್ಯತೀತ ಆಧಾರವನ್ನು ಕೊರೆದು ಹಾಕುವಂತದ್ದು.

ಅಪಾಯದ ಗಂಟೆಯ ಸದ್ದು ತುಂಬಾ ಜೋರಾಗಿದೆ ಹಾಗೂ ಸ್ಪಷ್ಟವಾಗಿದೆ. ಬಿಜೆಪಿ–ಆರ್‌ಎಸ್‌ಎಸ್ ರಾಜ್ಯಭಾರದಲ್ಲಿ ಸಶಸ್ತ್ರ ಪಡೆಗಳೂ ಸೇರಿದಂತೆ ಪ್ರಭುತ್ವದ ಯಾವುದೇ ಸಂಸ್ಥೆಯೂ ಹಿಂದುತ್ವದ ಬುಡಮೇಲು ಕೃತ್ಯಗಳಿಂದ ಹೊರತಾಗಿಲ್ಲ. ಇದು ದೇಶದ ಪ್ರತಿ ಪ್ರಜೆಯೂ ಕಳವಳ ಪಡಬೇಕಾದ ಗಂಭೀರ ವಿಷಯವಾಗಿದೆ. ನಮ್ಮ ಗಣರಾಜ್ಯದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ರಕ್ಷಿಸ ಬಯಸುವ ಎಲ್ಲರೂ 'ಸಶಸ್ತ್ರ ಪಡೆಗಳಿಗೆ ಕೈಹಾಕಬೇಡಿ' ಎಂದು ದನಿಯೆತ್ತಿ ಬಿಜೆಪಿ–ಆರ್‌ಎಸ್‌ಎಸ್‌ಗೆ ಹೇಳಬೇಕಾಗಿದೆ.


ಅನು: ವಿಶ್ವ

ಅಪಾಯದ ಗಂಟೆಯ ಸದ್ದು ತುಂಬಾ ಜೋರಾಗಿದೆ ಹಾಗೂ ಸ್ಪಷ್ಟವಾಗಿದೆ. ಬಿಜೆಪಿ–ಆರ್‌ಎಸ್‌ಎಸ್ ರಾಜ್ಯಭಾರದಲ್ಲಿ ಸಶಸ್ತ್ರ ಪಡೆಗಳೂ ಸೇರಿದಂತೆ ಪ್ರಭುತ್ವದ ಯಾವುದೇ ಸಂಸ್ಥೆಯೂ ಹಿಂದುತ್ವದ ಬುಡಮೇಲು ಕೃತ್ಯಗಳಿಂದ ಹೊರತಾಗಿಲ್ಲ. ಇದು ದೇಶದ ಪ್ರತಿ ಪ್ರಜೆಯೂ ಕಳವಳ ಪಡಬೇಕಾದ ಗಂಭೀರ ವಿಷಯವಾಗಿದೆ. ನಮ್ಮ ಗಣರಾಜ್ಯದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ರಕ್ಷಿಸ ಬಯಸುವ ಎಲ್ಲರೂ 'ಸಶಸ್ತ್ರ ಪಡೆಗಳಿಗೆ ಕೈಹಾಕಬೇಡಿ' ಎಂದು ದನಿಯೆತ್ತಿ ಬಿಜೆಪಿ–ಆರ್‌ಎಸ್‌ಎಸ್‌ಗೆ ಹೇಳಬೇಕಾಗಿದೆ.



*** ಪ್ರಕಾಶ್ ಕಾರಟ್**

'ಜೈ ಶ್ರೀರಾಮ್' ಘೋಷಣೆಯೊಂದಿಗೆ ಭಾಷಣ ಆರಂಭಿಸಿದ ಪ್ರಧಾನಿಗಳು ರಾಮಾಯಣದ ದೃಷ್ಟಾಂತಗಳನ್ನು ಉಲ್ಲೇಖಿಸುತ್ತಾ ಭಯೋತ್ಪಾದನೆಯ ವಿರುದ್ಧ ಹೋರಾಡುವ ಮಾತುಗಳನ್ನಾಡಿದರು. ಅವರ ಸಂದೇಶ ಸ್ಪಷ್ಟವಾಗಿತ್ತು– ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯ ಸಮರದಲ್ಲಿ ರಾಜಕೀಯದೊಂದಿಗೆ ಧರ್ಮವನ್ನು ಬೆರೆಸಲಾಗುವುದು ಹಾಗೂ ಒಂದು ಕರ್ಕಶ ಕೋಮುವಾದಿ ಕಾರ್ಯಸೂಚಿ ಯೊಂದಿಗೆ ಚುನಾವಣಾ ಹೋರಾಟ ನಡೆಸಲಾಗುವುದು.



ನೇರ ನೇಮಕಾತಿ ವಿರೋಧಿಸಿ, ಹೊರಗುತ್ತಿಗೆ ನೌಕರರನ್ನು ಕಾಯಂಗೊಳಿಸಬೇಕೆಂದು 'ಬೆಂಗಳೂರು ಚಲೋ'

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ಕೆಲಸ ಮಾಡುತ್ತಿರುವ ಗ್ರೂಪ್–ಡಿ ವೃಂದದ ನೌಕರರ ಹುದ್ದೆಗಳಿಗೆ ಕಾಯಂ ನೌಕರರನ್ನು ನೇಮಿಸಿ ಅಲ್ಲಿನ ವಿದ್ಯಾರ್ಥಿಗಳಿಗೆ ಒಳ್ಳೆಯ ಸೇವೆ ದೊರಕುವಂತೆ ಮಾಡುವ ಸರ್ಕಾರ ಉದ್ದೇಶಿಸಿದೆ.

ಆದರೆ ನೇರ ನೇಮಕಾತಿಯ ಕ್ರಮದಿಂದ ಕಳೆದ ಹತ್ತಾರು ವರ್ಷಗಳಿಂದ ದಿನಗೂಲಿಗಳಾಗಿ, ಹೊರಗುತ್ತಿಗೆ ನೌಕರರಾಗಿ ದುಡಿಯುತ್ತಿರುವ ಅಡುಗೆಯವರು ಮತ್ತು ಅಡುಗೆ ಸಹಾಯಕರಿಗೆ ಘೋರ ಅನ್ಯಾಯವಾಗಲಿದೆ. ಮುಂದೆ ಒಂದು ದಿನ ತಮ್ಮ ಸೇವೆಯನ್ನು ಸರ್ಕಾರ ಕಾಯಂ ಮಾಡಬಹುದೆಂಬ ಆಸೆ ಇಟ್ಟುಕೊಂಡು ಗುತ್ತಿಗೆದಾರರ ಶೋಷಣೆಯನ್ನು ಅನುಭವಿಸುತ್ತಾ ಅತ್ಯಂತ ಕಡಿಮೆ ಸಂಬಳಕ್ಕೆ ದುಡಿಯುತ್ತಾ ಬಂದಿದ್ದಾರೆ. ಅವರಲ್ಲಿ 90% ಮಹಿಳೆಯರೇ ಆಗಿದ್ದು ಬಹುಸಂಖ್ಯಾತರು ದಲಿತರು, ಹಿಂದುಳಿದ ವರ್ಗಗಳಿಗೆ ಸೇರಿದವರು ಮತ್ತು ಅಲ್ಪಸಂಖ್ಯಾತರು ಆಗಿರುತ್ತಾರೆ. ನೇರಾ ನೇಮಕಾತಿಯಿಂದ ಅವರಲ್ಲಿ 99% ಜನ ಕೆಲಸ ಕಳೆದುಕೊಳ್ಳುತ್ತಾರೆ.

ಅಡುಗೆಯನ್ನು ಅವರು ಇದುವರೆಗೂ ಸರಿಯಾಗಿಯೇ ಮಾಡಿಕೊಂಡು ಬಂದಿದ್ದಾರೆ. ಆದರೆ ಶಿಕ್ಷಣದಿಂದ ವಂಚಿತರಾಗಿರುವ ಅವರಿಗೆ ಎಸ್.ಎಸ್.ಎಲ್.ಸಿ. ಪಾಸಾಗಿರಬೇಕು ಎಂಬ ಷರತ್ತು ವಿಧಿಸುವುದು ಅನ್ಯಾಯ. ಮೂಲಭೂತ ಹಕ್ಕುಗಳ ಉಲ್ಲಂಘನೆ. ಶಿಕ್ಷಣ ಪಡೆಯದಿದ್ದವರಿಗೂ ಮತದಾನದ ಹಕ್ಕು ಇರುವಾಗ ಅವರಿಗೆ ಉದ್ಯೋಗದ ಹಕ್ಕನ್ನು ನಿರಾಕರಿಸುವುದು ಸಮರ್ಥನೀಯವಾಗದು. ಆದ್ದರಿಂದ, ನೇಮಕಾತಿ ನಿಯಮಾವಳಿಗಳಲ್ಲಿ ಅಗತ್ಯ ತಿದ್ದುಪಡಿ ಮಾಡಿ ಹಾಲಿ ಅಡುಗೆ ಕೆಲಸ ಮಾಡುತ್ತಿರುವ ಹೊರಗುತ್ತಿಗೆ ನೌಕರರ ಸೇವೆಯನ್ನು ಕಾಯಂಗೊಳಿಸಬೇಕೆಂದು ಆಗ್ರಹಿಸಿ, ಅಲ್ಲಿಯವರೆಗೆ ನೇರ ನೇಮಕಾತಿ ಪ್ರಕ್ರಿಯೆಯನ್ನು ತಡೆಹಿಡಿಯಬೇಕೆಂದು ಒತ್ತಾಯಿಸಿ ಅಕ್ಟೋಬರ್ 20ರಿಂದ ಬೆಂಗಳೂರಿನಲ್ಲಿ ಅನಿರ್ದಿಷ್ಟ ಹೋರಾಟಕ್ಕೆ ನೌಕರರು ಮುಂದಾಗಿದ್ದಾರೆ.

ಅಡುಗೆಯವರು ಮಾತ್ರವಲ್ಲ ಎಲ್ಲ ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ಮತ್ತು ವಸತಿ ಶಾಲಾ–ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಗ್ರೂಪ್–ಡಿ ವೃಂದದ ಎಲ್ಲ ಹೊರಗುತ್ತಿಗೆ ನೌಕರರ ಸೇವೆಯನ್ನು ಕಾಯಂಗೊಳಿಸಬೇಕೆಂಬುದು ಹೋರಾಟದ ಇನ್ನೊಂದು ಪ್ರಮುಖ ಬೇಡಿಕೆಯಾಗಿದೆ.

ಹೊರಗುತ್ತಿಗೆ ಪದ್ಧತಿಯು ನೌಕರರ ಶೋಷಣೆಗೆ ಆಸ್ಪದ ಕೊಡುತ್ತದೆ. ಲೇಬರ್ ಗುತ್ತಿಗೆದಾರರು ನೌಕರರಿಗೆ ಸರ್ಕಾರ ನೀಡುವ ವೇತನವನ್ನು ಪೂರ್ಣ ಪ್ರಮಾಣದಲ್ಲಿ ವಿತರಣೆ ಮಾಡುವುದಿಲ್ಲ. ಅವರ ಪಿ.ಎಫ್. ಮತ್ತು ಇ.ಎಸ್.ಐ. ವಂತಿಗೆ ಹಣವನ್ನು ಕಬಳಿಸುತ್ತಾರೆ.

ಹೊರಗುತ್ತಿಗೆ ಪದ್ಧತಿ 'ಸಮಾನ ಕೆಲಸಕ್ಕೆ ಸಮಾನ ವೇತನ' ಎಂಬ ಆಶಯಕ್ಕೆ ವಿರುದ್ಧವಾಗಿದೆ. ನೌಕರರು ಹೆಚ್ಚು ಜವಾಬ್ದಾರಿಯಿಂದ ಕೆಲಸ ಮಾಡುವಂತಾಗಲೂ ಅವರ ಸೇವೆಯನ್ನೂ ಆದಷ್ಟು ಬೇಗ ಕಾಯಂ ಮಾಡಿ, ಕಣ್ಣೀರು ಹಾಕುತ್ತಿರುವ ಬಡಪಾಯಿ ನೌಕರರ ಕೊರಗನ್ನು ನೀಗಿಸಬೇಕೆಂದು ಒತ್ತಾಯಿಸಿ ಈ ಹೋರಾಟ ನಡೆಯಲಿದೆ.

ಗ್ರಾಮ ಪಂಚಾಯತಿ ನೌಕರರು, ಪೌರ ಕಾರ್ಮಿಕರು ಮೊದಲಾದ ನೌಕರರ ವಿಷಯದಲ್ಲಿ ಸರ್ಕಾರ ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡಿ ವಿದ್ಯಾರ್ಥಿ ನಿಲಯಗಳ ಹೊರಗುತ್ತಿಗೆ ನೌಕರರನ್ನು ಕಾಯಂಮಾಡಬೇಕೆಂದು ನೌಕರರ ಪ್ರತಿಭಟನೆಗೆ ಮುಂದಾಗಿದ್ದಾರೆ. ●



ಕಾಶ್ಮೀರದಲ್ಲೇಕೆ ಯುವಜನರು ಲ್ಯಾಪ್‌ಟಾಪ್ ಬದಲು ಕಲ್ಲು ಹಿಡಿದುಕೊಳ್ಳುತ್ತಿದ್ದಾರೆ?

ಕಲಮು 370 ಅಪರಾಧಿಯೇ?

ಬಿಜೆಪಿ ಸರಕಾರ.ಅಧಿಕಾರಕ್ಕೆ ಬಂದ ಕೂಡಲೇ ಸಂವಿಧಾನದ 370ನೇ ಕಲಮಿನ 'ಅನಾನುಕೂಲತೆಗಳ' ಬಗ್ಗೆ "ಮನವರಿಕೆ ಆಗಿರದಿದ್ದವರಿಗೆ ಮನವರಿಕೆ ಮಾಡಿಕೊಡುವ" ಪ್ರಕ್ರಿಯೆ ಆರಂಭಿಸಿರುವುದಾಗಿ ಅದರ ಜವಾಬ್ದಾರಿಯುತ ಮಂತ್ರಿಯೊಬ್ಬರು ಹೇಳಿದ್ದಾರೆ. ಈ ರೀತಿ ಮನವರಿಕೆ ಮಾಡಿಸಲು ಸಾಧ್ಯವೇ, ಅದರಿಂದ, ಪ್ರಧಾನ ಮಂತ್ರಿಗಳು ಆಶಿಸುವಂತೆ 'ಕಾಶ್ಮೀರವನ್ನು ಮತ್ತೆ ಭೂಸ್ವರ್ಗ'ವಾಗಿ ಮಾಡಬಹುದೇ? ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಈ ಲೇಖನದ ಮೊದಲ ಭಾಗದಲ್ಲಿ ಏನಿದು ಕಲಮು 370, ಸಂವಿಧಾನದಲ್ಲಿ ಕಲಮು 370 ಏಕೆ ಬಂತು ಮತ್ತು ಕಲಮು 370 ನೀಡಿದ್ದ ಭರವಸೆಗಳು ಈಡೇರಿವೆಯೇ ಎಂಬುದನ್ನು ಪರಿಶೀಲಿಸಲಾಗಿತ್ತು. ಲೇಖನದ ಉಳಿದ ಭಾಗ ಇಲ್ಲಿದೆ.

ಕಲಮು 370ರಿಂದಾಗಿಯೇ ಪ್ರತ್ಯೇಕತಾವಾದ, ಭಯೋತ್ಪಾದನೆಯೇ?

ಸಂವಿಧಾನದ ಕಲಮು 370ರಿಂದಾಗಿಯೇ ಕಾಶ್ಮೀರ ಕಣಿವೆಯಲ್ಲಿ ಪ್ರತ್ಯೇಕತಾವಾದ ಮತ್ತು ಭಯೋತ್ಪಾದನೆ ಬೆಳೆಯಿತು ಎಂಬುದು ಕಲಮು 370ನ್ನು ವಿರೋಧಿಸುವವರ, ಮುಖ್ಯವಾಗಿ ಸಂಘ ಪರಿವಾರದ ವಾದ. ಆದರೆ ಇದಕ್ಕಿಂತ ಸತ್ಯದೂರವಾದ ಮಾತು ಬೇರೆ ಇರಲಿಕ್ಕಿಲ್ಲ. ಏಕೆಂದರೆ ನಾವು ಈಗಾಗಲೇ ನೋಡಿರುವಂತೆ ಭಾರತೀಯ ಸಂವಿಧಾನದ ಈ ಕಲಮು ಅದರ ಮೂಲರೂಪದಲ್ಲಿ ಜಾರಿಗೆ ಬರಲೇ ಇಲ್ಲ, ಅದನ್ನೇ ಬಳಸಿ ಅದನ್ನು ನಿಷ್ಕ್ರಿಯಗೊಳಿಸಲಾಗಿದೆ.

ಆದ್ದರಿಂದ ಕಾಶ್ಮೀರದಲ್ಲಿ ಪ್ರತ್ಯೇಕತಾವಾದ ಬೆಳೆದಿದ್ದರೆ ಅದಕ್ಕೆ ಈ ಕಲಮಂತೂ ಕಾರಣವಲ್ಲ. ವಾಸ್ತವವಾಗಿ ಅದನ್ನು ನಿಷ್ಕ್ರಿಯಗೊಳಿಸಿದ್ದೇ ಇದಕ್ಕೊಂದು ಪ್ರಮುಖ ಕಾರಣ ಎಂದರೆ ತಪ್ಪಾಗಲಾರದು. ಕಾಶ್ಮೀರದಲ್ಲಿ ಪ್ರತ್ಯೇಕತಾವಾದ ತಲೆಯೆತ್ತಿದ್ದು 1980ರ ದಶಕದ ಅಂತ್ಯಭಾಗದಲ್ಲಿ, ಅಂದರೆ ಅದು ಭಾರತಕ್ಕೆ ಸೇರಲು ನಿರ್ಧರಿಸಿದ, ಅದರಿಂದಾಗಿ ಸಂವಿಧಾನದಲ್ಲಿ 370ನೇ ಕಲಮು ಸೇರಿಸಿದ ಸುಮಾರು ನಾಲ್ಕು ದಶಕಗಳ ನಂತರ.

ಈ ನಾಲ್ಕು ದಶಕಗಳಲ್ಲಿ, ಮತ್ತು ನಂತರವೂ ಭಾರತದ ಆಳುವ ಮಂದಿಯ ಧೋರಣೆಗಳತ್ತ ಕಣ್ಣು ಹಾಯಿಸಿದಾಗ ಪ್ರತ್ಯೇಕತಾವಾದ, ಅದರ ಮುಂದುವರೆದ ಭಾಗವಾಗಿ ಭಯೋತ್ಪಾದನೆ ಹುಟ್ಟಿಕೊಂಡ ಬಗೆಯನ್ನು ಸ್ಪಷ್ಟವಾಗಿ ಕಾಣಬಹುದು.

ಕಾಶ್ಮೀರದಲ್ಲಿ 1930ರ ದಶಕದಲ್ಲಿ ರಾಜಪ್ರಭುತ್ವದ ವಿರುದ್ಧ ಮತ್ತು ಪಾಳೆಯಗಾರೀ ಭೂಮಾಲಕತ್ವದ ವಿರುದ್ಧದ ಚಳುವಳಿಗಳಲ್ಲಿ ಮೂಡಿಬಂದ ನ್ಯಾಶನಲ್ ಕಾನ್ಫರೆನ್ಸ್ ಪಕ್ಷ ಆ ಅವಧಿಯಲ್ಲಿ ರೈತರ, ಕಾರ್ಮಿಕರ ಮತ್ತು ಮಹಿಳೆಯರ ಪ್ರಶ್ನೆಗಳ ಮೇಲೆ ಗಮನ ಕೇಂದ್ರೀಕರಿಸಿದ್ದ ಪಕ್ಷ. ಆದ್ದರಿಂದಲೇ ಭಾರತೀಯ ಉಪಖಂಡದ ಏಕೈಕ ಮುಸ್ಲಿಂ ಬಹುಸಂಖ್ಯಾತ ರಾಜ್ಯವಾದರೂ ಧಾರ್ಮಿಕ ಪ್ರಶ್ನೆಗಳ ಬದಲು ಆರ್ಥಿಕ ಪ್ರಶ್ನೆಗಳ ಸುತ್ತ ಜನಗಳನ್ನು ಅದು ಅಣಿನೆರೆಸಿತ್ತು. ಇದರಿಂದಾಗಿಯೇ ಅಲ್ಲಿನ ಹಿಂದೂ ರಾಜ 'ಸ್ವತಂತ್ರ'ನಾಗಿರ ಬಯಸಿದರೂ ಆತನ ಮುಸ್ಲಿಂ ಪ್ರಜೆಗಳು ಭಾರತ ಗಣರಾಜ್ಯವನ್ನು ಸೇರಲು ನಿರ್ಧರಿಸಿದ್ದು.

ಆದರೆ 1953ರಲ್ಲಿ ಈ ಪಕ್ಷದ ಜನಪ್ರಿಯ ಮುಖಂಡ ಶೇಖ್ ಅಬ್ದುಲ್ಲರನ್ನು ವಜಾಮಾಡಿ ಬಂಧನದಲ್ಲಿಟ್ಟು ಕೇಂದ್ರದಲ್ಲಿ ಆಳುತ್ತಿದ್ದ ಕೈಗೊಂಬೆ ಸರಕಾರಗಳನ್ನು ರಾಜ್ಯದಲ್ಲಿ ಹೇರಿದಾಗ ಸಹಜವಾಗಿಯೇ ಕಾಶ್ಮೀರಿ ಜನತೆಗೆ ಆಘಾತವಾಗಿತ್ತು. ಈ ಅವಧಿಯಲ್ಲಿಯೇ 'ಪ್ಲೆಬಿಸೈಟ್ ಫ್ರಂಟ್ '(ಜನಮತಸಂಗ್ರಹಣೆ ರಂಗ) ಎಂಬುದು ಹುಟ್ಟಿಕೊಂಡಿತು. 1964ರಲ್ಲಿ ಕೇಂದ್ರ ಸರಕಾರ ಶೇಖ್ ಅಬ್ದುಲ್ಲ ಅವರ ಮೇಲಿನ ಆರೋಪಗಳನ್ನು ಹಿಂತೆಗೆದುಕೊಂಡದ್ದರಿಂದ 11 ವರ್ಷಗಳ ಸೆರೆವಾಸದ ನಂತರ ಅವರ ಬಿಡುಗಡೆಯಾಯಿತು.

ನೆಹರೂ ರವರ ಆಶಯದಂತೆ ಕಾಶ್ಮೀರ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡು ಹಿಡಿಯಲು ಪಾಕಿಸ್ತಾನದೊಡನೆ ಸಂಧಾನಕ್ಕೆ ಶೇಖ್ ಅಬ್ದುಲ್ಲ ಒಪ್ಪಿದ್ದರು. ಆದರೆ ಈ ನಡುವೆ ನೆಹರೂ ರವರ ನಿಧನ ಪರಿಸ್ಥಿತಿಯನ್ನು ಬದಲಿಸಿತು. ಶೇಖ್ ಅಬ್ದುಲ್ಲ ಜನಮತ ಸಂಗ್ರಹಣೆಯ ಬೇಡಿಕೆಯನ್ನು ಬಿಟ್ಟಿರಲಿಲ್ಲ. 1965ರಿಂದ 1968ರ ವರೆಗೆ ಅವರು ಮತ್ತೆ ಸೆರೆವಾಸ ಅನುಭವಿಸಬೇಕಾಯಿತು. 1971ರಲ್ಲಿ 18 ತಿಂಗಳ ಕಾಲ ಗಡೀಪಾರು ಮಾಡಲಾಯಿತು. ಆದರೆ ಈ ನಡುವೆ ಭಾರತ–ಪಾಕಿಸ್ತಾನ ಯುದ್ಧ, ಮತ್ತು ಬಾಂಗ್ಲಾದೇಶದ ರಚನೆಯ ನಂತರದ ವಾತಾವರಣದಲ್ಲಿ ಅವರು ಜನಮತ ಸಂಗ್ರಹಣೆಯ ಬೇಡಿಕೆಯನ್ನು ಬಿಟ್ಟದ್ದರಿಂದ, 370ನೇ ಕಲಮಿನ ಪ್ರಕಾರ ಸ್ವಾಯತ್ತತೆ ಕೊಡಬೇಕೆಂಬ ಆಧಾರದಲ್ಲಿ 1974ರಲ್ಲಿ ಇಂದಿರಾಗಾಂಧಿ–ಶೇಖ್ ಅಬ್ದುಲ್ಲ ಒಪ್ಪಂದವಾಯಿತು. ಶೇಖ್ ಅಬ್ದುಲ್ಲ ಮತ್ತೆ ಜಮ್ಮು–ಕಾಶ್ಮೀರ ಸರಕಾರದ ಮುಖ್ಯಸ್ಥರಾದರು, ಆದರೆ 1948ರಂತೆ 'ಪ್ರಧಾನ ಮಂತ್ರಿ'ಯಾಗಿ ಅಲ್ಲ, ಬದಲಾಗಿ ಕಾಂಗ್ರೆಸ್ ಬೆಂಬಲದಿಂದ ಭಾರತದ ಉಳಿದ ರಾಜ್ಯಗಳಂತೆ 'ಮುಖ್ಯಮಂತ್ರಿ'ಯಾಗಿ. ಇದೊಂದು ಅನಗತ್ಯ ರಾಜಿ ಎಂಬ ಭಾವನೆ ಕಾಶ್ಮೀರಿಗಳದ್ದು.

ಆದರೂ ಭಾರತದ ಆಳುವ ಮಂದಿಗೆ ತೃಪ್ತಿಯಾದಂತಿರಲಿಲ್ಲ. ಕಾಂಗ್ರೆಸ್ ಬೇಗನೇ ತನ್ನ ಬೆಂಬಲವನ್ನು ಹಿಂತೆಗೆದುಕೊಂಡಿತು. ನಂತರ ನಡೆದ ಮಧ್ಯಂತರ ಚುನಾವಣೆಗಳಲ್ಲಿ ನ್ಯಾಶನಲ್ ಕಾನ್ಫರೆನ್ಸ್ ಜಯ ಗಳಿಸಿತು. ಶೇಖ್ ಅಬ್ದುಲ್ಲ ಮತ್ತೆ ಮುಖ್ಯಮಂತ್ರಿಗಳಾದರು. 1982ರಲ್ಲಿ ಅವರ ನಿಧನದ ನಂತರ ಮತ್ತೆ ರಾಜಕೀಯ ದೊಂಬರಾಟ ನಡೆಯಿತು. 1983ರಲ್ಲಿ ಕಾಂಗ್ರೆಸ್ ಪಕ್ಷದ ಒತ್ತಡಗಳಿಗೆ ತಲೆಬಾಗಿ ನ್ಯಾಶನಲ್ ಕಾನ್ಫರೆನ್ಸ್ ಪಕ್ಷದ ಫಾರುಕ್ ಅಬ್ದುಲ್ಲ ನೇತೃತ್ವದಲ್ಲಿ ಸಮ್ಮಿಶ್ರ ಸರಕಾರ ರಚನೆಗೊಂಡಿತು. 1984ರಲ್ಲಿ ಮತ್ತೆ ನ್ಯಾಶನಲ್ ಕಾನ್ಫರೆನ್ಸ್ ಪಕ್ಷದಲ್ಲಿ ಕಾಂಗ್ರೆಸ್ ಪ್ರೇರಿತ ಒಡಕು ಉಂಟಾಗಿ, ಪ್ರತ್ಯೇಕಗೊಂಡ ಗುಲಾಮ್ ಮೊಹಮ್ಮದ್ ಶಹಾ ನೇತೃತ್ವದ ಸರಕಾರವನ್ನು ಕೇಂದ್ರದ ಕಾಂಗ್ರೆಸ್ ಸರಕಾರ ಕೂರಿಸಿತು. 1986ರಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಲಾಯಿತು.

ಪ್ರತ್ಯೇಕತಾವಾದದ ಬೆಳವಣಿಗೆ

ಈ ಹಂತದಲ್ಲೇ ಒಂದೆಡೆಯಲ್ಲಿ, ನ್ಯಾಶನಲ್ ಕಾನ್ಫರೆನ್ಸ್ ಪಕ್ಷ ಕೇಂದ್ರದಲ್ಲಿನ ಆಳುವ ಪಕ್ಷದೊಡನೆ ಘರ್ಷಣೆಯ ಬದಲು 'ಸಹಯೋಗ'ದ ನಿಲುವು ತಳೆಯುವುದೇ ವಾಸಿ ಎಂದು ನಿರ್ಧರಿಸಿದಂತೆ ಕಂಡರೆ, ಇನ್ನೊಂದೆಡೆಯಲ್ಲಿ ಹೀಗೆ ಕಾಶ್ಮೀರದ ರಾಜಕೀಯದಲ್ಲಿ ಉಂಟಾದ ತೆರವನ್ನು ತುಂಬಲು ಒಂದೆಡೆ ಮತೀಯ ಶಕ್ತಿಗಳು, ಇನ್ನೊಂದೆಡೆಯಲ್ಲಿ ಪ್ರತ್ಯೇಕತಾವಾದಿ ಶಕ್ತಿಗಳು ಬೆಳೆದು ಬರಲು ಅವಕಾಶವಾಯಿತು ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಾರೆ.

ಮಾರ್ಚ್ 1987ರಲ್ಲಿ ನಡೆದ ಚುನಾವಣೆಗಳಲ್ಲಿ ನ್ಯಾಶನಲ್ ಕಾನ್ಫರೆನ್ಸ್–ಕಾಂಗ್ರೆಸ್ ಸಮ್ಮಿಶ್ರ ಸರಕಾರ ರಚನೆಗೊಂಡಿತು. ಆದರೆ ಜನವರಿ 1990ರಲ್ಲಿ ಅಸೆಂಬ್ಲಿಯನ್ನೇ ವಿಸರ್ಜಿಸಿ ರಾಷ್ಟ್ರಪತಿ ಆಳ್ವಿಕೆ ಹೇರಲಾಯಿತು. ಇದು ಆರು ವರ್ಷಗಳ ಕಾಲ ಇತ್ತು. ಸಶಸ್ತ್ರ ಪ್ರತ್ಯೇಕತಾವಾದಿ ಚಟುವಟಿಕೆಗಳು ಹರಡಲಾರಂಭಿಸಿದ್ದು ಆಗಲೇ. ಇದಕ್ಕೆ ಪಾಕಿಸ್ತಾನ ಮತ್ತು ಅಫಘಾನಿಸ್ತಾನದಿಂದ ಕಾರ್ಯಾಚರಣೆ ನಡೆಸುತ್ತಿದ್ದ ಮುಸ್ಲಿಂ ಮೂಲಭೂತವಾದಿಗಳು ಹಾಗು ಪಾಕಿಸ್ತಾನದಲ್ಲಿನ ಅಮೆರಿಕನ್ ಬೆಂಬಲಿತ ಮಿಲಿಟರಿ ಸಂರಚನೆಗಳ ಕುಮ್ಮಕ್ಕೂ ಸಿಕ್ಕಿತ್ತು. ಅಫಘಾನಿಸ್ತಾನದಲ್ಲಿದ್ದ ಪ್ರಗತಿಪರ ಸರಕಾರವನ್ನು ಉರುಳಿಸಲು ಅಮೆರಿಕನ್ ಬೆಂಬಲದಿಂದ ಪ್ರಯತ್ನಿಸುತ್ತಿದ್ದ ಮುಜಾಹಿದೀನ್ ಈ ಉಗ್ರರ ಹಿಂಸಾಚಾರಕ್ಕೆ ಸ್ಫೂರ್ತಿ ಎಂಬುದನ್ನು ಇಲ್ಲಿ ಗಮನಿಸಬೇಕು. ಭಾರತದ ಆಳುವ ಮಂದಿಯ ಧೋರಣೆಗಳಿಂದಾಗಿ ಕಾಶ್ಮೀರ ಕಣಿವೆಯ ಜನಗಳಲ್ಲಿ ಉಂಟಾಗಿದ್ದ ಪರಕೀಯ ಭಾವ ಮತ್ತು ವಿಶ್ವಾಸಘಾತದ ಭಾವನೆ ಇಂತಹ ಹಿಂಸಾಚಾರವನ್ನು ಪೋಷಿಸುವ ವಾತಾವರಣವನ್ನು ಸೃಷ್ಟಿಸಿತ್ತು.

ಇನ್ನೊಂದೆಡೆಯಲ್ಲಿ ರಾಜ್ಯದ ಆರ್ಥಿಕ ಅಭಿವೃದ್ಧಿ ಪೂರ್ಣವಾಗಿ ಉಪೇಕ್ಷೆಗೆ ಒಳಗಾದ್ದು ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸಿತು. ಉದ್ದಿಮೆಗಳ ಆಧುನೀಕರಣದಲ್ಲಿ ಹೂಡಿಕೆಗಳನ್ನು ಮಾಡಲಿಲ್ಲ; ಶಿಕ್ಷಣ ಮತ್ತು ಆರೋಗ್ಯ ವ್ಯವಸ್ಥೆಗಳು ಸುಧಾರಿಸಲಿಲ್ಲ; ರೈತರು ತೋಟಗಾರಿಕೆ ಮತ್ತು ಪ್ರವಾಸೋದ್ಯಮವನ್ನೇ ಅವಲಂಬಿಸಬೇಕಾಗಿದ್ದ ರೈತರು ಹೆಚ್ಚುತ್ತಿದ್ದ ಉಗ್ರರ ಹಿಂಸಾಚಾರದಿಂದ ಮತ್ತಷ್ಟು ಸಂಕಷ್ಟಗಳಿಗೀಡಾದರು.

ಜನರು ಭೀತಿಯ ವಾತಾವರಣದಲ್ಲಿ ಬದುಕಬೇಕಾದ ಪರಿಸ್ಥಿತಿಗಳಲ್ಲಿ ಸರಕಾರದಿಂದ ಏನೂ ನೆರವು ದೊರೆಯಲಿಲ್ಲ. ಅದು ಉಗ್ರರ ಹಿಂಸಾಚಾರವನ್ನು ಎದುರಿಸಲು ಪ್ರತಿ–ದಾಳಿಗಳಲ್ಲೇ ಮಗ್ನವಾಯಿತು, 1990ರಲ್ಲಿ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರಗಳ ಕಾಯ್ದೆ(ಎಎಫ್‌ಎಸ್‌ಪಿಎ)ಯನ್ನು ಹೇರಿತು. ಈ ಕಾಯ್ದೆಯ ಮರೆಯಲ್ಲಿ ಅಮಾಯಕ ನಾಗರಿಕರ ಮೇಲೆ ನಡೆದ ಅತ್ಯಾಚರಣೆಗಳು ಉಗ್ರರ ಹಿಂಸಾಚಾರಕ್ಕೆ ಮತ್ತಷ್ಟು ಪೋಷಣೆ ಒದಗಿಸಿದವು.

ಅಂದರೆ ಇವಕ್ಕೆಲ್ಲ ಕಾರಣವಾದದ್ದು ಸಂಘ ಪರಿವಾರದವರು ಪ್ರಚಾರ ಮಾಡುವಂತೆ ಸಂವಿಧಾನದ 370ನೇ ವಿಧಿ ಅಲ್ಲ, ಬದಲಾಗಿ ಅದನ್ನು ಬದಿಗೊತ್ತಿದ್ದು, ಜತೆಗೆ ಜನತೆಗೆ ಪ್ರಜಾಪ್ರಭುತ್ವವನ್ನು ನಿರಾಕರಿಸಿದ್ದು ಎಂಬುದು ಸ್ಪಷ್ಟ.

ಕಲಮು 370ಕ್ಕೆ ಸಂಘಪರಿವಾರದ ವಿರೋಧ ಏಕೆ?

ಬಿಜೆಪಿಯಂತೆ ಅದರ ಹಿಂದಿನ ಅವತಾರವಾದ ಭಾರತೀಯ ಜನಸಂಘ ಕೂಡ ಕಲಮು 370ನ್ನು ವಿರೋಧಿಸುತ್ತಿತ್ತು. ಕಳೆದ ಸಂಚಿಕೆಯಲ್ಲಿ ಈ

ಪುಟ 10 ನೋಡಿ

ವಿಶ್ವಾಸದ ಕೊರತೆ ಮತ್ತು ಪರಕೀಯ ಭಾವ ಶಿಖರಕ್ಕೇರಿದೆ

–ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿಗಳಿಗೆ ಸಿಪಿಐ(ಎಂ) ಮುಖಂಡ ತರಿಗಾಮಿಯವರ ಪತ್ರ

ಪುಟ 2 ರಿಂದ



ಜುನೈದ್ ಅಹ್ಮದ್ ಅಂತಿಮ ಯಾತ್ರೆ

ಹೇಳಬೇಕಾಗಿಲ್ಲ. ಕೊನೆಗಾಣದ ಬೃಹತ್ ಪ್ರತಿಭಟನೆಗಳು ಮತ್ತು ಹಿಂಸಾಚಾರದ ವಿಷವರ್ತುಲದ ಈ ಪ್ರಸಕ್ತ ಸನ್ನಿವೇಶಕ್ಕೆ ಆಳವಾದ ರಾಜಕೀಯ ಬೇರುಗಳಿವೆ, ಇದಕ್ಕೆ ಪರಿಹಾರ ನಗ್ನ ಬಲಪ್ರಯೋಗದಲ್ಲಿಲ್ಲ, ಬದಲಾಗಿ ಜನಗಳ ರಾಜಕೀಯ ಆಕಾಂಕ್ಷೆಗಳನ್ನು ಮತ್ತು ಅಳಲುಗಳನ್ನು ಪರಿಶೀಲಿಸುವುದರಲ್ಲಿ ಇದೆ ಎಂಬ ನನ್ನ ಮತ್ತು ನನ್ನ ಪಕ್ಷದ ತಿಳಿವನ್ನು ಪುನರುಚ್ಚರಿಸುತ್ತೇನೆ.

ಪರಿಸ್ಥಿತಿಯನ್ನು ಕೇವಲ ಕಾನೂನು ವ್ಯವಸ್ಥೆಯ ಸಮಸ್ಯೆಯೆಂದು ಎದುರಿಸುವಾಗ ವಿಪರೀತ ಮತ್ತು ವಿವೇಚನಾಶೂನ್ಯ ಬಲಪ್ರಯೋಗ ಸರಕಾರದಲ್ಲಿ ಜನಸಮೂಹಗಳ ನಂಬಿಕೆಯನ್ನು ಮತ್ತಷ್ಟು ಕುಂಠಿತಗೊಳಿಸುತ್ತದೆ, ಕಂದರವನ್ನು ಮತ್ತಷ್ಟು ಅಗಲಗೊಳಿಸಿ ಅದನ್ನು ಮುಚ್ಚುವುದೇ ಕಷ್ಟವಾಗುತ್ತದೆ ಎಂದು ನಾನು ಒತ್ತಿ ಹೇಳಬಯಸುತ್ತೇನೆ. ಈಗಾಗಲೇ ವಿಶ್ವಾಸದ ಕೊರತೆ ಮತ್ತು ಪರಕೀಯ ಭಾವ ಶಿಖರಕ್ಕೇರಿದೆ, ಅದು ಅಪಾಯಕಾರಿ ಪರಿಣಾಮಗಳಿಗೆ ಕಾರಣವಾಗಬಹುದು.

ಬುಡಮಟ್ಟದಲ್ಲಿನ ಅನಿಶ್ಚಿತ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಅದನ್ನು ಅತ್ಯಂತ ಎಚ್ಚರದಿಂದ ನಿಭಾಯಿಸುವುದು ಬುದ್ಧಿಮತ್ತೆಯ ಸಂಗತಿ, ಹಾಗೆ ಮಾಡುವುದು ಒಳ್ಳೆಯದು. ಸಾರ್ವಜನಿಕ ವ್ಯವಸ್ಥೆಯನ್ನು ಕಾಪಾಡುವಾಗ ಕಾನೂನು ಜಾರಿ ಮಾಡುವ ಸಂಸ್ಥೆಗಳು ತಮ್ಮದೇ ಕಾನೂನುಗಳಿಂದ ಮುಯ್ಯಿಗೆ ಮುಯ್ಯಿ ಎಂಬಂತೆ ವರ್ತಿಸಬಾರದು. ಪೋಲೀಸರು ಮತ್ತು ಅರೆ ಸೈನಿಕ ಪಡೆಗಳು ಕಾನೂನನ್ನು ರಕ್ಷಿಸಬೇಕೇ ಹೊರತು ಅದನ್ನು ಮುರಿಯಬಾರದು. ಪೋಲೀಸರು ಮತ್ತು ಭದ್ರತಾ ಪಡೆಗಳು ಜನಗಳನ್ನು ಹಿಗ್ಗಾಮುಗ್ಗಾ ಬಡಿಯುತ್ತಾರೆ, ರಾತ್ರಿಗಳಲ್ಲಿ ಮನೆಗಳಿಗೆ ನುಗ್ಗುತ್ತಾರೆ, ಆಸ್ತಿಗಳನ್ನು ಹಾಳುಗೆಡವುತ್ತಾರೆ ಮತ್ತು ಕೈಗೆ ಸಿಕ್ಕವರನ್ನು ಎಳೆದುಕೊಂಡು ಹೋಗುತ್ತಾರೆ ಎಂಬ ವರದಿಗಳ ಸುರಿಮಳೆಯಾಗುತ್ತಿದೆ. ಇದನ್ನು ತಕ್ಷಣವೇ ನಿಲ್ಲಿಸಬೇಕು.

ಇದುವರೆಗೆ ಹಲವಾರು ಯುವಜನರು ಮತ್ತು ರಾಜಕೀಯ ಕಾರ್ಯಕರ್ತರನ್ನು 'ಸಾರ್ವಜನಿಕ ಸುಭದ್ರತೆಯ ಕಾಯ್ದೆ'(ಪಿಎಸ್‌ಎ)ಯ ಅಡಿಯಲ್ಲಿ ಕಂಬಿ ಎಣಿಸುವಂತೆ ಮಾಡಲಾಗಿದೆ. ಇದೊಂದು ಕರಾಳ ಕಾನೂನಾಗಿದ್ದು ಇದನ್ನು ರಾಜ್ಯದಲ್ಲಿ ಕಾನೂನು ಮತ್ತು ವ್ಯವಸ್ಥೆಯನ್ನು ಕಾಯ್ದುಕೊಳ್ಳಲು ಬಳಸಬಾರದು ಎಂದು ಬೇರೆ ಹೇಳಬೇಕಾಗಿಲ್ಲ. ಒಂದು ಚುನಾಯಿತ ಸರಕಾರ ಅತ್ಯಂತ ಗಂಭೀರ ಉದ್ರೇಕಕಾರಿ ಸನ್ನಿವೇಶಗಳ ಎದುರಲ್ಲೂ ಬಲಪ್ರಯೋಗವನ್ನು ತಪ್ಪಿಸಬೇಕು ಎಂದು ಸಾಮಾನ್ಯವಾಗಿ ನಿರೀಕ್ಷಿಸಲಾಗುತ್ತದೆ.

ಗಾಲಿಬ್ ಹೇಳಿರುವಂತೆ, ಮಾತು ಹೇಳದಿರಲಾಗುತ್ತಿಲ್ಲ, ಪರಿಸ್ಥಿತಿ ಕಠಿಣವಾಗಿದೆ ಮತ್ತು ಜೀವಗಳು ಪ್ರಿಯವಾಗಿವೆ!

ಎಂ.ವೈ.ತರಿಗಾಮಿ

ಉಡುಪಿ ಸರಕಾರಿ ಆಸ್ಪತ್ರೆಯ ಖಾಸಗೀಕರಣ ಏಕೆ ಬೇಡ?

ಉಡುಪಿಯ ನಾಗರಿಕ ಒಕ್ಕೂಟದ ಮನವಿ

ಉಡುಪಿಯ ಸರಕಾರಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯನ್ನು ಖಾಸಗಿ ಒಡೆತನ ಹಾಗು ನಿರ್ವಹಣೆಗೆ ಒಪ್ಪಿಸುವುದರ ಕುರಿತ ನಮ್ಮ ಭಿನ್ನಮತ ಹಾಗೂ ಪ್ರತಿರೋಧಕ್ಕೆ ಕಾರಣಗಳು:

ಖಾಸಗಿಯವರಿಗೆ ವಹಿಸುವುದೇಕೆ?:

ಪ್ರಸ್ತುತ ಸರಕಾರಿ ವ್ಯವಸ್ಥೆಯಡಿ, 70 ಹಾಸಿಗೆಗಳ ಉಡುಪಿಯ ಸರಕಾರಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ, ನೂರಕ್ಕೆ ನೂರು ಉಚಿತ ಸೇವೆ ಒದಗಿಸಲಾಗುತ್ತಿದ್ದು, ಬಡವರಿಗೆ ಸೂಕ್ತ ಚಿಕಿತ್ಸೆ ದೊರಕಿ ಜೀವದಾಯಿಯಾಗಿದೆ. ದೇಶದಲ್ಲೇ ಅತ್ಯಂತ ಕಡಿಮೆ ಶಿಶು ಮರಣ ಪ್ರಮಾಣ ಹಾಗೂ ತಾಯಿ ಮರಣ ಪ್ರಮಾಣಗಳಿರುವ ಜಿಲ್ಲೆ ನಮ್ಮದೆಂಬ ಹೆಗ್ಗಳಿಕೆಗೆ ಜಿಲ್ಲಾಸ್ಪತ್ರೆಯ ಕೊಡುಗೆಯೂ ದೊಡ್ಡದಿದೆ. ಅಂತಹ ಆಸ್ಪತ್ರೆಯನ್ನು ಒಮ್ಮಿಂದೊಮ್ಮೆಗೇ ಖಾಸಗಿ ಒಡೆತನದಲ್ಲಿ ಸುಪರ್ ಸ್ಪೆಷಾಲಿಟಿ ಆಸ್ಪತ್ರೆಯಾಗಿಸುವ ಬದಲಿಗೆ, ಈಗಿರುವ ವೈದ್ಯರು ಹಾಗು ನರ್ಸ್‌ಗಳ ಕೊರತೆಯನ್ನು ತುಂಬುವುದು; ಕಳಪೆ ಕಾಮಗಾರಿಯಿಂದ ದುಸ್ಥಿತಿ ತಲುಪಿರುವ ಕಟ್ಟಡವನ್ನು ಸುಸ್ಥಿರಗೊಳಿಸುವುದು; ಮತ್ತೂ ಈಗಿರುವ ಉಪಕರಣಗಳನ್ನು ಗರಿಷ್ಠ ಸೇವೆಗೆ ಬಳಸಿಕೊಳ್ಳಲು ಸೂಕ್ತ ತಜ್ಞರನ್ನು ನೇಮಕ ಮಾಡುವುದು–ಇದಕ್ಕೆ ಬೇಕಾದ ಹಣಕಾಸು ಎಷ್ಟು, ಅದನ್ನು ಒದಗಿಸಿಕೊಳ್ಳುವುದು ಹೇಗೆ ಎಂಬ ಕಾರ್ಯಯೋಜನೆಯನ್ನು ಸಿದ್ಧಪಡಿಸುವುದು ಹೆಚ್ಚು ಮುಖ್ಯವಾಗಿದೆ. ಅದನ್ನು ಬಿಟ್ಟು, ಯಾವುದೇ ಸತ್ಪರಿಣಾಮ ನಿಶ್ಚಿತವಲ್ಲದ ಖಾಸಗಿಕರಣದ ಮಾರ್ಗವನ್ನು ಏಕೆ ಆಯ್ದುಕೊಳ್ಳಲಾಗುತ್ತಿದೆ?

ಲಾಭರಹಿತ ಸೇವೆಯ ಮಾದರಿ:

ಯಾವುದೇ ಖಾಸಗಿ ವ್ಯವಹಾರಸ್ಥರಿಗೆ ಬಡವರಿಗೆ ಸೇವೆ ಮಾಡಬೇಕೆಂಬ ಉದಾತ್ತ ಉದ್ದೇಶವಿದ್ದಲ್ಲಿ, ಈ ಮೇಲಿನ ಉದ್ದೇಶಗಳಿಗೆ ಅವರು ದಾನ ನೀಡಿದರೆ ಸಾಕಾಗುತ್ತದೆ. ಅದರ ಬದಲು, ಹಾಜಿ ಅಬ್ದುಲ್ ಸಾಹೇಬರು 'ಸರಕಾರಿ ಆಸ್ಪತ್ರೆಯ ನಿರ್ಮಾಣಕ್ಕೆ ಮಾತ್ರವೇ' ದಾನ ರೂಪದಲ್ಲಿ ನೀಡಿದ ಬೆಲೆಬಾಳುವ ಸ್ಥಿರಾಸ್ತಿಯನ್ನು, ಆ ಮೌಲ್ಯವನ್ನೇ ಮರೆತು ಖಾಸಗಿ ಸಂಸ್ಥೆಗೆ ಹಸ್ತಾಂತರಿಸುವುದು ಸರಿಯಲ್ಲ. ಜಿಲ್ಲೆಯ ಅನೇಕ ಆಸ್ಪತ್ರೆಗಳಲ್ಲಿ ದಾನಿಗಳು ವಿವಿಧ ಬಗೆಯ ಸೌಲತ್ತುಗಳನ್ನು ಒಡೆತನ–ಲಾಭಾಕಾಂಕ್ಷೆ ಇಲ್ಲದೆ ದಾನರೂಪದಲ್ಲಿ ಒದಗಿಸಿದ್ದಾರೆ, ಇಲೂ ಅವರಂತಹ ಕೊಡುಗೈ ದಾನಿಗಳ ನೆರವನ್ನು ಪಡೆಯಬಹುದಾಗಿದೆ. ಕೇರಳ ರಾಜ್ಯದಲ್ಲಿ, ಪಾರದರ್ಶಕವಾದ, ಸರಕಾರದ ಉಸ್ತುವಾರಿಯಲ್ಲಿರುವ, ಜನ ಸಮುದಾಯದ ಜವಾಬ್ದಾರಿಯುತ ಭಾಗವಹಿಸುವಿಕೆಯನ್ನು ಉತ್ತೇಜಿಸುವ 'ಸಹಕಾರಿ ಆಸ್ಪತ್ರೆ'ಗಳು ಅತ್ಯಂತ ಯಶಸ್ವಿಯಾಗಿ ನಡೆಯುತ್ತಿವೆ. ಅಂತಹ ಮಾದರಿಗಳನ್ನು ಸರಕಾರ ಪರಿಗಣಿಸಬಾರದೇಕೆ? ನೇರವಾಗಿ **BOOT** ಮಾದರಿಯ ಖಾಸಗಿಕರಣಕ್ಕೆ ಉತ್ಸಾಹ ತೋರುತ್ತಿರುವುದೇಕೆ?

BOOT ಮಾದರಿಯೇ ಮಾರಕ:

ಪ್ರಸ್ತುತ, ಬಿ.ಆರ್. ವೆಂಚರ್ಸ್‌ನವರಿಗೆ ಉಡುಪಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯನ್ನು Build Own Operate and Transfer (BOOT) ಮಾದರಿಯಲ್ಲಿ ಅರವತ್ತು ವರ್ಷಗಳಿಗೆ ಹಸ್ತಾಂತರಿಸುವ ಪ್ರಸ್ತಾಪವನ್ನು ಸಚಿವ ಸಂಪುಟ ಅಂಗೀಕರಿಸಿರುವ ಸುದ್ದಿ ಬಂದಿದೆ. ಹತ್ತು ವರ್ಷಗಳಿಗೆ ಲಾಭ ಹಂಚಿಕೆಯ ವ್ಯವಹಾರ ಒಪ್ಪಂದವಿದ್ದಾಗ್ಯೂ ಅಪೊಲೋದಂಥ ಪ್ರಖ್ಯಾತ ಸಂಸ್ಥೆಯು ಬಡವರ ಆರೋಗ್ಯದ ವಿಷಯದಲ್ಲಿ ನಿರ್ಲಕ್ಷ್ಯವಹಿಸಿ, ಸರಕಾರದಿಂದ ವೆಚ್ಚ ಭರಿಸಿಕೊಂಡ ಉದಾಹರಣೆ ನಮ್ಮೆದಿರು ಇದೆ. ಆದರೆ BOOT ವಿಧಾನದಲ್ಲಿ ಒಪ್ಪಂದದ ಪ್ರಕಾರ, ಕಟ್ಟಡ ಕಟ್ಟಿ, ಸಲಕರಣೆ ಒದಗಿಸಿದ ಸೇವೆಗೆ ತತ್ಫಲವಾಗಿ, ನಿಗದಿತ ಸಮಯದವರೆಗೂ, ಖಾಸಗಿ ಸಂಸ್ಥೆಯು ಒಡೆತನ ಮತ್ತು ನಿರ್ವಹಣೆಯ ಸಂಪೂರ್ಣ ಹಕ್ಕು ಹೊಂದಿರುತ್ತದೆ; ಸೇವ ಶುಲ್ಕವು ಖಾಸಗಿ ಸಂಸ್ಥೆಯು ತಾನು ಹೂಡಿದ ಬಂಡವಾಳ ಹಾಗು ಅದರ ಮೇಲೆ ತನಗೆ ನಿಗದಿತ ಸಮಯದಲ್ಲಿ ದಕ್ಕಬೇಕಾದ ಲಾಭದ ದರವನ್ನು ಅವಲಂಭಿಸಿ ನಿರ್ಧಾರ ಮಾಡುವ ಹಕ್ಕು ಸಂಪೂರ್ಣವಾಗಿ ಯೋಜನೆ ವಹಿಸಿಕೊಂಡ ಕಾಂಟ್ರಕ್ಟುದಾರನದಾಗಿರುತ್ತದೆಯೇ ಹೊರತಾಗಿ, ಯೋಜನೆಯನ್ನು ವಹಿಸಿದ ಪಕ್ಷ–ಕ್ಕೆ (Client) ಮಧ್ಯಪ್ರವೇಶದ ಹಕ್ಕು ಇರುವುದಿಲ್ಲ. ಇಂಥಹ ವ್ಯವಹಾರಿಕ ಒಪ್ಪಂದದಲ್ಲಿ ಸರಕಾರವು, 'ಬಡ ರೋಗಿಗಳಿಗೆ ಸೂಕ್ತ ಕಡಿಮೆ ದರದಲ್ಲಿ ಸೇವೆ ಒದಗಿಸುತ್ತೇವೆ' ಎಂಬ ಅಸ್ಪಷ್ಟ ಪ್ರಮಾಣವನ್ನು ನಂಬುವುದರ ಹೊರತು, ಬೇರಾವ ಮಧ್ಯಪ್ರವೇಶದ ಮಾರ್ಗಗಳೂ ಇರುವುದಕ್ಕೆ, ಈ ಬಗೆಯ ಒಪ್ಪಂದಗಳು ಅವಕಾಶ ಮಾಡಿಕೊಡುವುದಿಲ್ಲ. ಕರ್ನಾಟಕ ಸರಕಾರದ ಆರೋಗ್ಯ ಇಲಾಖೆಯ ಮುಖ್ಯ ಕಾರ್ಯದರ್ಶಿಯವರು ಸಚಿವ ಸಂಪುಟ ಸಚಿವಕ್ಕೆ ಸಲ್ಲಿಸಿದ ಪ್ರಸ್ತಾವದಲ್ಲಿ 'ಸೂಕ್ತ ದರದಲ್ಲಿ' ಎಂದು ಇದೆಯೇ ವಿನಃ, 'ಉಚಿತವಾಗಿ' ಎಂದಿಲ್ಲ. BOOT ಮಾದರಿಯಲ್ಲಿ 'ಉಚಿತ ಸೇವೆ' ಯ ಮಾತು ಅಪ್ರಸ್ತುತ. ಜಗತ್ತಿನಾದ್ಯಂತ BOOT ವ್ಯವಸ್ಥೆ ಕಾರ್ಯ ನಿರ್ವಹಿಸುತ್ತಿರುವುದು ಸಾಮಾನ್ಯ ಜ್ಞಾನ. ಇದನ್ನು ಸಂಪುಟ ಗಮನಕ್ಕೆ ತಂದು ಕೊಂಡಿದೆ–ಯೇ?

ಬಡತನವನ್ನು ಅಳೆಯಲು ಬಿಪಿಎಲ್ ಮಾಪಕದ ಸಮಸ್ಯೆ:

ಯಾವುದೇ ವ್ಯವಹಾರ ವಿಧಾನವನ್ನು ಅನುಸರಿಸಿದರೂ, 'ಬಡವರಿಗೆ ಉಚಿತ ಸೇವೆ ಒದಗಿಸುತ್ತೇವೆ' ಎಂದರೂ, ಬಡತನವನ್ನು ಅಳೆಯಲು ಒಂದು ಮಾಪಕ ಬೇಕು. ಈಗ ಸರಕಾರವೂ, ಭಾಗಿದಾರ ಖಾಸಗಿ ಸಂಸ್ಥೆಯೂ, BPL Card ಮಾಪನದ ಮಾತನಾಡುತ್ತವೆ. ಆಸ್ತಿಹೀನ ನಿರ್ಗತಿಕರಿಗೆ, ವಲಸೆದಾರ ಕೂಲಿಗಳಿಗೆ, ಬೀದಿ ನಿವಾಸಿಗಳಿಗೆ ಪಡಿತರ ಚೀಟಿಯೇ ಇರದಿರುವುದರಿಂದ ಅವರಿಗೆ BPL card ದೊರಕದು. ಸದ್ಯದ ಸರಕಾರಿ ಆಸ್ಪತ್ರೆಯಲ್ಲಿ ಅಂತಹ ನಿರ್ಗತಿಕರು ಬಂದು ಆರೋಗ್ಯ ಸೇವೆ ಪಡೆಯುತ್ತಿದ್ದಾ–ರೆ. BPL card ಹೊಂದಲು ಬದಲಿ ವ್ಯವಸ್ಥೆಯನ್ನು ಸರಕಾರ ನಿಯೋಜಿಸಿದೆಯೇ? ಅದಾಗದೆ ಈಗ ಸೇವೆ ಪಡೆಯುತ್ತಿರುವ ಮನುಷ್ಯರ ಪಾಡು ಖಾಸಗಿಕರಣದ ನಂತರವೇನು? ಹಾಗೆಯೇ BPL card ಒದಗಿಸುವ ನಿಯಮಾವಳಿಗಳ ಮಾಪನವೇ ವಿವಾದಾಸ್ಪದವಾಗಿದ್ದು, ನೈಜ ಬಡವರಿಗೆ BPL card ದೊರಕದ ರಾಶಿ ಸಮಸ್ಯೆಗಳು ಇಲಾಖೆಯ ಮುಂದಿದೆ; ಆದರೆ ಆ ಬಗೆ ವಂಚಿತರಾದವರು ಆರೋಗ್ಯ ಸೇವೆಯಿಂದ ವಂಚಿತರಾಗಿಲ್ಲ. ಅಂತಲ್ಲಿ, ಕಡು ನಿರ್ಗತಿಕರನ್ನು ಆರೋಗ್ಯ ಸೇವೆಗಳಿಂದ ವಂಚಿತರನ್ನಾಗಿಸುವ ಮಾಡುವ ಯೋಚನೆಯೇಕೆ?

ತಪಾಸಣೆ ಉಚಿತ, ಉಳಿದ ಸೇವೆಗಳು ಖಚಿತವೋ?:

ಒಪ್ಪಂದದಲ್ಲಿ 'ಬಡವರಿಗೆ ಚಿಕಿತ್ಸೆ ಉಚಿತ' ಎಂಬ ಸಾಮಾನ್ಯೀಕರಣವಿರುತ್ತದೆ. ಅದರ ಅರ್ಥ, ಸಾಮಾನ್ಯ ರೋಗ ತಪಾಸಣೆಗೆ ಶುಲ್ಕವಿಲ್ಲ ಎಂದು ಮಾತ್ರವಾಗಿರುತ್ತದೆ. ಆ ನಂತರ, (1) ರೋಗ ನಿರ್ಧಾರಕ್ಕೆ ಹೆಚ್ಚಿನ ಪರೀಕ್ಷೆಗಳ ಅವಶ್ಯಕತೆ ಇದ್ದು, ಅದರ ತಪಾಸಣೆಯನ್ನು ಒಪ್ಪಂದಕ್ಕೆ ಹೊರಗಿರುವ (ಅಥವಾ ಒಳಗೇ ಇರುವ) ಖಾಸಗಿ ತಪಾಸಣ ಸಂಸ್ಥೆಗೆ ವಹಿಸಲಾಗಿರುತ್ತದೆ–ಅಲ್ಲಿ ಹಣ ತೆರಬೇಕೆ ವಿನಹ BPL ನಡೆಯುವುದಿಲ್ಲ. (2) ಇಂದಿನ ಆಧುನಿಕ ವೈದ್ಯಕೀಯವು ಸಾಮಾನ್ಯ ವೈದ್ಯಕೀಯ ಹಾಗು ತಜ್ಞ ವೈದ್ಯಕೀಯ ಎಂದು ವಿಗಂಡಣೆ–ಯಾಗಿದೆ. ಖಾಸಗಿ ವ್ಯವಸ್ಥೆಯು ಸಾಮಾನ್ಯ ವೈದ್ಯಕೀಯ ತಪಾಸಣೆ ನಡೆಸಿ, ರೋಗ ಖಾಚಿತ್ಯಕ್ಕೆ ತಜ್ಞರ ಅಭಿಪ್ರಾಯಕ್ಕೆ ಸೂಚಿಸುತ್ತಾರೆ–ಎಲ್ಲಾ ಬಗೆ–ಯ ತಜ್ಞ ವೈದ್ಯಕೀಯ ಪರೀಕ್ಷೆಗಳನ್ನು 'ಬಡವರಿಗೆ' ಉಚಿತವಾಗಿ ನಡೆಸುವಂತೆ ಕರಾರು ಮಾಡುವುದಕ್ಕೆ BOOTನಲ್ಲಿ ಅವಕಾಶವಿದೆಯೋ? (ಸಾಮಾನ್ಯ ಪರೀಕ್ಷೆಗಳನ್ನು ನಡೆಸಿ, ತಜ್ಞ ಪರೀಕ್ಷೆಗಳಿಗೆ ಒಪ್ಪಂದಕ್ಕೆ ಹೊರಗಿನ ತಜ್ಞರಿಗೆ ಒದಗಿಸುವುದು PPP ಯಲ್ಲಿ ಸಾಮಾನ್ಯವಾಗಿ ಹೋಗಿದೆ!) (3) ಒಳರೋಗಿಗಳಾಗಿ ಸೇರುವ ಬಡವರಿಗೆ 'ಹಾಸಿಗೆ ಸುಂಕವಿಲ್ಲ' ಎನ್ನಬಹುದು. ಆದರೆ, ಅವರ ಚಿಕಿತ್ಸೆಗೆ ಬಳಸುವ ಸಿರಿಂಜ್, ಗ್ಲುಕೋಸ್ ದ್ರವ್ಯ ಮುಂತಾದ ಶುಶೂಷಾ ಸಾಮಾನುಗಳನ್ನು ಉಚಿತವಾಗಿ ನೀಡಲಾಗುತ್ತದೋ? (ಅವುಗಳ ಮೌಲ್ಯ ಸಾವಿರಾರು ರೂಪಾಯಿಗಳಾಗಿರುತ್ತದೆ–ಈಗ ಸರಕಾರಿ ವ್ಯವಸ್ಥೆಯಲ್ಲಿ ಅವು ಉಚಿತ). (4) ಒಳ ಹಾಗು ಹೊರ ರೋಗಿಗಳಿಗೆ ರೋಗ ನಿರ್ಣಯಿಸಿ, ತೆಗೆದುಕೊಳ್ಳಬೇಕಾದ ಮದ್ದನ್ನು prescription ಆಗಿ ಕೊಡುವುದು ಖಾಸಗಿಯವರ ರೂಢಿ–ಅವರು ಔಷಧಿಯ ಸಾಮಾನ್ಯ ಹೆಸರನ್ನು ಸೂಚಿಸದೇ, ಒಂದು ಔಷಧಿಯ ಕಂಪೆನಿಯ ಬ್ರಾಂಡ್ ಹೆಸರನ್ನು ಬರೆಯುವುದು ಈಗ ಸಾಮಾನ್ಯವಾಗಿರುವ medico-pharmacy nexus. ಪ್ರಸ್ತುತ ಸರಕಾರಿ ಆಸ್ಪತ್ರೆಗಳಲ್ಲಿ prescribed drugsನ್ನು ಉಚಿತವಾಗಿ ನೀಡಲಾಗುತ್ತದೆ (ಹಾಗು ಅವುಗಳ ಮಾರುಕಟ್ಟೆ ಮೌಲ್ಯ ನೂರಾರು ರೂಪಾಯಿಗಳಾಗಿರುತ್ತವೆ). ಔಷಧಿಗಳನ್ನು ಉಚಿತವಾಗಿ ನೀಡುವ ವ್ಯವಸ್ಥೆಯನ್ನು ಹೇಗೆ ಸರಕಾರ ನಿಯಂತ್ರಿಸುತ್ತದೆ?

'ಶ್ರೀಮಂತರ ಸೇವೆಯ ಲಾಭದಲ್ಲಿ ಬಡವರ ಚಿಕಿತ್ಸೆ'?:

ಪ್ರಸ್ತುತ BOOT ವ್ಯವಹಾರ ವ್ಯವಸ್ಥೆಯಲ್ಲಿ, ಖಾಸಗಿ ಒಡೆತನ–ನಿರ್ವಹಣ ಭಾಗಿದಾರರು ಕೊಡಬಹುದಾದ ಆಶ್ವಾಸನೆ ಇಷ್ಟೇ: "ನಾವು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪಿಸಿ, ಶ್ರೀಮಂತ ರೋಗಿಗಳಿಗೆ (ಅಧಿಕ ಶುಲ್ಕದಲ್ಲಿ) ಚಿಕಿತ್ಸೆ ನೀಡಿ, ಅದರಿಂದ ಉತ್ಪನ್ನವಾಗುವ ಲಾಭದಲ್ಲಿ, 'ಬಡರೋಗಿ'ಗಳಿಗೆ 'ಉಚಿತ ಸೇವೆ' ನೀಡುತ್ತೇವೆ." ಈಗಾಗಲೇ ಉಡುಪಿ ಜಿಲ್ಲೆಯಲ್ಲಿ, ಹಣವಿದ್ದವರಿಗೆ ಹೆಚ್ಚಿನ ಲಾಭದಲ್ಲಿ ಚಿಕಿತ್ಸೆ ನೀಡುವ ಕನಿಷ್ಠ ನೂರು ಆಸ್ಪತ್ರೆಗಳಿವೆ. ಈ ಅಸ್ಪತ್ರೆಗಳು ಚಿಕಿತ್ಸೆ ವೆಚ್ಚ+ಆಸ್ಪತ್ರೆಯ ನಿರ್ವಹಣೆ ವೆಚ್ಚ+ಲಾಭ ದರ=ವಿಧಿಸುವ ಶುಲ್ಕ ಎನ್ನುವ ಸೂತ್ರದಡಿ ಕಾರ್ಯ ನಿರ್ವಹಿಸುತ್ತವೆ. ಪ್ರಸ್ತುತ BOOT ವಿಧಾನದನ್ವಯ ಒಪ್ಪಂದವಾದರೆ, ಕಂಟ್ರಾಕ್ಟಿಂಗ್ ಸಂಸ್ಥೆಯು, ಚಿಕಿತ್ಸೆ ವೆಚ್ಚ+ ಆಸ್ಪತೆಯ ನಿರ್ವಹಣೆ ವೆಚ್ಚ+ಲಾಭ ದರ+ 'ಬಡವರ ಸೇವೆಗೆ ಬಳಸುವ ವೆಚ್ಚ'=ವಿಧಿಸುವ ಶುಲ್ಕ, ಎಂದು ನಿರ್ಧರಿಸಬೇಕಾಗುತ್ತದೆ; ಅದು ಉಳಿದ ಖಾಸಗಿ ಆಸ್ಪತ್ರೆಗಳು ವಿಧಿಸುವ ಸೇವ ಶುಲ್ಕಕ್ಕಿಂತ ಹೆಚ್ಚಾಗಿರುತ್ತದೆ; ಹಾಗಾದಲ್ಲಿ ಶ್ರೀಮಂತರು ಸದರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ದಾನ ಮನೋಭಾವದಲ್ಲಿ ಬರಬೇಕೆ ವಿನಹ, ಸಹಜ ಶ್ರೀಮಂತ ಸೇವೆ ಪಡೆಯಲು ಅಲ್ಲ.

ಈ ಸನ್ನಿವೇಶದಲ್ಲಿ ಸದರಿ ಕಾಂಟ್ರಕ್ಟುದಾರ ಖಾಸಗಿ ಸಂಸ್ಥೆಯು: (1) ಮುಂದಿನ 60 ವರ್ಷಗಳಲ್ಲಿ ತಾನು 'ಉಚಿತವಾಗಿ ಸೇವೆ ಸಲ್ಲಿಸಬೇಕಾದ ರೋಗಿಗಳ' ಸಂಖ್ಯೆ ಎಷ್ಟು? (2) ಇಷ್ಟು ಪ್ರಮಾಣದ ರೋಗಿಗಳಿಗೆ 'ಉಚಿತ ಸೇವೆ ಒದಗಿಸಲು' ಎಷ್ಟು ಹಣ ಬೇಕಾಗುತ್ತದೆ? (3) ಅಷ್ಟು ಪ್ರಮಾಣದಲ್ಲಿ ಶ್ರೀಮಂತ ರೋಗಿಗಳು ತಮ್ಮ ಆಸ್ಪತ್ರೆಗೆ ಬರುವ ಊಹೆಯ ಲೆಕ್ಕಾಚಾರ ಮಾಡಿದ್ದಾರೆಯೇ? (4) ಅಷ್ಟು ಪ್ರಮಾಣದಲ್ಲಿ ಶ್ರೀಮಂತ ರೋಗಿಗಳು ಬರದೇ ಹೋದಲ್ಲಿ, ಖೋತವಾಗುವ ಹಣವನ್ನು ಯಾವ ಬಗೆಯಲ್ಲಿ 'ಬಡವರ ಉಚಿತ ಸೇವೆಗೆ' ಸಂಗ್ರಹಿಸುತ್ತಾರೆ? (5) 60 ವರ್ಷಗಳ ಕಾಲ ಈ ಬಗೆಯ cross subsidyಯ ಯೋಜನೆ, ಹಾಗು ಅದು ವಿಫಲವಾದಲ್ಲಿ ಬದಲಿ ಉಪಕ್ರಮಗಳನ್ನು ಕಾಂಟ್ರಕ್ಟುದಾರರು ಸರಕಾರಕ್ಕೆ ನೀಡಿದ್ದಾರೆಯೇ? (6) 'ಇಲ್ಲವೆಂದಾದರೆ' 'ಬಡವರಿಗೆ ಉಚಿತ ಸೇವೆ' ಯ ಪ್ರಮಾಣವನ್ನು ಸರಕಾರ ಹೇಗೆ ಉತ್ತರದಾಯಿತ್ವದಲ್ಲಿ ನಿಭಾಯಿಸುತ್ತದೆ? (7) 'ಲಾಭ ಬರುತ್ತಿಲ್ಲ, ಉಚಿತ ಸೇವೆ ಸಾಧ್ಯವಿಲ್ಲ' ಎಂದರೆ, ಸರಕಾರ ಕರಾರನ್ನು ರದ್ದುಗೊಳಿಸುವ ಮಾರ್ಗೋಪಯಗಳು BOOT ವಿಧಾನದಲ್ಲಿ ಇದೆಯೇ? (8) ಪ್ರಸ್ತುತ ಜಗತ್ತಿನಾದ್ಯಂತ ಚಾಲ್ತಿಯಲ್ಲಿರುವ BOOT ವ್ಯವಹಾರ ವಿಧಾನದಲ್ಲಿ, ಈ ಬಗೆಯ ಮಧ್ಯಪ್ರವೇಶಕ್ಕೆ ಯಾವ ಅವಕಾಶವೂ ಇಲ್ಲ. (9) ಹಾಗಾದರೆ, ಈ ವಿಧಾನದಿಂದ 'ಬಡವರಿಗೆ ಉಚಿತವಾಗಿ ಅತ್ಯುತ್ತಮ ಸೇವೆಗಳನ್ನು'

ಪುಟ 10 ನೋಡಿ

ಸುಮಾರು 75 ವರ್ಷಗಳ ಹಿಂದೆ ಹಾಜಿ ಅಬ್ದುಲ್ಲಾ ಸಾಹೇಬರು ದಾನವಾಗಿ ನೀಡಿದ್ದ ಉಡುಪಿ ನಗರಸಭೆಗೆ ಚಾಚಿಕೊಂಡಿರುವ ಬೆಲೆ ಬಾಳುವ ಜಾಗದಲ್ಲಿರುವ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯನ್ನು ಖಾಸಗಿಯವರಿಗೆ ವಹಿಸಿಕೊಡುವ ರಾಜ್ಯ ಸರಕಾರದ ನಿರ್ಧಾರಕ್ಕೆ ತೀವ್ರ ಸಾರ್ವಜನಿಕ ವಿರೋಧ ವ್ಯಕ್ತವಾಗಿದೆ. ಇಂತಹ ನಾಗರಿಕರು ಮತ್ತು ಸಮಾನ ಮನಸ್ಕ ಸಂಘ ಸಂಸ್ಥೆಗಳು "ಉಡುಪಿಯ ಸರಕಾರಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯ ಉಳಿವಿಗಾಗಿ ನಾಗರಿಕ ಒಕ್ಕೂಟ" ರಚಿಸಿಕೊಂಡಿದ್ದು, ಅದು ವಿವರವಾದ ಒಂದು ಮನವಿಯನ್ನು ರಾಜ್ಯ ಸರಕಾರಕ್ಕೆ ಮತ್ತು ಉಸ್ತುವಾರಿ ಸಚಿವರಿಗೆ ನೀಡಿದೆ. ಅದನ್ನು ಬೆಂಬಲಿಸಿದ ಸಿಪಿಐ (ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಅವರ ಹೇಳಿಕೆಯನ್ನು ಕಳೆದ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ. ಒಕ್ಕೂಟ ಸಲ್ಲಿಸಿದ ಮನವಿಯ ಪೂರ್ಣ ಪಾಠವನ್ನು ಮತ್ತು ಆಸ್ಪತ್ರೆಗೆ ಸತ್ಯಶೋಧನೆಗೆ ಭೇಟಿ ನೀಡಿದ 'ಕರ್ನಾಟಕ ಜನಾರೋಗ್ಯ ಆಂದೋಲನ'ದ ನಿಯೋಗದ ಅಭಿಪ್ರಾಯವನ್ನೂ ಈ ಸಂಚಿಕೆಯಲ್ಲಿ ಕೊಡಲಾಗಿದೆ.





ಉಡುಪಿ ಸರಕಾರಿ ಆಸ್ಪತ್ರೆಯ ಖಾಸಗೀಕರಣ ಬೇಡ....

ಪುಟ 9 ರಿಂದ

ಒದಗಿಸುವುದನ್ನು ಯಾವ ಬಗೆಯಲ್ಲಿ ಖಾತ್ರಿ ಮಾಡಿಕೊಳ್ಳುತ್ತದೆ?

'ಸಾಮಾಜಿಕ ನ್ಯಾಯ' ಅನ್ವಯಿಸುತ್ತದೆಯೇ?:

ಈಗಿರುವ ಸರಕಾರಿ ಆಸ್ಪತ್ರೆಗಳಲ್ಲಿ ಸಂವಿಧಾನಬದ್ಧ 'ಸಾಮಾಜಿಕ ನ್ಯಾಯ'ದಡಿ ಮಾನವ ಸಂಪನ್ಮೂಲವನ್ನು ಕೆಲಸಕ್ಕೆ ನಿಯಮಿಸಿಕೊಳ್ಳಲಾಗುತ್ತದೆ. ಸದರಿ, ಖಾಸಗಿ ಸಂಸ್ಥೆಗಳಿಗೆ ಆ ಹಂಗಿಲ್ಲ. ಈಗ ಸರಕಾರಿ ವ್ಯವಸ್ಥೆಯನ್ನು ಖಾಸಗಿಕರಣಗೊಳಿಸುವಾಗ, ಸಂವಿಧಾನಬದ್ಧ 'ಸಾಮಾಜಿಕ ನ್ಯಾಯ ಪದ್ಧತಿ' ಯಡಿ ಮಾನವ ಸಂಪನ್ಮೂಲ ಉದ್ಯೋಗ ನಿಯಮಗಳನ್ನು ಹೇಗೆ ಖಾತ್ರಿಪಡಿಸಿಕೊಳ್ಳುತ್ತದೆ?

ಅನುಭವದ ಪಾಠ :

ಸರಕಾರಿ ಆಸ್ಪತ್ರೆಗಳನ್ನು ಖಾಸಗಿ ಸಹಭಾಗಿತ್ವದ ಮೂಲಕ ಸೇವಾ ಮಟ್ಟವನ್ನು ಸುಧಾರಿಸುವ ಮೊದಲಿನ ಪ್ರಯತ್ನಗಳು ಯಾವುವೂ ಯಶಸ್ವಿಯಾಗಿಲ್ಲ. 1998ರಲ್ಲಿ, ರಾಯಚೂರಿನಲ್ಲಿ 96 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸರಕಾರವು ಒಂದು ಸೂಪರ್ ಸ್ಪೆಷಾಲಿಟಿ ಅಸ್ಪತ್ರೆಯನ್ನು(RGSSH) ಕಟ್ಟಿ, ಲಾಭರಹಿತ ನಿರ್ವಹಣೆಗಾಗಿ ಖಾಸಗಿ ವಲಯದವರನ್ನು ಆಹ್ವಾನಿಸಿದಾಗ ಯಾರೂ ಮುಂದೆ ಬರಲಿಲ್ಲ. ಲಾಭ ಹಂಚಿಕೆಯ ಸಹಭಾಗಿತ್ವಕ್ಕೆ ಆಹ್ವಾನಿಸಿದಾಗ ಹಲವಾರು ಖಾಸಗಿ ಆರೋಗ್ಯ ವ್ಯವಹಾರಸ್ಥರು ಮುಂದೆ ಬಂದರು. ಸರಕಾರ 2001ರಲ್ಲಿ ಹೈದಾರಬಾದಿನ ಖ್ಯಾತ ವೈದ್ಯಕೀಯ ಸಂಸ್ಥೆ ಅಪೊಲೋ ಹಾಸ್ಪಿಟಲ್ ಜೊತೆ ಹತ್ತು ವರ್ಷಗಳ ಒಪ್ಪಂದ ಮಾಡಿಕೊಂಡಿತು. ಆ ಒಪ್ಪಂದದ ಪ್ರಕಾರ, ಬಿಪಿಎಲ್ ಬಳಕೆದಾರರಿಗೆ ತಗಲುವ ವೆಚ್ಚವನ್ನು ಸರಕಾರ ಭರಿಸುವುದು, ಎಪಿಎಲ್ ವಿಭಾಗದ ಸೇವೆಯಿಂದ ಬಂದ ಲಾಭದಲ್ಲಿ ಒಂದು ಭಾಗ ಅಪೊಲೋ ಸಂಸ್ಥೆಗೆ ಕೊಟ್ಟು ಸರಕಾರದ ಭಾಗವನ್ನು ಆಸ್ಪತ್ರೆಯ ನಿರ್ವಹಣೆಗೆ ಬಳಸುವುದು, ವಾರ್ಷಿಕವಾಗಿ ನಿರ್ವಹಣೆಯ ವೆಚ್ಚದಲ್ಲಿ ಹಣಕಾಸು ಖೋತವಾದರೆ ಸರಕಾರ ಖೋತ ಭರಿಸುವುದು–ಎಂಬ ಖಾಸಗಿ–ಸ್ನೇಹಿ ಒಪ್ಪಂದ ಮಾಡಿಕೊಂಡಾಗ್ಯೂ, ಆ ಆಸ್ಪತ್ರೆ ಹತ್ತು ವರ್ಷಗಳಲ್ಲಿ ಒಂದೇ ವರ್ಷವೂ ಲಾಭದ ನಿರ್ವಹಣೆ ಮಾಡಲಿಲ್ಲ; ಬಿಪಿಎಲ್ ಬಳಕೆದಾರರ ವೆಚ್ಚವನ್ನು ಭರಿಸುವುದರ ಜೊತೆ ಸರಕಾರವು 5 ಕೋಟಿ ರೂಪಾಯಿ ಖೋತ ನಿರ್ವಹಣ ವೆಚ್ಚವನ್ನೂ ಭರಿಸಿತು. ಹತ್ತು ವರ್ಷಗಳ ಈ ಸಖ್ಯದ ಕೊನೆಗೆ ಸರಕಾರ ನಿಯಮಿಸಿದ ಸಮಿತಿಯ ಈ ಕಹಿ ವರದಿಯನ್ನು ಆಧಾರಿಸಿ, ಆಸ್ಪತ್ರೆ ಮುಚ್ಚಿ, ಸಲಕರಣೆಗಳನ್ನು ಉಳಿದ ಸರಕಾರಿ ವೈದ್ಯಕೀಯ ಸಂಸ್ಥೆಗಳಿಗೆ ಸ್ಥಳಾಂತರಿಸಲಾಯಿತು. ಕೋಟ್ಯಾಂತರ ಬೆಲೆಯ ಕಟ್ಟಡ ಹಾಳು ಹೊಡೆಯುವಂತಾಯಿತು. ಹೈದರಾಬಾದ್ ಕರ್ನಾಟಕ ವಲಯದ ಬಡವರ ಆರೋಗ್ಯ ಸೇವೆಗೆ ಮುತುವರ್ಜಿ ವಹಿಸಿ ಸರಕಾರವು ಗರಿಷ್ಠ ಖಾಸಗಿ ಲಾಭದ ಒಪ್ಪಂದ ಮಾಡಿಕೊಂಡಾಗ್ಯೂ, ಹೈದಾರಬಾದ್ ಕರ್ನಾಟಕ ಭಾಗದ ಸರಕಾರಿ ಪ್ರಾಯೋಜಿತ ಸಾರ್ವಜನಿಕ ಆರೋಗ್ಯ ಸೇವೆ 'ಯಶಸ್ವಿನಿ' ಯೋಜನೆಯಡಿ ಹತ್ತು ವರ್ಷಗಳಲ್ಲಿ RGSSH ಶೇ.10ರಷ್ಟು ರೋಗಿಗಳಿಗೆ ಸೇವೆ ಒದಗಿಸಿತು ಅಷ್ಟೇ! ಸರಕಾರದ ಹಣದಲ್ಲಿ ಈ ಬಗೆಯ ಕಳಪೆ ಖಾಸಗಿ ಸೇವೆಯ ಭಾಗ್ಯ ಬೇಕಿತ್ತೇ! ಅಂತೆಯೇ, ಕರ್ನಾಟಕದ 70 ಪ್ರಾಥಮಿಕ ಕೇಂದ್ರಗಳನ್ನು ಖಾಸಗಿ ನಿರ್ವಹಣೆಗೆ ಒಪ್ಪಿಸಿದ ಅನುಕೂಲಕರ Public Private Partnership ಕತೆಯೂ ಸರಕಾರಿ ವರದಿಯ ಪ್ರಕಾರವೇ ಕಹಿಯಾಗಿದ್ದು ಕೈದಾಗಿವೆ. ತನ್ನದೇ ವ್ಯವಹಾರಗಳ ವೈಫಲ್ಯಗಳ ಪಾಠವನ್ನು ಸರಕಾರ ಮರೆಯುತ್ತಿರುವುದು ಏಕೆ?

ಈ ನಿದರ್ಶನಗಳ ಹಿನ್ನೆಲೆಯಲ್ಲಿ, ಈಗಾಗಲೇ ಯಶಸ್ವಿಯಾಗಿ ನಡೆಯುತ್ತಿರುವ ಸರಕಾರಿ ಆಸ್ಪತ್ರೆಯನ್ನೂ, ಅದರ ಜಮೀನನ್ನೂ ಖಾಸಗಿಯವರಿಗೆ ವಹಿಸುವುದು ವಿವೇಕಯುತವಾದ ನಿರ್ಧಾರವೆನ್ನಲು ಯಾವುದೇ ಆಧಾರಗಳು ದೊರೆಯುವುದಿಲ್ಲ. ಅದ್ದ–ರಿಂದ ಈ ಆತುರದ ನಿರ್ಧಾರವನ್ನು ಈ ಕೂಡಲೇ ಕೈಬಿಟ್ಟು, ಉಡುಪಿಯ ಸರಕಾರಿ ಆಸ್ಪತ್ರೆಯನ್ನು ಸುಧಾರಿಸಲು ಇತರ ಮಾರ್ಗೋಪಾಯಗಳನ್ನು ಯೋಚಿಸಿ–ಯೋಜಿಸಿ ಮುಂದಡಿಯಿಡಬೇಕು.

'ಕರ್ನಾಟಕ ಜನಾರೋಗ್ಯ ಆಂದೋಲನ'ದ ನಿಯೋಗದ ಭೇಟಿ ಬಗ್ಗೆ ವರದಿ

ನಿಯೋಗದ ಸದಸ್ಯರು ಮಧ್ಯಾಹ್ನ ಆಸ್ಪತ್ರೆಗೆ ಭೇಟಿ ನೀಡಿದರು. ಅವರು ಆಸ್ಪತ್ರೆಯಲ್ಲಿ ಇದ್ದ ವ್ಯವಸ್ಥೆಗಳನ್ನು ನೋಡಿ ಆಶ್ಚರ್ಯಚಕಿತರಾದರು. ಅವರ ಮಾತುಗಳಲ್ಲಿ ಕಣ್ಣುಗಳಲ್ಲಿ ಅದು ವ್ಯಕ್ತವಾಗುತ್ತಿತ್ತು. 4 ಡಾಕ್ಟರುಗಳು, 10 ನರ್ಸುಗಳು, 4 ಗಾಲಿ ಖುರ್ಚಿಗಳು, ಸ್ವಚ್ಛ ಶೌಚಾಲಯ, ಉಚಿತ ಅನ್ನ–ಮೀನು ಊಟ, ಉಚಿತ ಸೇವೆ, ಒಳ್ಳೆಯ ಐ.ಸಿ.ಯು., ಮಕ್ಕಳ ಕ್ಲಿನಿಕ್, ತಿಂಗಳಿಗೆ 280 ಹೆರಿಗೆಗಳು, ತುರ್ತು ಅಗತ್ಯವಿರುವವರಿಗೆ ಜಗಲಿಯಲ್ಲೂ ಹಾಸಿಗೆ ಏರ್ಪಾಟು... .. ಅವರು ಹೇಳುತ್ತಾ ಹೋಗುತ್ತಿದ್ದರು. ಕರ್ನಾಟಕದಲ್ಲಿ ಇಂತಹ ಒಳ್ಳೆಯ ಆಸ್ಪತ್ರೆ ಎಲ್ಲಿಯೂ ನೋಡಿಲ್ಲ ಎಂದು ಹೇಳುತ್ತಿದ್ದರು. ಯಾವುದೇ ಖಾಸಗಿ ಆಸ್ಪತ್ರೆಗೆ ಇದು ಕಡಿಮೆಯಿಲ್ಲ. ಇಂತಹ ಒಳ್ಳೆಯ ಆಸ್ಪತ್ರೆಯನ್ನು ಖಾಸಗಿಯವರಿಗೆ ಕೊಡುವುದೇ? ಇದು ಆಗಲೇಬಾರದು. ಆಗದಂತೆ ತಡೆಯಬೇಕು.

ಯಾವುದೇ (ಅದೂ ಸರಕಾರಿ) ಆಸ್ಪತ್ರೆಯಲ್ಲಿ ಶೌಚಾಲಯ ಹುಡುಕಬೇಕಾಗಿಲ್ಲ. ವಾಸನೆಯಿಂದಲೇ ಎಲ್ಲಿದೆ ಅಂತ ಗೊತ್ತಾಗಿಬಿಡುತ್ತದೆ! ಆದರೆ ಉಡುಪಿ ಆಸ್ಪತ್ರೆಯಲ್ಲಿ ಶೌಚಾಲಯ ಹುಡುಕಬೇಕು. ಶೌಚಾಲಯ ಅಷ್ಟು ಸ್ವಚ್ಛವಿತ್ತು. ಬಡವರು ಮಾತ್ರವಲ್ಲ, ಮಧ್ಯಮ ವರ್ಗದವರೂ ಆಸ್ಪತ್ರೆಯ ಸೇವೆ ಬಳಸುವುದು ನೋಡಿ ಅವರಿಗೆ ಆಶ್ಚರ್ಯ. ಭಟ್ಕಳ, ಕಾರವಾದಷ್ಟು ದೂರದಿಂದ ಬಂದ ಜನ ಅವರಿಗೆ ಕಂಡರು.

ಡಾಕ್ಟರುಗಳಿಗೆ ಆಸ್ಪತ್ರೆ ಆವರಣದಲ್ಲಿ ಕ್ವಾ–ಟರ್ಸ್ ಇಲ್ಲ. ವಾಹನವೂ ಇಲ್ಲ. ಆದರೂ ಮಹಿಳಾ ಡಾಕ್ಟರುಗಳು ದಿನಕ್ಕೆ 2–3 ಬಾರಿ ರಾತ್ರಿಯಲ್ಲೂ ತಮ್ಮ ವಾಹನದಲ್ಲೇ ಬರಬೇಕಾಗುತ್ತದೆ, ಬರುತ್ತಾರೆ. ಸ್ಥಳದ ಅಭಾವದ ಸಮಸ್ಯೆಯೂ ಇದೆ. ಇವು ನಿಯೋಗ ಕಂಡ ಕೆಲವು ಸಮಸ್ಯೆಗಳು. ಮೂಲ ಸೌಕರ್ಯಗಳ ಮೇಲೆ ಸ್ವಲ್ಪ ಹಣ ಖರ್ಚು ಮಾಡಿದರೆ ಇದು ಅತ್ಯುತ್ತಮ ಆಸ್ಪತ್ರೆ ಆಗಬಲ್ಲುದು. ಖಾಸಗೀಕರಿಸಿದ ಎಲ್ಲಾ 76 ಆಸ್ಪತ್ರೆಗಳು ಪೂರ್ಣವಾಗಿ ವಿಫಲವಾಗಿವೆ. ಖಾಸಗೀಕರಣ ಮತ್ತು ಬಿ.ಆರ್. ಶೆಟ್ಟಿಯಿಂದ ಉಡುಪಿ ಆಸ್ಪತ್ರೆಯನ್ನು ರಕ್ಷಿಸಬೇಕು. ಇದು ನಿಯೋಗದ ಸ್ಪಷ್ಟ ತೀರ್ಪಾಗಿತ್ತು. ■



ಕಾಶ್ಮೀರದಲ್ಲೇಕೆ ಯುವಜನರು ಲ್ಯಾಪ್‌ಟಾಪ್ ಬದಲು......

ಪುಟ 8 ರಿಂದ

ಲೇಖನದಲ್ಲಿ ಹೇಳಿದಂತೆ, ಭಾರತಕ್ಕೆ ಜಮ್ಮು–ಕಾಶ್ಮೀರದ ಸೇರ್ಪಡೆಗೆ ಸಂವಿಧಾನಿಕ ಮಂಜೂರಾತಿ ನೀಡಲು ಕಲಮು 370ನ್ನು ಸಂವಿಧಾನ ಸಭೆ ಅಂಗೀಕರಿಸಿದಾಗ ಮುಂದೆ ಭಾರತೀಯ ಜನಸಂಘದ ಸ್ಥಾಪಕರಾದ ಶ್ಯಾಮಪ್ರಸಾದ್ ಮುಖರ್ಜಿ ನೆಹರೂ ಸಂಪುಟದಲ್ಲಿ ಮಂತ್ರಿಯಾಗಿದ್ದರು. ಅವರು ಆಗ ಅದನ್ನು ವಿರೋಧಿಸಿರಲಿಲ್ಲ. ಆದರೆ ನಂತರ ಜಮ್ಮುವಿನಲ್ಲಿ ಇದರ ವಿರುದ್ಧ ರಾಜಪ್ರಭುತ್ವದ ಪರವಾಗಿದ್ದ ಪ್ರಜಾ ಪರಿಷದ್ ಚಳುವಳಿ ಆರಂಭಿಸಿದಾಗ ಅದಕ್ಕೆ ಇವರೇ ನೇತೃತ್ವ ನೀಡಿದರು.

ಇದಕ್ಕೆ ನಿಜವಾದ ಕಾರಣ–ಭಾರತದೊಂದಿಗೆ ಸೇರ್ಪಡೆಯಾದ ಜಮ್ಮು–ಕಾಶ್ಮೀರದ ಆಡಳಿತ ವಹಿಸಿಕೊಂಡ ಶೇಖ್ ಅಬ್ದುಲ್ಲ ನೇತೃತ್ವದ ನ್ಯಾಶನಲ್ ಕಾನ್ಫರೆನ್ಸ್ ಸರಕಾರ ರಾಜ್ಯದಲ್ಲಿ ವ್ಯಾಪಕ ಭೂಸುಧಾರಣೆಗಳನ್ನು ಕೈಗೊಂಡಿತು ಮತ್ತು ಪರಂಪರಾಗತ ರಾಜಪ್ರಭುತ್ವವನ್ನು ಕೂಡ ರದ್ದು ಮಾಡಿತು. ಈ ಸರಕಾರ ನೇಮಿಸಿದ ಭೂಸುಧಾರಣಾ ಆಯೋಗ 22.5 ಎಕ್ರೆಯ ಗರಿಷ್ಟ ಮಿತಿಯನ್ನು ನಿಗದಿ ಮಾಡಿ ಅದಕ್ಕಿಂತ ಹೆಚ್ಚು ಭೂಮಿ ಇದ್ದವರಿಂದ ಅದನ್ನು ಪರಿಹಾರ ನೀಡದೆ ಸ್ವಾಧೀನ ಪಡಿಸಿಕೊಂಡು ಉಳುವವರು /ಭೂಹೀನರ ನಡುವೆ ಹಂಚಲು ಶಿಫಾರಸು ಮಾಡಿತು. ಅದುವರೆಗೆ ಹಿಂದೂ ಮಹಾರಾಜನ ಆಳ್ವಿಕೆಯಲ್ಲಿದ್ದ ಈ ರಾಜ್ಯದಲ್ಲಿ ಹೆಚ್ಚಿನ ಉಳುಮೆದಾರರು ಮುಸಿಮರಾಗಿದ್ದರೆ, ಹೆಚ್ಚಿನ ಭೂಮಾಲಕರು ಹಿಂದೂಗಳಾಗಿದ್ದರು.

ಪ್ರಜಾಪರಿಷದ್ ಚಳುವಳಿ ವಾಸ್ತವವಾಗಿ ಈ ಭೂಸುಧಾರಣೆಯನ್ನು ವಿರೋಧಸಿ ಆರಂಭಿಸಿದ ಚಳುವಳಿ. ಈ ಹಿಂದೆ ಭಾರತವನ್ನು ಸೇರದೆ ಸ್ವತಂತ್ರವಾಗಿರಬೇಕೆಂದು ಮಹಾರಾಜನನ್ನು ಬೆಂಬಲಿಸಿದ್ದ ಪ್ರಜಾಪರಿಷದ್ ಈಗ ಒಂದೇ ಭಾರತದ ಸಂವಿಧಾನವನ್ನು ಸಂಪೂರ್ಣವಾಗಿ ಜಮ್ಮು–ಕಾಶ್ಮೀರಕ್ಕೆ ಅನ್ವಯಿಸಬೇಕು, ಇಲ್ಲವೇ ಜಮ್ಮು ಪ್ರದೇಶವನ್ನು ಪ್ರತ್ಯೇಕಿಸಿ ಅದನ್ನು ಪಾರ್ಟ್ ಬಿ ರಾಜ್ಯವಾಗಿ ಭಾರತದಲ್ಲಿ ವಿಲೀನಗೊಳಿಸಬೇಕು, ಆದರೆ ಈ ರಾಜ್ಯಕ್ಕೆ ಸ್ವಾಯತ್ತತೆಯ ಭರವಸೆ ನೀಡುವ ಕಲಮು 370 ಬೇಡ ಎಂಬುದು ಈ ಚಳುವಳಿಯ ನಿಲುವಾಗಿತ್ತು. ಏಕೆಂದರೆ ಆಗ ಮಾತ್ರವೇ ಭಾರತೀಯ ಸಂವಿಧಾನದ ಕಲಮು 238 ಹಾಗೂ 31 ಅನ್ವಯವಾಗಿ ಈ ರಾಜ್ಯದ ಭೂಮಾಲಕರಿಗೆ, ಮುಖ್ಯವಾಗಿ ಜಮ್ಮು ವಿಭಾಗದಲ್ಲಿರುವವರಿಗೆ ಭೂಸ್ವಾಧೀನಕ್ಕೆ ಪರಿಹಾರ ಸಿಗಲು ಮತ್ತು ಮಹಾರಾಜನ ಸಿಂಹಾಸನ ಉಳಿಸಿಕೊಳ್ಳುವುದು ಸಾಧ್ಯವಿತ್ತು.

ಅಂದರೆ ಕಲಮು 370ರ ವಿರುದ್ಧ ಸಂಘ ಪರಿವಾರದ ಚಳುವಳಿ ಆರಂಭವಾದದ್ದು ಯಾವುದೇ ದೇಶಪ್ರೇಮದಿಂದ ಅಲ್ಲ, ಬದಲಿಗೆ ಹಿಂದೂ ಭೂಮಾಲಕರ ಮತ್ತು ರಾಜಪ್ರಭುತ್ವದ ಹಿತಾಸಕ್ತಿಗಳ ರಕ್ಷಣೆಗಾಗಿ. ಆರ್ಥಿಕ ಕಾರಣಗಳಿಗೆ ಕೋಮು ವೇಷ ತೊಡಿಸಲಾಯಿತು. ಅದೇ ನಿಲುವು ಈಗಲೂ ಮುಂದುವರಿಯುತ್ತಿದೆ.

ಭಾರತದ ವಿಭಜನೆಯ ನಂತರ ಕಾಶ್ಮೀರದ ಜನತೆ ಜಾತ್ಯಾತೀತ ಐಕ್ಯತೆಯ ಪರವಾಗಿ ನಿಂತರೆ ಆರೆಸ್ಸೆಸ್ ಆಗಿನ ಪಶ್ಚಿಮ ಮತ್ತು ಪೂರ್ವ ಪಂಜಾಬಿನಲ್ಲಿ ಕೋಮು ದಳ್ಳುರಿಗೆ ಮುಸ್ಲಿಂ ಕೋಮುವಾದಿಗಳಂತೆ ತಿದಿಯೂದುತ್ತಿತ್ತು.. ಆದ್ದರಿಂದಲೇ ಸಿಪಿಐ(ಎಂ) ಶಾಸಕ ಯೂಸುಫ್ ತರಿಗಾಮಿ ಹೇಳಿರುವಂತೆ ಅವಿಭಜಿತ ಪಂಜಾಬಿನಲ್ಲಿ ಆಗ "ಲಕ್ಷಾಂತರ ಮಂದಿ ಪ್ರಾಣ ಕಳಕೊಂಡರು, ಇನ್ನೂ ಲಕ್ಷಾಂತರ ಮಂದಿ ಮನೆಮಾರು ಕಳಕೊಂಡು ವಲಸೆ ಹೋದರು, ಆದರೆ ಕಾಶ್ಮೀರ ಕಣಿವೆಯಲ್ಲಿ ಒಂದೇ ಒಂದು ಕೋಮು ಗಲಭೆ ನಡೆಯಲಿಲ್ಲ."

ಕೋಮುಧ್ರುವೀಕರಣದ ಮತ್ತೊಂದು ಅಸ್ತ್ರ

ದುರದೃಷ್ಟವಶಾತ್ ಈ ಏಳು ದಶಕಗಳ ಕಟು ಅನುಭವಗಳ ನಂತರವೂ ಸಂಘ ಪರಿವಾರ ಅದೇ ನಿಲುವನ್ನು ಮುಂದುವರೆಸುತ್ತಿದೆ. ಅದನ್ನೀಗ ತನ್ನ ಕೋಮು ಧ್ರುವೀಕರಣದ ತಂತ್ರದಲ್ಲಿ ಇನ್ನೊಂದು ವಿಭಜನಕಾರೀ ಅಸ್ತ್ರವಾಗಿ ಕಾಣುತ್ತಿದೆ.

ಕಾಶ್ಮೀರಿ ಜನತೆಯಲ್ಲಿ ಭಾರತೀಯ ಪ್ರಭುತ್ವದ ಬಗ್ಗೆ ಪರಕೀಯ ಭಾವ ಆಳಗೊಳ್ಳುತ್ತಿರುವ ಸಂದರ್ಭದಲ್ಲಿಯೂ ಕಲಮು 370ರ ರದ್ದತಿ ಬಗ್ಗೆ ಮಾತಾಡುವುದು ವಾಸ್ತವವಾಗಿ ಅಲ್ಲಿನ ಪ್ರತ್ಯೇಕತಾವಾದಿಗಳ ಕೈಗಳನ್ನು ಬಲಪಡಿಸುತ್ತದೆ ಎಂಬುದನ್ನೂ ಈ ಮಂದಿ ಅರಿತಂತಿಲ್ಲ.

ಹೀಗೆ ಕಲಮು 370ನ್ನು ರದ್ದು ಮಾಡಬೇಕೆಂಬುದು ಹಿಂದುತ್ವ ಅಜೆಂಡಾದ ಭಾಗವಾಗಿರಬಹದು, ಆದರೆ ಅದು ರಾಜಕೀಯ ದುರುದ್ದೇಶದಿಂದ ಕೂಡಿರುವ ವಿಭಜನಕಾರೀ ನಿಲುವು, ಪ್ರಜಾಸತ್ತಾತ್ಮಕ ಒಕ್ಕೂಟವಾದಕ್ಕೆ ವಿರುದ್ಧವಾದದ್ದು ಹಾಗೂ ರಾಜ್ಯದ ಮತ್ತು ಒಟ್ಟಾರೆ ದೇಶದ ಹಿತಗಳಿಗೆ ವಿರುದ್ಧವಾದದ್ದು ಎಂಬುದರಲ್ಲಿ ಸಂದೇಹವಿಲ್ಲ.

ಆರಂಭದಲ್ಲಿ ಹೇಳಿದಂತೆ, ಈ ಹಿಂದೆ ರಾಜಪ್ರಭುತ್ವಕ್ಕೆ ಒಳಗಾಗಿದ್ದ ಈ ರಾಜ್ಯ ಮೂರು ವಿಭಿನ್ನ ಪ್ರದೇಶಗಳನ್ನು ಹೊಂದಿದೆ– ಜಮ್ಮು, ಕಾಶ್ಮೀರ ಮತ್ತು ಲಡಾಖ. ಇವು ಭೌಗೋಳಿಕವಾಗಿ, ಜನಾಂಗೀಯವಾಗಿ, ಭಾಷಿಕವಾಗಿ ಮತ್ತು ಸಾಂಸ್ಕೃತಿಕವಾಗಿಯೂ ಭಿನ್ನತೆಗಳಿರುವ ಪ್ರದೇಶಗಳು. ಆದ್ದರಿಂದ ಇವುಗಳಲ್ಲಿ ಏಕತೆ ಮುಂದುವರೆಯಬೇಕಾದರೆ ಈ ರಾಜ್ಯದೊಳಗೂ ಪ್ರಾದೇಶಿಕ ಸ್ವಾಯತ್ತತೆ ಇರಬೇಕು ಎಂದು ದೇಶದ ಪ್ರಜಾಪ್ರಭುತ್ವ ಆಂದೋಲನ ಹೇಳುತ್ತಲೇ ಬಂದಿದೆ.

ಎಡಪಕ್ಷಗಳ ಬೆಂಬಲದಲ್ಲಿದ್ದ ಯುಪಿಎ–1 ಸರಕಾರ ಜಮ್ಮು–ಕಾಶ್ಮೀರದ ಪ್ರಶ್ನೆ ಕುರಿತಂತೆ ಐದು ಕಾರ್ಯಗುಂಪುಗಳನ್ನು ರಚಿಸಿತ್ತು. ಅವುಗಳ ವರದಿಗಳು/ಶಿಫಾರಸುಗಳು ಧೂಳು ತಿನ್ನುತ್ತಿವೆ. ಮೋದಿ ಸರಕಾರವಂತೂ ಕಲಮು 370 ರ ಬಗ್ಗೆ ಸಂಘ ಪರಿವಾರದ ವಿಭಜನಕಾರೀ ರಾಗದೊಂದಿಗೇ ಆರಂಭಿಸಿದೆ.

ಅದೇ ವಿಭಜನಕಾರಿ ಆಟ

ಕಾಶ್ಮೀರ ಕಣಿವೆಯಲ್ಲಿ ಕಳೆದ ಮೂರುತಿಂಗಳಲ್ಲಿ 90ಕ್ಕೂ ಹೆಚ್ಚು ಯುವಜನರನ್ನು ಬಲಿ ತೆಗೆದುಕೊಂಡಿರುವ, ಸಾವಿರಕ್ಕೂ ಹೆಚ್ಚು ಮಂದಿಯನ್ನು ತೀವ್ರವಾಗಿ ಗಾಯಗೊಳಿಸಿರುವ ಪ್ರತಿಭಟನೆಗಳ ಹಿನ್ನೆಲೆಯಲ್ಲಿ ಮತ್ತೊಮ್ಮೆ ಎಡಪಕ್ಷಗಳು ಸಂವಿಧಾನದ ದುರ್ಬಲಗೊಳಿಸಲಾಗಿರುವ 370 ವಿಧಿಯನ್ನು ಮತ್ತೆ ಮೊದಲಿನ ಸ್ಥಿತಿಗೆ ತರಬೇಕೆಂಬ ಆಧಾರದಲ್ಲಿ ಸಂವಾದವನ್ನು ಇದಕ್ಕೆ ಸಂಬಂಧವಿರುವ ಎಲ್ಲರೊಂದಿಗೆ ನಡೆಸಬೇಕೆಂದು ಕೂಡ ಸೂಚಿಸಿವೆ. ರಾಜ್ಯದ ಮೂರು ಪ್ರದೇಶಗಳಾದ ಜಮ್ಮು, ಕಣಿವೆ ಮತ್ತು ಲಡಾಖ್ ಜಮ್ಮು ಮತ್ತು ಕಾಶ್ಮೀರ ರಾಜ್ಯದೊಳಗೆ ಸ್ವಾಯತ್ತತೆ ಹೊಂದಿರಬೇಕು. ಇದು ಸಾಂವಿಧಾನಿಕ ಮತ್ತು ಕಾನೂನಾತ್ಮಕ ವಿಷಯಗಳಲ್ಲಿ ಬದಲಾವಣೆಗಳನ್ನು ಬಯಸುವಂತದ್ದು. ಈಗಿರುವ ಆದೇಶಗಳನ್ನು ಮತ್ತು ಕಾಯ್ದೆಗಳನ್ನು ಪರಿಷ್ಕರಿಸುವುದರೊಂದಿಗೆ ಇದನ್ನು ಆರಂಭಿಸಬಹುದುಎಂದು ಸೂಚಿಸಿವೆ.

ಎರಡು ತಿಂಗಳ ದೀರ್ಘ ಕಾಲದ ಕರ್ಫ್ಯೂ ಮತ್ತು ಪಾರ್ಲಿಮೆಂಟಿನಲ್ಲಿ ಮೂರು ಚರ್ಚೆಗಳ ನಂತರ ಸರಕಾರವು ಕೊನೆಗೂ ಸರ್ವಪಕ್ಷ ನಿಯೋಗವನ್ನು ಕಳುಹಿಸಲೇ ಬೇಕಾಗಿ ಬಂತು. ಆದರೆ ಆ ನಿಯೋಗ ಕೇಂದ್ರ ಮತ್ತು ರಾಜ್ಯ ಸರಕಾರಗಳು ತಕ್ಷಣವೇ ಸಂಬಂಧಪಟ್ಟ ಎಲ್ಲರೊಂದಿಗೆ ರಾಜಕೀಯ ಸಂವಾದವನ್ನು ಆರಂಭಿಸಬೇಕು ಎಂದು ಕಳಕಳಿಯಿಂದ ಸೂಚಿಸಿದ್ದರೂ ಕೇಂದ್ರ ಸರಕಾರ ಮತ್ತು ಕೇಂದ್ರದ ಆಳುವ ಪಕ್ಷ ಭಾಗೀದಾರನಾಗಿರುವ ರಾಜ್ಯ ಸರಕಾರ ಯಾವ ಕ್ರಮಗಳನ್ನೂ ಕೈಗೊಂಡಿಲ್ಲ. ಬದಲಿಗೆ ಕೇಂದ್ರ ಸರಕಾರ ಮತ್ತು ಹಿಂದುತ್ವ ಪಡೆಗಳು ಒಂದು ಕರ್ಕಶ ಪಾಕಿಸ್ತಾನ–ವಿರೋಧಿ ನಿಲುವು ಮತ್ತು ಕಾಶ್ಮೀರ ಕಣಿವೆಯಲ್ಲಿ ಭದ್ರತಾ ಪಡೆಗಳ ಮೂಲಕ ಪ್ರತಿಭಟನೆಗಳನ್ನು ಹತ್ತಿಕ್ಕುವ ದಾರಿ ಕೋಮು ಧ್ರುವೀಕರಣವನ್ನು ಮತ್ತಷ್ಟು ತೀಕ್ಷ್ಣಗೊಳಿಸಿ ಮುಂಬರುವ ಚುನಾವಣೆಗಳಿಲ್ಲಿ ಪ್ರಯೋಜನಗಳನ್ನು ಒದಗಿಸಬಹುದು ಎಂದು ಯೋಚಿಸುತ್ತಿರುವಂತಿದೆ. ಇದೊಂದು ಅಪಾಯಕಾರಿ ಆಟ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಎಚ್ಚರಿಸಿದೆ.

(ಆಧಾರ: ಸಿಪಿಐ(ಎಂ) ಪ್ರಕಟಣೆ
Hands off Article 370:
Defend the Autonomy of J& K
ಮತ್ತು ಎ.ಜಿ.ನೂರಾಣಿಯವರ
Deception on Article 370:) ■

ದೇಶದ ಸರ್ವೋಚ್ಚ ನ್ಯಾಯಾಲಯ ಹಿಂದೂ ಗಂಡು ಮಗನ ಕರ್ತವ್ಯವನ್ನು ಅವನ ಹೆಂಡತಿಯ ಮೂಲಕ ನಿರ್ವಚಿಸಲು ಬಯಸಿದೆ. ಮತ್ತು ಅಲ್ಲಿ ಅದು ಲಿಂಗ ಪಕ್ಷಪಾತಿಯಾಗುತ್ತದೆ. ವಿವಾಹವಾದ ಮಹಿಳೆ ತನ್ನ ಗಂಡನ ಕುಟುಂಬದ ಭಾಗವಾಗಿರುವುದರಿಂದ ಅವಳ ಕರ್ತವ್ಯಗಳೇನು ಎಂಬುದನ್ನು ಮನುಸ್ಮೃತಿಯ ವಾಕ್ಯಗಳೆಂದು ಭಾಸವಾಗುವಂತೆ, ಯಾವುದೇ ಕಾನೂನಿನ ಆಧಾರವೇ ಇಲ್ಲದೆ ವಾಡಿಕೆ, ಪದ್ಧತಿಗಳ ಆಧಾರದಲ್ಲಿ ತೀರ್ಪು ಕೊಟ್ಟಿದೆ.

ಲಿಂಗತಾರತಮ್ಯದ ಮನುವಾದಿ ತೀರ್ಪು

ಅತ್ತೆ-ಮಾವ ನೋಡಿಕೊಳ್ಳದಿದ್ದರೆ ವಿಚ್ಛೇದನ?!

ಕೆ.ಎಸ್. ವಿಮಲಾ

"ಮಕ್ಕಳನ್ನು ಹಡೆಯುವುದು, ಹಡೆದ ಮಕ್ಕಳನ್ನು ಸಾಕುವುದು, ಸಂಸಾರವನ್ನು ಪ್ರತಿನಿತ್ಯವೂ ಚೆನ್ನಾಗಿ ನಿರ್ವಹಿಸಿಕೊಂಡು ಹೋಗುವುದು ಇವು ಸ್ತ್ರೀಯರ ಕರ್ತವ್ಯಗಳಾಗಿವೆ. ಪುತ್ರೋತ್ಪತ್ತಿ, ಧರ್ಮಾಚರಣೆ, ಪತಿ ಸೇವೆ, ರತಿ ಸುಖ, ಸಂತಾನೋತ್ಪಾದನೆಯಿಂದ ಪಿತೃಗಳಿಗೆ ಸದ್ಗತಿ ನೀಡುವುದು ಹಾಗೂ ಆತ್ಮೋದ್ಧಾರ ಮಾಡಿಕೊಳ್ಳುವುದು–ಇವು ಸ್ತ್ರೀಯರ ಸಾಧನೆಗಳಾಗಿವೆ."

ಮನುಸ್ಮೃತಿ ಅಧ್ಯಾಯ 9, ಖಂಡ 27,28

"ಹೆಂಡತಿಯಾದವಳು ಮದುವೆಯಾದ ನಂತರ ತನ್ನ ಗಂಡನ ಕುಟುಂಬದೊಂದಿಗೆ ವಾಸಿಸಬೇಕು. ಮದುವೆಯ ನಂತರ ಮಹಿಳೆ ಗಂಡನ ಕುಟುಂಬದ ಭಾಗವಾಗಿರುವುದರಿಂದ ತನ್ನ ಗಂಡನ ಆದಾಯವನ್ನು ತಾನು ಮಾತ್ರ ಅನುಭವಿಸಬೇಕೆನ್ನುವ ಕಾರಣದಿಂದ ಅವನನ್ನು ಅವನ ತಂದೆ ತಾಯಂದಿರಿಂದ ಬೇರ್ಪಡಿಸಲಾಗದು. ಗಂಡ ಪ್ರತ್ಯೇಕವಾಗಿ ತನ್ನೊಡನೆ ಬದುಕಬೇಕೆಂದು ಬಯಸುವುದು ಪಶ್ಚಿಮದ ಆಲೋಚನೆ, ಇದು ನಮ್ಮ ಸಂಸ್ಕೃತಿ, ಆಚರಣೆಗೆ ವಿರುದ್ಧವಾದದ್ದು" ಆದ್ದರಿಂದ ಹಿಂದೂ ಪುರುಷ ತನ್ನ ತಂದೆ ತಾಯಿಯರನ್ನು ನೋಡಿಕೊಳ್ಳಲು ನಿರಾಕರಿಸುವ ಹೆಂಡತಿಯನ್ನು ವಿಚ್ಛೇದನ ಮಾಡಬಹುದು."

'ಭಾರತದಲ್ಲಿ ಹಿಂದೂ ಗಂಡು ಮಗ ವಿವಾಹವಾದ ಕಾರಣದಿಂದ ತನ್ನ ತಂದೆ ತಾಯಂದಿರಿಂದ ಪ್ರತ್ಯೇಕವಾಗಿ ಬದುಕುವುದು ಎನ್ನುವ ಪದ್ಧತಿಯೂ ಅಲ್ಲ ಮತ್ತು ಅದು ನಮ್ಮ ಸಂಸ್ಕೃತಿಯ ಭಾಗವೂ ಅಲ್ಲ'

– ಜಸ್ಟೀಸ್ ದವೆ ಮತ್ತು ನಾಗೇಶ್ವರ ರಾವ್

ಸುಪ್ರಿಂ ಕೋರ್ಟಿನಲ್ಲಿ ಇತ್ತೀಚಿನ ವಿವಾಹ ವಿಚ್ಛೇದನ ಪ್ರಕರಣವೊಂದರಲ್ಲಿ ಬರೆದ ತೀರ್ಪು.

ಮನು ಸಂತಾನಗಳು ಈ ಸಮಾಜದಲ್ಲಿ ಇನ್ನೂ ನೂರ್ಕಾಲ ಜೀವಂತವಿರುತ್ತವೆ ಎಂಬುದಕ್ಕೆ ಇದು ಇನ್ನೊಂದು ಉದಾಹರಣೆ. ಇದೊಂದು ಪ್ರಕರಣ ನ್ಯಾಯಾಲಯದ ಮೆಟ್ಟಿಲು ಹತ್ತಿದೆ. ಗಂಡ ಸಲ್ಲಿಸಿದ ವಿಚ್ಛೇದನದ ಅರ್ಜಿ ಹೆಂಡತಿ ತನ್ನ ಅತ್ತೆ ಮಾವ ಯಾನೆ ಗಂಡನ ತಂದೆ ತಾಯಂದಿರನ್ನು ನೋಡಿಕೊಳ್ಳಲು ನಿರಾಕರಿಸುತ್ತಿದ್ದಾಳೆ! ಆದ್ದರಿಂದ ಅವಳ ಜೊತೆಗಿನ ವಿವಾಹ ಸಂಬಂಧವನ್ನು ತಾನು ಕಾನೂನು ರೀತ್ಯಾ ಕಡಿದುಕೊಳ್ಳಬಯಸುತ್ತೇನೆ. ಎಂಬುದು ಈ ಪ್ರಕರಣ.

ಇದೇ ಪ್ರಕರಣ ಮತ್ತು ಈ ಹಿಂದೆಯೂ ಹೇಳಿದಂತೆ "ಅಕಸ್ಮಾತ್ ಹೆಂಡತಿ ಆತ್ಮಹತ್ಯೆ ಮಾಡಿಕೊಂಡುಬಿಟ್ಟರೆ ಪಾಪ ಬಡಪಾಯಿ ಗಂಡ ತನ್ನ ಬದುಕಿನುದ್ದಕ್ಕೂ ಕಾನೂನಿನ ಕುಣಿಕೆಗೆ ಸಿಕ್ಕಿ ಹಾಕಿಕೊಳ್ಳುತ್ತಾನೆ. ಆ ಒತ್ತಡ ಅವನ ಜೀವನವನ್ನೇ ನುಂಗಿ ಹಾಕುತ್ತದೆ'

ಈ ಪ್ರಕರಣದ ಮೂಲಕ ಮತ್ತೊಮ್ಮೆ ನಾವು ಈ ದೇಶ, ಇಲ್ಲಿಯ ಸಮಾಜ, ಇಲ್ಲಿಯ ಆಡಳಿತ, ನ್ಯಾಯಿಕ ವ್ಯವಸ್ಥೆಗಳು ಇನ್ನೂ ಯಾವ ಮೌಲ್ಯಗಳನ್ನೇ ಪ್ರತಿಪಾದಿಸುತ್ತಿವೆ ಎಂಬುದನ್ನು ನೋಡಬಹುದು. ಯಾವ ವ್ಯವಸ್ಥೆ, ನಾಗರೀಕತೆಯ ಉತ್ತುಂಗದಲ್ಲಿದ್ದೇವೆಂದು ಭಾವಿಸಿಕೊಂಡಿರುವ ಈ ಕಾಲಘಟ್ಟದಲ್ಲಿ ಬದಲಾದ ಆಲೋಚನಾ ಕ್ರಮಕ್ಕೆ ಒಗ್ಗಿಕೊಳ್ಳಬೇಕಿತ್ತೋ ಅದು ಸಾಧ್ಯವಾಗಿಲ್ಲ. ಈ ಪ್ರಕರಣವನ್ನು ಕೇಳಿದ ತಕ್ಷಣ ಯಾರಿಗಾದರೂ ಸಹಜವಾಗಿ ಅನಿಸುತ್ತದೆ ಹೌದಲ್ವ! ಮದುವೆ ಮಾಡಿಕೊಂಡು ಬಂದ ಮಾತ್ರಕ್ಕೆ ಅಪ್ಪ ಅಮ್ಮನ್ನ ದೂರ ಮಾಡ್ಬೇಕಾ? ಮಗನ ಕರ್ತವ್ಯ ಅಲ್ವಾ? ಹೌದು. ಭಾರತದಂಥಹ ದೇಶದ, ಕುಟುಂಬ ವ್ಯವಸ್ಥೆ ಇರುವ ವಾಸ್ತವದಲ್ಲಿ ತಂದೆ ತಾಯಿಯರನ್ನು ನೋಡಿಕೊಳ್ಳುವುದು ಮಕ್ಕಳ ಜವಾಬ್ದಾರಿ. ಗಂಡು ಮಗನ ಹಾಗೆಯೇ ಹೆಣ್ಣು ಮಕ್ಕಳಿಗೂ ತಂದೆ ತಾಯಂದಿರಿರುತ್ತಾರೆ. ಅವರು ತಮ್ಮ ಆದಾಯವನ್ನು ತಮ್ಮ ತಂದೆ ತಾಯಂದಿರನ್ನು ನೋಡಿಕೊಳ್ಳಲು ಅಷ್ಟು ಸುಲಭವಾಗಿ ಈ ಸಮಾಜ ಬಿಡುತ್ತದೆಯೇ? ಈ ವಿಷಯವನ್ನು ಬೇರೆಯೇ ರೀತಿಯಲ್ಲಿ ಅರ್ಥೈಸುವ ಮತ್ತು ಸಮಸ್ಯೆಗಳಿದ್ದಲ್ಲಿ ಪರಿಹಾರ ಮಾರ್ಗೋಪಾಯಗಳನ್ನು ಹುಡುಕುವ ಕೆಲಸವಾಗಬೇಕಿತ್ತು.

ಆದರೆ ದೇಶದ ಸರ್ವೋಚ್ಚ ನ್ಯಾಯಾಲಯ ಹಿಂದೂ ಗಂಡು ಮಗನ ಕರ್ತವ್ಯವನ್ನು ಅವನ ಹೆಂಡತಿಯ ಮೂಲಕ ನಿರ್ವಚಿಸಲು ಬಯಸಿದೆ. ಮತ್ತು ಅಲ್ಲಿ ಅದು ಲಿಂಗ ಪಕ್ಷಪಾತಿಯಾಗುತ್ತದೆ. ವಿವಾಹವಾದ ಮಹಿಳೆ ತನ್ನ ಗಂಡನ ಕುಟುಂಬದ ಭಾಗವಾಗಿರುವುದರಿಂದ ಅವಳ ಕರ್ತವ್ಯಗಳೇನು ಎಂಬುದನ್ನು ಮನುಸ್ಮೃತಿಯ ವಾಕ್ಯಗಳೆಂದು ಭಾಸವಾಗುವಂತೆ, ಯಾವುದೇ ಕಾನೂನಿನ ಆಧಾರವೇ ಇಲ್ಲದೆ ವಾಡಿಕೆ, ಪದ್ಧತಿಗಳ ಆಧಾರದಲ್ಲಿ ತೀರ್ಪು ಕೊಟ್ಟಿದೆ. ಹಾಗೆ ಮಾಡುವ ಮೂಲಕ ಹಿಂದೂ ಗಂಡು ಮಗನಿಗೆ ಅವನ ಹೆಂಡತಿಗಿಂತ ವಿಶೇಷ ಸ್ಥಾನಮಾನವನ್ನು ಕೊಟ್ಟಿದೆ. ಆದರೆ ಇದೇ ದೇಶದಲ್ಲಿ ಅವಳ ಇಚ್ಛೆಗೆ ವಿರುದ್ಧವಾಗಿ ವಿಚ್ಛೇದನ ಕಾನೂನಿನ ಪ್ರಕಾರ, ಒಮ್ಮೊಮ್ಮೆ ಯಾವ ಮುಲಾಜು ಮಾನವೀಯತೆಯೂ ಇಲ್ಲದೇ ಪರಿತ್ಯಜಿಸಿದ ಲಕ್ಷಾಂತರ ಮಹಿಳೆಯರು ಜೀವನಾಂಶಕ್ಕಾಗಿ ಕೋರ್ಟಿಗೆ ಅಲೆದಾಡುವ, ಕೋರ್ಟಿನಲ್ಲಿ ತೀರ್ಮಾನವಾಗುವ ಕ್ಷುಲ್ಲಕ ಮೊತ್ತವನ್ನೂ ಕೊಡದೇ ಸತಾಯಿಸಿ ಗೋಳಿಗೆ ತಳ್ಳುವ ವಿಷಯಗಳು ಇವರ ಗಮನಕ್ಕೆ ಬರುತ್ತಿಲ್ಲವೇ?

ಇದು ಸಾಮಾಜಿಕ ಸಂದರ್ಭದಲ್ಲಿ ಹೊಸತೆನಿಸದ ಪುರುಷ ಪ್ರಧಾನ ಮೌಲ್ಯಗಳಾಗಿ ಬೇರೂರಿರುವ ಚಿಂತನೆ ಎಂದು ಭಾವಿಸಬಹುದು, ಆದರೆ ಈ ದೇಶದ ಸಂವಿಧಾನದಲ್ಲಿ ಅಂಥಹ ಅವಕಾಶಗಳಿಲ್ಲ. ಸಂವಿಧಾನ ಸಮಾನತೆಯನ್ನು ಪ್ರತಿಪಾದಿಸುತ್ತದೆ. ಅಂತಹ ಸಂವಿಧಾನದ ಚೌಕಟ್ಟಿನಲ್ಲಿಯೇ ಕಾರ್ಯನಿರ್ವಹಿಸಬೇಕಾದ ಪ್ರಜಾಪ್ರಭುತ್ವದ ಅಂಗಗಳಲ್ಲಿ ಒಂದಾದ ನ್ಯಾಯಾಂಗ ಒಂದು ಪ್ರಕರಣಕ್ಕೆ ತೀರ್ಪು ನೀಡುವಾಗ ತೋರಿಸಿದ ಲಿಂಗಾಧಾರಿತ ತಾರತಮ್ಯ ಎಷ್ಟು ಸರಿ? ಒಂದು ನಿರ್ದಿಷ್ಟ ಪ್ರಕರಣವನ್ನು ಅದರ ಅಗತ್ಯಕ್ಕನುಗುಣವಾಗಿ ವಿಶ್ಲೇಷಿಸುವ ಅಗತ್ಯವಿರುತ್ತದೆ. ಆದರೆ ಹಾಗೆ ಮಾಡುವಾಗ ಕೊಟ್ಟು ಬಿಡುವ ಅಭಿಪ್ರಾಯ, ಬರೆಯುವ ತೀರ್ಪು, ಬೀರಬಹುದಾದ ಪ್ರಭಾವ, ಮಾಡಬಹುದಾದ ದೂರಗಾಮೀ ಪರಿಣಾಮಗಳು ನಮಗೆ ಗಾಬರಿ ಹುಟ್ಟಿಸುತ್ತವೆ.

ಈ ಹಿಂದೆ ಚೆನ್ನೈ ನ್ಯಾಯಾಲಯ ಅತ್ಯಾಚಾರಿಯ ಜೊತೆ ವಿವಾಹಮಾಡಿಕೊಳ್ಳುವ ಸಾದ್ಯತೆಯನ್ನು ಪರಿಶೀಲಿಸಲು ಆರೋಪಿಗೆ ಜಾಮೀನು ನೀಡಿದ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯ ಮಧ್ಯಪ್ರವೇಶಿಸಿ ಅದನ್ನು ಅನೂರ್ಜಿತಗೊಳಿಸಿತ್ತು. ಯಾಕೆಂದರೆ ಅಂತಹ ಒಂದು ಕ್ರಮ ಕಾನೂನಿನ ಮಾನ್ಯತೆಯನ್ನು ಪಡೆಯಲಾರದು. ಮತ್ತು ಅದು ಅಮಾನವೀಯವೆಂಬ ಕಾರಣಕ್ಕಾಗಿ ಕೂಡ. ಅದೇ ಪ್ರಾಂಗಣದಲ್ಲಿ ಹಲವು ಮಹಿಳಾ ಪರವಲ್ಲದ ಸಂಗತಿಗಳು ನಡೆದಿರುವುದರಲ್ಲಿ ಈಗ ಚರ್ಚಿಸುತ್ತಿರುವ ವಿಷಯವೂ ಒಂದು. ಹೌದು. ಇಂಥಹ ಪ್ರಕರಣಗಳು ಬಂದಾಗ ಸುತ್ತಲಿನ ನೈಜ ಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಮತ್ತು ಸಾಮಾಜಿಕ ಕಟ್ಟುಪಾಡುಗಳಾಚೆಯ ಆರೋಗ್ಯಪೂರ್ಣ ವ್ಯವಸ್ಥೆಯ ನಿರ್ಮಾಣಕ್ಕೆ ಚರ್ಚೆಗೆ ಅನುಕೂಲವಾಗುವಂತಹ ಸ್ಥಿತಿಯನ್ನು ಸೃಷ್ಟಿಸಬೇಕಾಗುತ್ತದೆ. ಉದಾಹರಣೆಗೆ ಈ ಪ್ರಕರಣದಲ್ಲಿ ತನ್ನ ತಂದೆ ತಾಯಂದಿರನ್ನು ನಿರ್ಲಕ್ಷ ಮಾಡುವ, ತನ್ನನ್ನು ಅವರಿಂದ ಪ್ರತ್ಯೇಕಿಸುವ ಮತ್ತು ಆತ್ಮಹತ್ಯೆಯಂತಹ ಕೃತ್ಯಕ್ಕೆ ಕೈಹಾಕಿಬಿಡುವ ಇತ್ಯಾದಿ ಕಾರಣಗಳಿದ್ದ 'ಹಿಂದೂ' ಮಗ ಮತ್ತು ವೃದ್ಧ ಅಥವಾ ಹೆತ್ತ ತಂದೆ ತಾಯಿ. ಭಾರತದಂಥಹ ಕಲ್ಯಾಣ ಸಮಾಜದ ಕಲ್ಪನೆಗಳ (ವೆಲ್ಫೇರ್ ಸೊಸೈಟಿ) ದೇಶದಲ್ಲಿ ಸರಕಾರಕ್ಕೆ ಈ ದೇಶದ ಎಲ್ಲ ಪ್ರಜೆಗಳ ಹಿತಾಸಕ್ತಿಯನ್ನು ಗಮನಿಸುವ ಕರ್ತವ್ಯವಿದೆ. ಹಾಗೆಂದ ಮೇಲೆ ಮುಂದಿನ ದಿನಗಳಲ್ಲಿ ಕಾಡಬಹುದಾದ ದೊಡ್ಡ ಸಮಸ್ಯೆಗಳಲ್ಲಿ ಒಂದು ವಯೋವೃದ್ಧರ ಬದುಕಿನ ಪ್ರಶ್ನೆ. ಅವರ ವಸತಿ, ಆರೋಗ್ಯ, ನೆಮ್ಮದಿಗಳ ಪ್ರಶ್ನೆ. ಇದನ್ನು ಸರಕಾರದ ಸಮಾಜದ ಗಮನಕ್ಕೆ, ಚರ್ಚೆಗೆ ತರುವ ನಿಟ್ಟಿನಲ್ಲಿ ಇಂಥಹ ಪ್ರಕರಣಗಳನ್ನು ಸಮಾಜಮುಖಿಯಾಗಿ ವಿಶ್ಲೇಷಿಸಬಹುದಿತ್ತಲ್ಲದೇ, ಕೇವಲ ಸಂಪ್ರದಾಯವಾದಿ ಮನಸ್ಸಿನ ಕನ್ನಡಿಯಾಗಿಬಿಟ್ಟರೆ . . .?

ಇದರ ಜೊತೆಯೇ ಇನ್ನೊಂದು ಪ್ರಕರಣದಲ್ಲಿ ಈ ವರ್ಷದ ಮಾರ್ಚ್ ತಿಂಗಳಿನಲ್ಲಿ ಮುಂಬೈ ಹೈಕೋರ್ಟ ಕೊಟ್ಟ ತೀರ್ಪನ್ನು ಉಲ್ಲೇಖಿಸಬಹುದು. ಅಲ್ಲಿ ಹಿರಿಯ ಗಂಡು ಮಗ (ಹಿಂದೂ) ತಂದೆ ತಾಯಿ ತನ್ನ ಜೊತೆಗಿನ ವೈಮನಸ್ಯದ ಕಾರಣದಿಂದ ತನ್ನ ಸೋದರ ಸೋದರಿ ಇಬ್ಬರೂ ಒಳ್ಳೆಯ ಕೆಲಸ ಮತ್ತು ಆದಾಯ ಗಳಿಸುತ್ತಿದ್ದರೂ ಅವರ ಬಳಿ ಜೀವನಾಂಶ ಕೇಳದೇ ತನ್ನಿಂದ ಕೇಳುತ್ತಿದ್ದಾರೆ ಎಂಬದು ಪ್ರಕರಣ. ಆಗ ಕೋರ್ಟ್ ತೀರ್ಪು ಕೊಡುತ್ತದೆ. ಆದಾಯ ಗಳಿಸುತ್ತಿರುವ ಹೆಣ್ಣುಮಗಳೂ ತಂದೆ ತಾಯಂದಿರನ್ನು ನೋಡಿಕೊಳ್ಳಲು ಬಾಧ್ಯಸ್ಥಳು!!

ಧರ್ಮವಂತೆಯಾದ ಪತಿವ್ರತೆಯು ತನ್ನ ಪತಿಯು ಬದುಕಿರುವಾಗಲೂ, ಅಥವಾ ಮರಣ ಹೊಂದಿದರೂ ಸದ್ಗತಿಯನ್ನಪೇಕ್ಷಿಸುತ್ತ ಅವನ ಮನಸಿಗೆ ವಿರುದ್ಧವಾದ ಏನನ್ನೂ ಮಾಡುವುದಿಲ್ಲ.

ಮನುಸ್ಮೃತಿ ಅಧ್ಯಾಯ–5 ಖಂಡ 156.

ನಮಗೆ ಸದ್ಗತಿಯನ್ನು ಬೋಧಿಸುವ ಮನುಸ್ಮೃತಿಯಲ್ಲ, ಬದಲಿಗೆ ಸಮಾನತೆಯನ್ನು ಬೋಧಿಸುವ ಸಂವಿಧಾನ ಪ್ರಸುತ. ಸುಪ್ರಿಂ ಕೋರ್ಟಿನ ಕಟಕಟೆಯಲ್ಲಿ ಅಂಬೇಡ್ಕರ್ ಸುಟ್ಟುಹಾಕಿದ ಮನುಸ್ಮೃತಿಗೆ ಸ್ಥಳ ಬೇಡ. ಅಂಬೇಡ್ಕರ್ ನೇತೃತ್ವದಲ್ಲಿ ರಚನೆಯಾದ ಸ್ವಾತಂತ್ರ ಸಮಾನತೆ ಸೋದರತ್ವವನ್ನು ಪ್ರತಿಪಾದಿಸುವ ದೇಶದ ಸಂವಿಧಾನವೇ ಇರಲಿ. ■

ಕಳೆದ 25 ವರ್ಷಗಳ 'ಚಿಂತನಾ ವಿನ್ಯಾಸ ಪಲ್ಲಟ'..........

ಪುಟ 6 ರಿಂದ

ಅರ್ಥವಿದೆ ಎಂಬ ಭ್ರಮೆ ಹುಟ್ಟಿಸಿದರು. ಅದರ ಅರ್ಥ ಇಷ್ಟೆ: ಪ್ರತಿಯೊಂದು ತಾತ್ವಿಕ ಪರಿಕಲ್ಪನೆಯನ್ನೂ ಜಾಗತಿಕ ಬಂಡವಾಳದ ಆಶಯವನ್ನು ಬಿಂಬಿಸುವಂತೆ ಮರುವ್ಯಾಖ್ಯಾನ ಮಾಡುವುದು. ಅನ್ಯಾಯವನ್ನು ಕಾನೂನುಬದ್ಧಗೊಳಿಸಿ ನ್ಯಾಯವೆಂದು ಹೇಳುವುದು. ಎಲ್ಲ ಬಗೆಯ ಅಕ್ರಮಗಳನ್ನು ಸಕ್ರಮಗೊಳಿಸುವುದು. ಅನೈತಿಕತೆಗೆ ನೀತಿಯನ್ನು ಹೊಂದಿಸಿ ತಾತ್ವೀಕರಿಸುವುದು. ಮಾನವೀಯ ಆಸಕ್ತಿ, ಅನುಕಂಪ, ಕರುಣೆಗಳನ್ನು ಕೆಳಗೆ ಹಾಕಿ ಸ್ವಕೇಂದ್ರಿತ ಹಿತಾಸಕ್ತಿಯನ್ನು ವೈಭವೀಕರಿಸಿ ವೃತ್ತಿ ಧರ್ಮವೆಂದು ಸಾರುವುದು. ಸ್ವಾರ್ಥಪರತೆಯನ್ನು ಸಾರ್ಥಕ ಬದುಕೆಂದು, ಅಸಾಮಾಜಿಕತೆಯನ್ನು ಬುದ್ಧಿವಂತಿಕೆಯೆಂದು ನಿರ್ವಚಿಸುವುದು. ಪೂರ್ಣ ಚಿತ್ರವನ್ನು ಮರೆಮಾಚಿ ಆಂಶಿಕ ಚಿತ್ರವನ್ನು ಸಾಂದರ್ಭಿಕ ಅನುಕೂಲಕ್ಕೆ ತಕ್ಕಂತೆ ತೋರಿಸಿ ಅದೇ ಇಡೀ ಚಿತ್ರವೆಂದು ನಂಬಿಸುವುದು. ತಪ್ಪು–ಸರಿ, ಒಳ್ಳೆಯದು–ಕೆಟ್ಟದ್ದು, ನ್ಯಾಯ–ಅನ್ಯಾಯ, ಉದ್ಯೋಗ–ನಿರುದ್ಯೋಗ, ಬಡತನ–ಸಿರಿತನ, ನೀತಿ–ಅನೀತಿ, ಧರ್ಮ–ಅಧರ್ಮ, ಮಾನವೀಯತೆ–ಅಮಾನವೀಯತೆ, ಮುಂತಾದ ದ್ವಂದ್ವಾತ್ಮಕ ವಿಭಾಗಗಳ ನಡುವಿನ ಗೆರೆಗಳನ್ನು ಅಳಿಸಿಹಾಕುವಂಥ, ಇಲ್ಲವೆ ಮಸುಕುಗೊಳಿಸುವಂತೆ ಸಂಕೀರ್ಣಗೊಳಿಸಿದ ಧೂರ್ತ ವಾದಗಳನ್ನು ತರ್ಕಬದ್ಧವಾಗಿ ಮಂಡಿಸಿ ಜನರ ಯೋಚನಾಲಹರಿಯಲ್ಲೇ ಗೊಂದಲ ಹುಟ್ಟಿಸುವುದು.

ನ್ಯಾಯ, ನೀತಿ, ಧರ್ಮಗಳ ಈ ಬಗೆಯ ಧೂರ್ತ ನಿರ್ವಚನೆಯನ್ನು ಜನರಲ್ಲಿ, ಅದರಲ್ಲೂ ಯುವಜನತೆಯ ಚಿಂತನಾಕ್ರಮದಲ್ಲಿ ಆಳವಾಗಿ ಬೇರೂರಿಸುವ ಕಾರ್ಯದಲ್ಲಿ ಧೂರ್ತ ಕಾನೂನು ತಜ್ಞರು, ಹೃದಯಹೀನ ಮನೋವಿಜ್ಞಾನಿಗಳು, ಹಣಗಳಿಕೆಯಲ್ಲದೆ ಬೇರಾವ ಮೌಲ್ಯಗಳ ಪ್ರಾಥಮಿಕ ಪರಿಚಯವೂ ಇಲ್ಲದ ಅರ್ಥಶಾಸ್ತ್ರಜ್ಞರು, ಮನುಷ್ಯರೆಂದು ಕರೆಸಿಕೊಳ್ಳಲೂ ಅಯೋಗ್ಯರಾದ ರಾಜಕಾರಣಿಗಳು, ಎಳಸು ಪ್ರತಿಭೆ–ವಣಿಕ ಕಲಾಕೌಶಲಗಳ ಜಾಹಿರಾತು ಕಲಾವಿದರು, ಉದ್ಯಮಿಗಳ ಅಡಿಯಾಳಾದ ವಿಜ್ಞಾನಿಗಳು, ಜ್ಞಾನ–ಮಾಹಿತಿಗಳ ಬಿಕರಿಯನ್ನೇ ಉದ್ಯೋಗವನ್ನಾಗಿ ಮಾಡಿಕೊಂಡ ಶಿಕ್ಷಣತಜ್ಞರು ಮತ್ತು ಇವರೆಲ್ಲರ ಸೇವೆಯನ್ನು ಕೊಂಡುಕೊಂಡು ಜನಸಾಮಾನ್ಯರ ಕಷ್ಟ–ಕಾರ್ಪಣ್ಯಗಳನ್ನೂ ವ್ಯಾಪಾರದ ಸರಕನ್ನಾಗಿಸಿಕೊಳ್ಳುವ ಉದ್ಯಮಿ–ವ್ಯಾಪಾರಿಗಳು ಮಹತ್ತರ ಪಾತ್ರ ವಹಿಸಿದ್ದಾರೆ. ಇವರೆಲ್ಲರ ಸಕ್ರಿಯ ರಾಜಕಾರಣದಿಂದಾಗಿ ಪ್ರಜಾತಂತ್ರವೆಂದರೆ ಮಾರುಕಟ್ಟೆಯ ಹಿಡಿತ, ಸ್ವಾತಂತ್ರ್ಯವೆಂದರೆ ಆಯ್ಕೆ ಇಲ್ಲದ ಸ್ಥಿತಿ, ಯಾರನ್ನೂ ಏನನ್ನೂ ಕೇಳಲಾಗದ, ಸರ್ಕಾರಗಳು ಜನರಿಗೆ ಉತ್ತರದಾಯಿತ್ವವನ್ನು ಕೊಡದ, ಅನಾಥತೆ, ಅತಂತ್ರತೆ ಎಂಬಂಥ ಸ್ಥಿತಿ ನಿರ್ಮಾಣವಾಗಿದೆ. ಮಾನವೀಯ ಸಂಬಂಧಗಳೆಂದರೆ ಅವರವರ ಪಾಡು ಅವರಿಗೆ. ಅಭಿವೃದ್ಧಿಯೆಂದರೆ ಜಾಗತಿಕ ಸಾಲದಿಂದ ರಸ್ತೆ–ಮೇಲ್ಸೇತುವೆ ನಿರ್ಮಿಸಿ ಮೆಟ್ರೊ–ಬುಲೆಟ್ ರೈಲುಗಳನ್ನು ಓಡಿಸುವುದು, ಕೃಷಿಭೂಮಿಯನ್ನು ವಶಪಡಿಸಿಕೊಂಡು ಉದ್ಯಮಿಗಳಿಗೆ ಸ್ಮಾರ್ಟ್ ಸಿಟಿ ನಿರ್ಮಿಸಲು ಗುತ್ತಿಗೆ ಕೊಡುವುದು. ಆದಾಯವೆಂದರೆ ಬಡ್ಡಿ ಗಳಿಕೆ. ಸುಖಪಡುವುದೆಂದರೆ ಕೊಂಡುಕೊಳ್ಳವುದು. ನೆಮ್ಮದಿಯೆಂದರೆ ಭ್ರಮೆಗಳಲ್ಲಿ ಮೈ ಮರೆಯುವುದು.

ಹೀಗೆ ಪದಗಳು ಅವೇ ಇದ್ದರೂ ಅವುಗಳ ಅರ್ಥ ಮಾತ್ರ ತದ್ವಿರುದ್ಧವಾಗಿ ಅರ್ಥಾಂತರ ಆಗಿದೆ. ಕ್ರೆಡಿಟ್ ಕಾರ್ಡ್, ಸೆಲ್‌ಫೋನ್, ವಿಮೆ, ಲಾಟರಿ, ಇವೇ ಮೊದಲಾದ ಮಾರ್ಜಾಲ ಜಾಲಗಳ ಮೂಲಕ ಜನಸಾಮಾನ್ಯರ ಬೆವರ ಗಳಿಕೆಯ ಪುಡಿಗಾಸನ್ನು ಸದ್ದಿಲ್ಲದೆ ಬಸಿದುಕೊಂಡು ಕೋಟ್ಯಾಧಿಪತಿಗಳಾಗುವ ಭವ್ಯ ಮಹಲ್ಲುಗಳ ಜಂಟ್ಲ್‌ಮನ್‌ಗಳು. ಸರಕು–ಸೇವೆಗಳ ವಿನಿಮಯ–ವ್ಯಾಪಾರಗಳಲ್ಲಿ ಹೆಜ್ಜೆ ಹೆಜ್ಜೆಗೂ ಸಿಗುವ ದಲ್ಲಾಳಿಗಳ ಕುಟಿಲ ವ್ಯವಹಾರಗಳಿಂದ ಹಿಡಿದು, ಕುಳಿತ ಕಡೆಗಳಿಂದಲೇ ರೈತ–ಕಾರ್ಮಿಕರ ಶ್ರಮದ ಫಲವನ್ನು ಲಪಟಾಯಿಸಿ, ಬೆಳೆ ಬೀಜಗಳ ಸಂಪೂರ್ಣ ನಿಯಂತ್ರಣದ ಮೂಲಕ ಇಡೀ ಜಗತ್ತನ್ನೆ ತಮ್ಮ ಮುಷ್ಟಿಯಲ್ಲಿಟ್ಟುಕೊಳ್ಳಲು ಹೆಣಗುವ ಜಾಗತಿಕ ಹಗಲು ದರೋಡೆಕೋರರವರೆಗೆ ಈ ಅರ್ಥಾಂತರದ ರೂವಾರಿಗಳು ಮತ್ತು ಫಲಾನುಭವಿಗಳು ವ್ಯಾಪಿಸಿದ್ದಾರೆ. ಪಾರಂಪರಿಕ ಅಮಲುಕಾರಕವಾದ ಹೆಂಡದ ಜೊತೆಗೆ ಯುವಜನರನ್ನು ನಿಷ್ಕ್ರಿಯೆ ಮತ್ತು ಖಿನ್ನತೆಗಳಿಗೆ ದೂಡುವ ಸಾಮಾಜಿಕ ಜಾಲತಾಣಗಳು ಆಧುನಿಕ ಜನಜೀವನವನ್ನು ಪಲ್ಲಟಗೊಳಿಸಿವೆ.

ಆದ್ದರಿಂದಲೇ, ಜಾಗತಿಕ ಬಂಡವಾಳ ಮತ್ತೊಮ್ಮೆ ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ನ್ಯಾಯ, ನೀತಿ, ಧರ್ಮ ಮತ್ತು ಮಾನವೀಯ ಸಂಬಂಧಗಳ ಮರು–ವ್ಯಾಖ್ಯಾನ ತುರ್ತಾಗಿ ಆಗಬೇಕಿದೆ. ಕಲ್ಪಿತ ವಾಸ್ತವಗಳಲ್ಲಿ ಮುಳುಗುತ್ತಿರುವ ಈ ವಿಶ್ವವನ್ನು ವಾಸ್ತವ ಸತ್ಯದ ನೆಲೆಗೆ ಮತ್ತೆ ತರಬೇಕಾಗಿದೆ. ಒಂದು ಕಡೆ ನಿರಂತರವಾಗಿ ಉಂಟಾಗುತ್ತಿರುವ ಪ್ರಾಕೃತಿಕ ಅಸಮತೋಲನ. ಮತ್ತೊಂದು ಕಡೆ ಆರ್ಥಿಕ ಬಿಕ್ಕಟ್ಟುಗಳಿಂದಾಗಿ ದಿನೇ ದಿನೇ ಹೆಚ್ಚುತ್ತಿರುವ ಅಸಹನೆ, ಹತಾಶೆ, ಅಸಹಾಯಕತೆ, ಆತ್ಮಹತ್ಯೆ, ಕ್ರೌರ್ಯ, ಹಿಂಸೆಗಳು ಮತ್ತು ಕಳ್ಳತನ, ಹಾದರ, ಕೊಲೆ ಸುಲಿಗೆ ದರೋಡೆಗಳಂಥ ಬಡತನ ಮೂಲದ ಸಾಮಾಜಿಕ ವಿಷಮತೆಗಳು. ಇವುಗಳಿಂದಲೂ ಲಾಭ ಪಡೆದುಕೊಳ್ಳಲು ವ್ಯಾಪಾರಿಗಳು ಅಧಿಕಾರಸ್ಥರ ಸಹಯೋಗದಲ್ಲಿ ಬೀದಿ ಬೀದಿಗೂ, ಮನೆ ಮನೆಗೂ ಅಳವಡಿಸುತ್ತಿರುವ ವಿಚಕ್ಷಣಾ ಕ್ಯಾಮರಾಗಳು. ಕುಸಿದ ನೈತಿಕತೆಯಿಂದಾಗಿ ಸಾಮಾನ್ಯ ಜನರಲ್ಲಿ ಹೆಚ್ಚುತ್ತಿರುವ ಹತಾಶೆ–ದೈವಭಕ್ತಿಗಳನ್ನು ಬಂಡವಾಳ ಮಾಡಿಕೊಂಡು ಜನರ ಮಧ್ಯೆ ದ್ವೇಷ–ಮೌಢ್ಯಗಳನ್ನು ಬಿತ್ತಿ ತಮ್ಮ ಬೇಳೆ ಬೇಯಿಸಿ ಕೊಳ್ಳಬಯಸುವ, ಬದುಕಿ ಬಾಳುವ ಉತ್ಸಾಹದ ಬದಲು ಕೊಲ್ಲುವ ರಣೋತ್ಸಾಹಗಳಲ್ಲಿ ಸಂತೋಷ ಕಾಣುವ ಮಾನಸಿಕವಾಗಿ ರೋಗಿಷ್ಟರಾದ ರಾಜಕಾರಣಿಗಳು. ಇವೆಲ್ಲವುಗಳ ಮಧ್ಯೆಯೇ ನಿಜವಾದ ಸ್ವಾತಂತ್ರ್ಯ, ಪ್ರೀತಿ–ಸಮಾನತೆ–ಸೋದರತೆಗಳ ಸಂಬಂಧ ಜಾಲವನ್ನು ನಿರ್ಮಿಸಿಕೊಳ್ಳಬೇಕಿದೆ. ಶ್ರಮವನ್ನು ಗೌರವಿಸಿ, ಮೌಲ್ಯ ವೃದ್ಧಿಸಿದ ಆಹಾರ–ಸಂಪತ್ತುಗಳ ಮರುಹಂಚಿಕೆಯಲ್ಲಿ ನಿಜವಾದ ಅರ್ಥದ ಮನುಷ್ಯ ಸಂಬಂಧಗಳನ್ನು ಏರ್ಪಡಿಸಿಕೊಳ್ಳಬೇಕಾಗಿದೆ. ಹೊಸ ಸಮಾಜದ ನಿರ್ಮಾಣ ಆಗಬೇಕಿದೆ. ●

ಗಡಿಯಲ್ಲಿ ಸೈನ್ಯದ 'ಸರ್ಜಿಕಲ್ ಪ್ರಹಾರ'ದ ನಡುವೆಯೇ ದಿಲ್ಲಿಯಲ್ಲಿ ಗಾಯಾಳು ಸೈನಿಕರ ಪೆನ್ಶನ್ ಮೇಲೆ ಪ್ರಹಾರ!

ಸೆಪ್ಟಂಬರ್ 28ರಂದು ಸೈನ್ಯದ ಪಾರಾ ಕಮಾಂಡೋಗಳ ತಂಡ ರಾತ್ರಿಯ ಕತ್ತಲಲ್ಲಿ ನಿಯಂತ್ರಣ ರೇಖೆ ದಾಟಿ ಭಯೋತ್ಪಾದಕರ ವಿರುದ್ಧ ಗಂಡಾಂತರಕಾರಿ ಕಾರ್ಯಾಚರಣೆಗೆ ಸದ್ದಿಲ್ಲದೆ ಹೊರಟಿದ್ದಾಗ, ಇತ್ತ ದಿಲ್ಲಿಯಲ್ಲಿ ಭಾರತ ಸರಕಾರದ ರಕ್ಷಣಾ ಮಂತ್ರಾಲಯ ಇಂತಹ ಕಾರ್ಯಾಚರಣೆಗಳಲ್ಲಿ ಗಾಯಗೊಂಡು ಅಂಗನ್ಯೂನ್ಯತೆಗೊಳಗಾಗಿ ನಿವೃತ್ತರಾಗಬೇಕಾದ ಸೈನಿಕರಿಗೆ ನೀಡುವ 100% ಅಂಗನ್ಯೂನ್ಯತೆಯ ಪೆನ್ಶನ್‌ಗಳನ್ನು ಕಡಿತ ಮಾಡುವ ಒಂದು ಯೋಜನೆಗೆ ಸದ್ದಿಲ್ಲದೆ ಅಂತಿಮ ರೂಪ ಕೊಡುತ್ತಿತ್ತು ಎಂದು ಈಗ ಬಯಲಾಗಿದೆ.

ಸಪ್ಟಂಬರ್ 30ರಂದು, ಅಂದರೆ ಈ ಸೈನಿಕ ಕಾರ್ಯಾಚರಣೆಯ ಕೀರ್ತಿ ಬಾಚಿಕೊಳ್ಳಲು ಆಳುವ ಪರಿವಾರದಲ್ಲಿ 'ಎದೆ ತಟ್ಟಿಕೊಳ್ಳುವ' ಸ್ಪರ್ಧೆ ಆರಂಭವಾಗುವ ವೇಳೆಗೆ ಯುದ್ಧದಲ್ಲಿ ಈ 100% ಅಂಗನ್ಯೂನತೆಯ ಪೆನ್ಶನ್‌ಗಳಲ್ಲಿ ತೀವ್ರ ಕಡಿತ ಮಾಡುವ ಅಧಿಸೂಚನೆ ಹೊರಬಿದ್ದಿತ್ತು. ಇತರ ವೈದ್ಯಕೀಯ ಅಂಗವಿಕಲತೆಯ, ಅಂದರೆ ಕರ್ತವ್ಯ ನಿರ್ವಹಣೆಯ ಪರಿಣಾಮವಾಗಿ ಉಂಟಾಗುವ ಕಡಿಮೆ ಪ್ರಮಾಣದ ಅಂಗವಿಕಲತೆಯ ಪೆನ್ಶನ್‌ಗಳಲ್ಲಿಯೂ ಇದಕ್ಕನುಗುಣವಾಗಿ ಕಡಿತ ಮಾಡಲಾಗಿದೆ. **ತಮಾಷೆಯೆಂದರೆ ಬದಲಾದ ಪೆನ್ಶನ್ ದರಗಳ ಪಟ್ಟಿಯನ್ನು 'ನಿವೃತ್ತ ಸೈನಿಕರ ಇಲಾಖೆ'ಯ ಹೆಸರಲ್ಲಿ 'ಅಂಗವಿಕಲತೆ ಪೆನ್ಶನ್‌ಗಳಲ್ಲಿ ಹೆಚ್ಚಳ' ಎಂಬ ಶಿರೋನಾಮೆಯ ಅಡಿಯಲ್ಲಿ ಪ್ರಕಟಿಸಲಾಗಿದೆ! ಬಹುಶಃ ಇದೇ ಈ ಸರಕಾರದ 'ಒಳ್ಳೆಯ ದಿನ'ಗಳ ಪರಿಕಲ್ಪನೆಯ ನಿಜರೂಪವನ್ನು ತೋರಿಸುತ್ತದೆ.**

ಇದನ್ನು ಸರಕಾರ ಸ್ವೀಕರಿಸಿರುವ ಏಳನೇ ವೇತನ ಆಯೋಗದ ಶಿಫಾರಸಿನ ಪ್ರಕಾರ ಮಾಡಲಾಗಿದೆಯಂತೆ! ಆರನೇ ವೇತನ ಆಯೋಗ ಈ ಪೆನ್ಶನ್‌ಗಳನ್ನು ಸಂಬಂಧಪಟ್ಟ ಸೈನಿಕರ ಕೊನೆಯ ವೇತನಕ್ಕೆ ಅನುಗುಣವಾಗಿ ಕೊಡಲು ಶಿಫಾರಸು ಮಾಡಿದ್ದು ಅದರ ಪ್ರಕಾರ ಕೊಡಲಾಗುತ್ತಿತ್ತು. ಅದರ ಹಿಂದೆ 'ಸ್ಲಾಬ್' ಪದ್ಧತಿಯಿತ್ತು. ಈಗ ಮತ್ತೆ ಆ ಪದ್ಧತಿಗೆ ಹಿಂದಿರುಗಲಾಗಿದೆ. 'ಕಾಂಗ್ರೆಸ್ ಮುಕ್ತ' ಆಡಳಿತದ ಉದಾಹರಣೆ!

ಅದಿರಲಿ, ಗಾಯಾಳು ಸೈನಿಕರು ಕಳಕೊಳ್ಳುವ ಪ್ರಮಾಣವಾದರೂ ಎಷ್ಟು ನೋಡಿ– ಒಬ್ಬ ಯುವ ಸೈನಿಕ ತೀವ್ರ ಗಾಯಗಳಿಂದಾಗಿ ಇನ್ನು ಮುಂದೆ ಯುದ್ಧದಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದರೆ ಆತನಿಗೆ ಸಿಗುವ ಪೆನ್ಶನ್ ಈಗಿರುವ ರೂ. 45,200ರಿಂದ ರೂ.27,200ಕ್ಕೆ ಇಳಿಯುತ್ತದೆ, ಅಂದರೆ ತಿಂಗಳಿಗೆ 18,000ರೂ. ಕಡಿತ!

ಇಂತಹ ಸರ್ಜಿಕಲ್ ಪ್ರಹಾರಗಳ ತಂಡದ ನೇತೃತ್ವ ವಹಿಸುವ 10ವರ್ಷಗಳ ಸೇವೆ ಸಲ್ಲಿಸಿರುವ ಮೇಜರ್‌ಗಳಿಗೆ ಸಿಗುವ ಇಂತಹ ಪೆನ್ಶನ್ 70,000ರೂ.ಗಳಷ್ಟು ಕಡಿತಗೊಳ್ಳುತ್ತದೆ; ಸೈನ್ಯದ ಬೆನ್ನೆಲುಬು ಎನಿಸಿಕೊಂಡ ಜೂನಿಯರ್ ಕಮಿಶನ್ಡ್ ಆಫೀಸರುಗಳ ಪೆನ್ಶನ್‌ನಲ್ಲಿ ಮಾಸಿಕ 40,000ರೂ. ಕಡಿತ!

ಇದರಿಂದ ಆಘಾತವಾಗಿದೆ ಎನ್ನುವುದು ಬಹಳ ನಯವಾದ ಪ್ರತಿಕ್ರಿಯೆಯಾಗುತ್ತದೆ, ವಾಸ್ತವವಾಗಿ ರಕ್ಷಣಾ ಮಂತ್ರಾಲಯ ಇಂತಹ ಪ್ರಹಾರಗಳಲ್ಲಿ ನಮ್ಮೊಂದಿಗೆ ಸೇರಿ ಆಚರಿಸುವ ಬದಲು ನಮಗೆ ಬೆನ್ನಲ್ಲಿ ಚೂರಿ ಹಾಕಿದೆ ಎಂದೊಬ್ಬ ಹಿರಿಯ ಸೇನಾಧಿಕಾರಿ ತಮ್ಮ ಭಾವನೆಯನ್ನು ವ್ಯಕ್ತಪಡಿಸಿರುವುದಾಗಿ ವರದಿಯಾಗಿದೆ.

ಈ ಬಾರಿ ನಡೆಸಿದ 'ಸರ್ಜಿಕಲ್ ಪ್ರಹಾರ' ಹಿಂದೆಂದೂ ನಡೆದಿಲ್ಲ ಎಂದು ರಕ್ಷಣಾ ಮಂತ್ರಿಗಳು(ಬಹುಶಃ ಇನ್ನೂ ಉನ್ನತ ಮುಖಂಡರ ಪರವಾಗಿ) ಹೇಳಿಕೊಂಡಾಗ ಇದು ನಿಜವಲ್ಲ, ಈ ಹಿಂದೆ 2011ರಲ್ಲಿ ಮತ್ತು ಅದಕ್ಕೂ ಮೊದಲು ಕೂಡ ನಡೆದಿತ್ತು, ಅವುಗಳ ಬಗ್ಗೆ ಅಷ್ಟು ಪ್ರಚಾರ ಕೊಡಲಿಲ್ಲ, ಏಕೆಂದರೆ ಅದು 'ಅಭಿಮಾನಿ'ಗಳನ್ನು ಸಂತುಷ್ಟಗೊಳಿಸಲು ಮಾಡಿದ್ದಲ್ಲ ಎಂದು ಒಂದೆಡೆ ಚರ್ಚೆ ನಡೆದರೆ, ಇನ್ನೊಂದೆಡೆಯಲ್ಲಿ ಮಿಲಿಟರಿ ನಿರೂಪಣೆಗಳ ಪ್ರಕಾರ ಇದು 'ಸರ್ಜಿಕಲ್ ಪ್ರಹಾರ' ಎಂಬ ವಿಧಕ್ಕೆ ಬರುವುದೇ ಇಲ್ಲ ಎಂಬ ವಾದವೂ ಕೇಳಬರುತ್ತಿದೆ.

ಅದೇನೇ ಇರಲಿ, ಇಂತಹ ಗಂಡಾಂತರಕಾರಿ ಕಾರ್ಯಾಚರಣೆಗಳಲ್ಲಿ ಭಾಗವಹಿಸಬೇಕಾದ ಸೈನಿಕರ ಸೌಲಭ್ಯಗಳನ್ನು ಕಡಿತ ಮಾಡಿದ ಕೀರ್ತಿ ಈ ಸರಕಾರಕ್ಕೇ ಸಲ್ಲಬೇಕು ಎನ್ನುವುದರಲ್ಲಿ ಸಂದೇಹವಿಲ್ಲ. ಏಕೆಂದರೆ ಸೇನಾ ಮುಖ್ಯಾಲಯದ ಲೆಕ್ಕಾಚಾರದ ಪ್ರಕಾರವೂ ಹಿಂದಿನ 'ಸ್ಲಾಬ್ ಪದ್ಧತಿ'ಗೆ ಹಿಂದಿರುಗಿದರೆ 100ಶೇ. ಅಂಗವಿಕಲತೆ ಉಂಟಾದ ಸೀನಿಯರ್ ಸಿಪಾಯಿಗೆ ಮಾಸಿಕ ರೂ.2040ರೂ., ಸುಬೇದಾರ್‌ಗೆ 3472ರೂ. ಮತ್ತು ಲೆಫ್ಟಿನೆಂಟ್ ಕರ್ನಲ್‌ಗೆ 6855ರೂ. ಕಡಿತವಾಗುತ್ತದೆಯಂತೆ. ಇವು ಕನಿಷ್ಟ ಕಡಿತಗಳು ಎಂದು ಹೇಳಬಹುದೇನೋ.

ನಮ್ಮ ಮಾನ್ಯ ರಕ್ಷಣಾ ಮಂತ್ರಿಗಳು ಸೈನಿಕರು ತಮ್ಮ ಶಕ್ತಿಯ ಅರಿವಿಲ್ಲದ 'ಹನುಮಂತರು, ಅವರಿಗೆ ಅವರ ಶಕ್ತಿಯ ಅರಿವು ಮಾಡಿಕೊಟ್ಟ ನಮ್ಮ ಮಾನ್ಯ ಪ್ರಧಾನ ಮಂತ್ರಿಗಳ ಸಮರ್ಥ ನಾಯಕತ್ವಕ್ಕೆ ಪೂರ್ಣ ಕೀರ್ತಿ ಸಲಲ್ಬೇಕು, ಇದರ ಯೋಜನೆಯಲ್ಲಿ ಭಾಗಿಯಾದ ತನಗೂ ಸ್ವಲ್ಪ ಕೀರ್ತಿ ಸಲ್ಲಬೇಕು ಎಂದು ಹೇಳಿರುವುದು ಮನುಪ್ರಣೀತ 'ಭವ್ಯ ಪರಂಪರೆ'ಯ ನೆನಪು ಮಾಡಿಕೊಡುತ್ತದೆ ಎಂದರೆ ತಪ್ಪಾದೀತೇ ಎಂದೊಬ್ಬ ವಿಶ್ಲೇಷಕರು ಪ್ರಶ್ನಿಸಿದ್ದಾರೆ.

ಪಠಾಣಕೋಟ್‌ನಲ್ಲಿ ಮತ್ತು ಉರಿಯಲ್ಲಿ ಭಯೋತ್ಪಾದಕರು ಭಾರೀ ಭದ್ರತೆಯಿರುವ ನಮ್ಮ ಸೇನಾ ಸಂರಚನೆಯ ಮೇಲೇಯೇ ದಾಳಿ ಮಾಡಿ ನಮ್ಮ ಸೈನಿಕರ ಪ್ರಾಣ ತೆಗೆಯಲು ಹೇಗೆ ಸಾಧ್ಯವಾಯಿತು ಎಂಬುದರ ತನಿಖೆಗಳ ಬಗ್ಗೆ ಏನೂ ತಿಳಿಸದಿರುವುದು, ಮತ್ತು ಈಗ ಈ ಹನುಮತರೆಂಬ ವರ್ಣನೆ 'ರಾಜದ್ರೋಹ'ದ ಈಗ ಅವರ ಪರಿವಾರವೇ ಪರಿಷ್ಕರಿಸಿರುವ ಕೇಸರೀ ಅಳತೆಗೋಲುಗಳ ಪ್ರಕಾರ 'ರಾಜದ್ರೋಹ'ದ ಅಡಿಗೆ ಬರುವುದಿಲ್ಲವೇ ಎಂಬ ಪ್ರಶ್ನೆಯನ್ನೂ ಕೇಳಲಾಗುತ್ತಿದೆ.



ಎಪ್ರಿಲ್– ಆಗಸ್ಟ್‌ನಲ್ಲಿ ದಶಕದಲ್ಲೇ ಅತ್ಯಂತ ಕೆಳಮಟ್ಟದ ಕೈಗಾರಿಕಾ ಬೆಳವಣಿಗೆ!

ದೇಶದ ಆರ್ಥಿಕ 'ಒಳ್ಳೆಯ ದಿನ'ಗಳ ರೂವಾರಿಯ ನೇತೃತ್ವದಲ್ಲಿ ಸಮೃದ್ಧಿಯತ್ತ ಸಾಗುತ್ತಿದೆ ಎಂಬ ಪ್ರಚಾರದ ನಡುವೆಯೇ ಈ ಸುದ್ದಿ ಬಂದಿದೆ. ಇದನ್ನು ಹೇಳಿರುವವರು ಪ್ರತಿಪಕ್ಷಗಳಲ್ಲ, ಸರಕಾರವೇ ಪ್ರಕಟಿಸಿಲುವ ಅಂಕಿ–ಅಂಶಗಳು.

ಈ ಹಣಕಾಸು ವರ್ಷದ ಮೊದಲ ಐದು ತಿಂಗಳಲ್ಲಿ ಕೈಗಾರಿಕಾ ಬೆಳವಣಿಗೆ ಕಳೆದ ಒಂದು ದಶಕದಲ್ಲೇ ಅತಿ ಕಡಿಮೆ ಎಂದು ಇತ್ತೀಚೆಗೆ ಪ್ರಕಟವಾದ ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ(ಐಐಪಿ) ಹೇಳುತ್ತದೆ.

ಎಪ್ರಿಲ್–ಆಗಸ್ಟ್2016 ರ ಅವಧಿಯಲ್ಲಿ ಕೈಗಾರಿಕಾ ಬೆಳವಣಿಗೆ ನಕಾರಾತ್ಮಕವಾಗಿದೆ, (–)0.27%. 2007–08ರಿಂದ ಇಷ್ಟಿ ಕಡಿಮೆ ಮಟ್ಟಕ್ಕೆ ಎಂದೂ ಇಳಿದಿರಲಿಲ್ಲ, 2009ರ ಎಪ್ರಿಲ್–ಆಗಸ್ಟ್ ಅವಧಯಲ್ಲಿ ಅಂದರೆ ಲೆಹ್ಮಾನ್ ಬಿಕ್ಕಟ್ಟು ಜಗತ್ತಿನ ಆರ್ತಿಕದೊಂದಿಗೆ ದೇಶದ ಆರ್ಥಿಕವನ್ನೂ ತಟ್ಟಿದ್ದ ಸಮಯದ ಕೈಗಾರಿಕಾ ಬೆಳವಣಿಗೆಗಿಂತಲೂ ಕೆಳಮಟ್ಟದಲ್ಲಿದೆ ಎನ್ನಲಾಗಿದೆ.

ಬೆಳವಣಿಗೆ ಇಲ್ಲ, ಅಂದರೆ ಉದ್ಯೋಗಗಳಿಲ್ಲ ಮತ್ತು ಆರ್ಥಿಕ ಪುನರುಜ್ಜೀವನದ ನಿರೀಕ್ಷೆಯೂ ಇಲ್ಲ, ಯಾವುದೇ ಪ್ರಚಾರ ತಂತ್ರ ನಮ್ಮ ಆರ್ಥಿಕದ ನಿಜಸ್ಥಿತಿಯನ್ನು ಮರಮಾಚದು ಎಂದು ಈ ಬಗ್ಗೆ ಪ್ರತಿಕ್ರಿಯಿಸುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಟಿಪ್ಪಣಿ ಮಾಡಿದ್ದಾರೆ.

ಜೂನ್ 2015ರಿಂದ ಮಧ್ಯಮ ಗಾತ್ರದ ಉದ್ದಿಮೆಗಳು ಕೃಶಗೊಳ್ಳುತ್ತಿವೆ, ಮಾರ್ಚ್2016ರಿಂದ ಸಣ್ಣ ಮತ್ತು ಅತಿ ಸಣ್ಣ ಉದ್ದಿಮೆಗಳು, ಈಗ 80ಶೇ. ಬ್ಯಾಂಕ್ ಸಾಲಗಳನ್ನು ಗಿಟಿಇಟಸಿಕೊಳ್ಳುವ ದೊಡ್ಡ ಉದ್ದಿಮೆಗಳೂ ಕೃಶಗೊಳ್ಳುತ್ತಿವೆ, ಎಂತಹ ಒಳ್ಳೆಯ ದಿನಗಳು ಎಂದು ಅವರು ಹೇಳುತ್ತಾರೆ.

ಬ್ಯಾಂಕುಗಳ ಸುಸ್ತಿಸಾಲಗಳ ಪ್ರಮಾಣದಲ್ಲಿ ಆರು ತಿಂಗಳಲ್ಲಿ 15ಶೇ. ಏರಿಕೆ

ಜೂನ್ 2016ರ ಅಂತ್ಯದ ವೇಳೆಗೆ ಮರುಪಾವತಿಯಾಗದ ಸಆಲಗಳ ಮೊತ್ತ 9.22 ಲಕ್ಷ ಕೋಟಿ ರೂ.ಗಳಾಗಿದೆ. ಡಿಸೆಂಬರ್ 2015ರ ಅಂತ್ಯದಲ್ಲಿ ಇದು 8.06ಲಕ್ಷ ಕೋಟಿ ರೂ. ಇತ್ತು. ಅಂದರೆ ಸರಕಾರ ಸುಮಾರು 1.12 ಲಕ್ ಷಕೋಟಿ ರೂ.ಗಳಷ್ಟು ದೊಡ್ಡ ಕಾರ್ಪೊರೇಟ್‌ಗಳ ಸಾಲಮನ್ನಾ ಮಾಡಿದ ನಂತರವೂ ಅದೀಗ 10ಲಕ್ಷ ಕೋಟಿ ಸಮೀಪಿಸುತ್ತಿದೆ. ವಾಸ್ತವವಾಗಿ 10 ಕೋಟಿಯನ್ನೂ ದಾಟಿದೆ. ಏಕೆಂದರೆ ಮರುಪಾವತಿಯಲ್ಲಿ 60ದಿನಗಳಿಗಿಂತಲೂ ಹೆಚ್ಚಿನ ವಿಳಲಭವಾಗಿರುವ ಸಾಲಗಳ ಮೊತ್ತವೂ 1.93 ಲಕ್ಷ ಕಕೋಟಿ ರೂ. ಎಂದು ಅಂಕಿ–ಅಂಶಗಳು ಹೇಳುತ್ತವೆ. ಇವೂ 'ಕೆಟ್ಟ ಸಾಲ'ಗಳಗುವ ಸಂಭವವೇ ಜಾಸ್ತಿ.


ಸಾಲ ತೀರಿಸಲು ಮತ್ತೆ ಸಾಲ, ಅಭಿವೃದ್ಧಿಯ ಕನಸೆಲ್ಲಿ?

ಇದೀಗ ಇಡೀ ದೇಶದ ಪರಿಸ್ಥಿತಿ. ದೇಶದ ಆಂತರಿಕ ಮತ್ತು ಬಾಹ್ಯ ಸಾಲಗಳ ಮೊತ್ತ ಈ ಗ57,75,685 ಕೋಟಿ ರೂ.ಗಳು ಎಂದು ವರದಿಯಾಗಿದೆ. ಇದು ದೇಶದ ಜಿಡಿಪಿಯ 46ಶೇ. ಈಗ ಈ ಸಾಲಗಳ ಮರುಪಾವತಿಗಾಗಿಯೇ ದೇಶ ಸಾಲ ಮಾಡಬೇಕಾದಂತಹ ಸಾಲದ ಬಲೆಗೆ ಸಿಲುಕುತ್ತಿದೆ ಎಂದು ಪರಿಣಿತರು ಎಚ್ಚರಿಸುತ್ತಿದ್ದಾರೆ. ದೀರ್ಘಾವಧಿ ಸಆಲಗಳ 77ಶೇ.ವನ್ನು ಅದರ ಹಿಂದಿನ ಸಾಲದ ಬಡ್ಡಿ ಮತ್ತು ಮರುಪಾವತಿಗಾಗಿ ಹೋಗುತ್ತಿದೆಯಂತೆ.

ದಾದ್ರಿಯ ರವಿ ಸಿಸೋಡಿಯಾನ ಸಾವಿನಿಂದ ಜಾಮ್ತಾರದ ಮಿನ್ಹಾಸ್ ಅನ್ಸಾರಿಯ ಸಾವಿನ ವರೆಗೆ....

ಒಂದು ವರ್ಷದ ಹಿಂದೆ ಗೋಮಾಂಸ ತಿಂದಿದ್ದಾರೆ/ಇಟ್ಟಿದ್ದಾರೆ ಎಂಬ ಸುಳ್ಳು ಆಪಾದನೆ ಮೇಲೆ ದಾದ್ರಿಯ ಮಹಮ್ಮದ್ ಅಖ್ಲಾಕ್‌ನನ್ನು ಕೊಚ್ಚಿ ಹಾಕಿದ ಆರೋಪದಲ್ಲಿ ಜೈಲಿನಲ್ಲಿದ್ದ ರವಿನ್ ಸಿಸೋಡಿಯ ಸಾವು ಕಾಯಿಲೆಯಿಂದ ಆಗಿದೆ ಎಂದು ಪೋಲೀಸರು ಹೇಳಿದರೆ, ಅದನ್ನು ಆ ಹಳ್ಳಿಯ ಜನ ಒಪ್ಪುತ್ತಿಲ್ಲ ಎನ್ನಲಾಗಿದೆ. ಆತನ ಹೆಣ ಪೆಟ್ಟಿಗೆಗೆ ತ್ರಿವರ್ಣ ಧ್ವಜ ಸುತ್ತಿ ಆತನನ್ನು ಗೋರಕ್ಷಕ ಹುತಾತ್ಮನಾಗಿಸುವ ಪ್ರಯತ್ನ ನಡೆದಿದೆ. ಅದೇ ವೇಳೆಗೆ ಇದಕ್ಕೆ ಸಂಬಂಧವಿಲ್ಲದ ಅಕ್ಲಾಖ್‌ನ ಸಂಬಂಧಿಗಳನ್ನು ಬಂಧಿಸಬೇಕೆಂಬ ಆಗ್ರಹ ಎದ್ದಿದೆ. ಇವೆಲ್ಲದಕ್ಕೆ ಕೇಂದ್ರ ಸಂಪುಟದ ಮಂತ್ರಿಯ ಪರೋಕ್ಷ ಬೆಂಬಲ ಇದೆ ಎಂದೂ ವರದಿಯಾಗಿದೆ.

ಅದೇ ರೀತಿ ಉತ್ತರಪ್ರದೇಶದ ಬೋಧನ ಗ್ರಾಮದಲ್ಲಿ ರಾಮಲೀಲಾದಲ್ಲಿ ಪಾತ್ರ ವಹಿಸುತ್ತ ಬಂದಿದ್ದ, ಈಗ ಬಾಲಿವುಡ್ ನಟನಾಗಿ ಹೆಸರನ್ನೂ ಗಳಿಸಿರುವ ನವಾಸುದ್ದಿನ್ ಸಿದ್ದಿಕಿಗೆ ಈ ಬಾರಿ ರಾಮಲೀಲಾದಲ್ಲಿ ಪಾತ್ರ ವಹಿಸಲು ಅಲ್ಲಿನ ಶಿವಸೇನಾಅಡ್ಡಿ ಪಡಿಸಿದೆ ಎಂಬ ಸುದ್ದಿ ಬಂದಿದೆ.




ನವರಾತ್ರಿಯ ವೇಳೆಗೆ ಗುಜರಾತಿನಲ್ಲಿ ನಡೆಯುವ ದಾಂಡಿಯಾ ನೃತ್ಯದಲ್ಲಿ ಗೋಮೂತ್ರದಿಂದ ಶುದ್ಧಿಕರಣ ನಡೆಯಿತು ಎಂಬ ಸುದ್ದಿ ಬಂದಿದೆ.

ಉತ್ತರಾಖಂಡದ ಭಾಗೇಶ್ವರ ಜಿಲ್ಲೆಯಲ್ಲಿ ಶಾಲಾ ಶಿಕ್ಷಕನೊಬ್ಬ ಹಿಟ್ಟಿನ ಗಿರಣಿಗೆ ಬಂದು ಅದನ್ನು ಅಶುದ್ಧಗೊಳಿಸಿದನೆಂದು ಕುಡುಗೋಲಿನಿಂದ ದಲಿತ ವ್ಯಕ್ತಿ 35 ವರ್ಷದ ಸೋಹನ್‌ರಾಮ್ ತಲೆಯನ್ನೇ ಕಡಿದ ಘಟನೆ ವರದಿಯಾಗಿದೆ. ಅಲ್ಲಿನ ಮೇಲ್ವರ್ಗದ ಜನರು ಹಿಟ್ಟಿನ ಗಿರಣಿಯನ್ನು ಅವರ ಸಮುದಾಯದವರು ಉಪಯೋಗಿಸಿದ ನಂತರವೇ ಉಪಯೋಗಿಸಬೇಕೆಂದು ಎಚ್ಚರಿಸಿದ್ದಾರೆ ಎಂದು ಹಳ್ಳಿಯ ನಿವಾಸಿಗರು ತಿಳಿಸಿದ್ದಾರಂತೆ.

ಇಬ್ಬರು ದನದ ವ್ಯಾಪಾರಿಗಳ ಮೇಲೆ ಗೋವಧೆಯ ಸುಳ್ಳು ಆರೋಪ ಹೊರಿಸಿ ಸಾರ್ವಜನಿಕವಾಗಿ ಗಲ್ಲಿಗೇರಿಸಿದ ಝಾರ್ಖಂಡ್‌ನಲ್ಲಿ , ಇತ್ತೀಚೆಗೆ ಪೋಲಿಸರು ಆದಿವಾಸಿಗಳ ಮೇಲೆ ಗೋಳೀಬಾರು ಮಾಡಿದರು. ಈ ವಾರ ಅದೇ ರಾಜ್ಯದ ಜಾಮ್ತಾರದಲ್ಲಿ ಗೋಮಾಂಸ ಭಕ್ಷಣೆಯ ಬಗ್ಗೆ ಆಕ್ಷೇಪಾರ್ಹ ವಾಟ್ಸಪ್ ಸಂದೇಶ ಕಳಿಸಿದ್ದನೆಂದು ಪೋಲೀಸರು ಬಂಧಿಸಿದ್ದ 22 ವರ್ಷದ ಮಿನ್ಹಾಸ್ ಅನ್ಸಾರಿಯನ್ನು ನಂತರ ದಾದ್ರಿಯ ಕೊಲೆ ಆರೋಪಿ ರವಿಯಂತೆ ಆಸ್ಪತ್ರೆಗೆ ಸೇರಿಸಬೇಕಾಯಿತು. ಅಲ್ಲಿ ಆತ ಪ್ರಾಣ ಬಿಟ್ಟಿದ್ದಾನೆ. ಆತ ಪೋಲೀಸ್ ಚಿತ್ರಹಿಂಸೆಯಿಂದ ಸತ್ತಿದ್ದಾನೆ ಎಂದು ಆತನ ಕುಟುಂಬದವರು ಹೇಳುತ್ತಿದ್ದಾರೆ.

ಈ ಎಲ್ಲ ಪ್ರಸಂಗಗಳಲ್ಲಿ ಕಾನೂನು ತನ್ನ ಕೆಲಸ ಮಾಡಬಹುದು ಅಥವ ಮಾಡದೇ ಇರಬಹುದು. ಆದರೆ ಇದರ ಹಿಂದಿರುವ ರಾಜಕೀಯ ಮತ್ತು ಸಿದ್ಧಾಂತವನ್ನು ಸೋಲಿಸಬೇಕಾಗಿದೆ ಎಂದು ಈ ಬಗ್ಗೆ ಟಿಪ್ಪಣಿ ಮಾಡುತ್ತ ಸೀತಾರಾಮ್ ಯೆಚೂರಿ ಹೇಳಿದ್ದಾರೆ. ಇವೀಗ ಎರಡೂವರೆ ವರ್ಷಗಳಲ್ಲಿ ದೇಶ ಕಾಣುತ್ತಿರುವ 'ಒಳ್ಳೆಯ ದಿನಗಳು' , ಬೃಂದಾಕಾರಟ್ ಅವರು ಹೇಳಿರುವಂತೆ ಸಂಘ ಪರಿವಾರದ ಪ್ರಯೋಗಶಾಲೆಗಳಲ್ಲಿ ತಯಾರಾದ ವಿಷ ದೇಶದ ಮೂಲೆ–ಮೂಲೆಗಳಿಗೆ ಹರಡುತ್ತಿರುವ ದಿನಗಳು.

2018ರ ಒಳಗೆ ಸಮಸ್ತ ಭಾರತ-ಪಾಕಿಸ್ತಾನ ಗಡಿಯನ್ನು ಸೀಲ್ ಮಾಡಲಾಗುವುದು ಎಂದು ಗೃಹಮಂತ್ರಿಗಳು ಹೇಳಿದ್ದಾರೆ. ಇದರಲ್ಲಿ ಹೊಸತೇನಿಲ್ಲ. ಬಹಳ ವರ್ಷಗಳಿಂದ ಇದು ನಡೆಯುತ್ತಿದೆ, ಇನ್ನು 10ಶೇ. ಬಾಕಿಯಿದ್ದು ಇದು ಇನ್ನೆರಡು ವರ್ಷಗಳಲ್ಲಂತೂ ಮುಗಿಯಲಿಕ್ಕಿಲ್ಲ. ಮುಗಿದರೂ ಈ ಹೇಳಿಕೆಗೇನೂ ಅರ್ಥವಿಲ್ಲ -ಸುದ್ದಿ



ಈಗ ವಲಸೆ–ಬಂಡವಾಳದ ವಿರುದ್ಧದ ಬಂಡಾಯವಾಗಿ



ಕೆ.ಎಂ.ನಾಗರಾಜ್

> ನಿರುದ್ಯೋಗಿಗಳ ಮೀಸಲು ತುಕುಡಿಯೊಂದರಲ್ಲಿ ಜನತೆಯನ್ನು ನೆಲೆಗೊಳಿಸಿ ಅವರು ತಮ್ಮದೇ ಪ್ರಪಂಚದಲ್ಲಿ ಸಿಕ್ಕಿಹಾಕಿಕೊಳ್ಳುವಂತೆ ಮಾಡಿ, ತನಗೆ ಬೇಕಾದ ಸ್ಥಳಗಳಿಗೆ ಒಂದು ನಿಯಂತ್ರಿತ ವಲಸೆಯ ರೂಪದಲ್ಲಿ ಹರಿಯುವಂತೆ ಮಾಡುವುದೇ ಬಂಡವಾಳಶಾಹಿಯ ಗುರಿ. ಇಂತಹ ಜನ ಎಷ್ಟೇ ಕಷ್ಟ ಕಾರ್ಪಣ್ಯಗಳಿದ್ದರೂ ಸುಮ್ಮನೇ ಇರುತ್ತಾರೆ ಎಂಬ ಎಣಿಕೆಯಲ್ಲಿಯೇ ಅದು ಸಾಮ್ರಾಜ್ಯಶಾಹಿ ಯುದ್ಧಗಳನ್ನು ಮೂರನೆಯ ಜಗತ್ತಿನ ಜನತೆಯ ಮೇಲೆ ಹೇರುತ್ತದೆ. ಆದರೆ ಈ ಎಣಿಕೆ ಇನ್ನು ಮುಂದೆ ನೆರವೇರದು ಎಂಬುದನ್ನು ಯೂರೋಪ್ ದೇಶಗಳನ್ನು ಬಾಧಿಸುತ್ತಿರುವ 'ನಿರಾಶ್ರಿತರ ಸಮಸ್ಯೆ' ಸ್ಪಷ್ಟಪಡಿಸುತ್ತದೆ ಎನ್ನುತ್ತಾರೆ **ಪ್ರೊ.ಪ್ರಭಾತ್ ಪಟ್ನಾಯಕ್** 'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆ ಪ್ರಕಟಿಸಿರುವ ಅವರ Migration as Revolt against Capital ಲೇಖನದಲ್ಲಿ. ಅದರ ಭಾವಾನುವಾದ ಇಲ್ಲಿದೆ.

ಸಾಮ್ರಾಜ್ಯಶಾಹಿಗಳ ದೊಡ್ಡಣ್ಣ ಅಮೆರಿಕದ ತಾಳಕ್ಕೆ ತಕ್ಕಂತೆ ಕುಣಿಯಲು ಒಪ್ಪದ ಇರಾಕ್, ಲಿಬ್ಯಾ, ಸಿರಿಯಾ ದೇಶಗಳ ಮೇಲೆ ಸಲ್ಲದ ಕಾರಣಗಳನ್ನು ಮುಂದಿಟ್ಟು ಅಮೆರಿಕಾ ನೇರ ದಾಳಿ ನಡೆಸಿದ್ದೂ ಅಲ್ಲದೆ ಆ ದೇಶಗಳ ಬಂಡುಕೋರರ ಮೂಲಕ ಹತ್ತು–ಹದಿನೈದು ವರ್ಷಗಳಿಂದಲೂ ಎಲ್ಲೆಂದರಲ್ಲಿ ನಡೆಸುತ್ತಿರುವ ಬಾಂಬ್ ದಾಳಿಗಳಿಗೆ ಲಕ್ಷಾಂತರ ಮಂದಿ ಬಲಿಯಾಗಿದ್ದಾರೆ. ಮನೆ ಮಠ ಕಳೆದುಕೊಂಡ ಲಕ್ಷ ಲಕ್ಷಗಟ್ಟಲೆ ನಾಗರಿಕರು ಜೀವ ಉಳಿಸಿಕೊಳ್ಳುವ ಸಲುವಾಗಿ ಯೂರೋಪಿನ ದೇಶಗಳತ್ತ ನುಗ್ಗುತ್ತಿದ್ದಾ–ರೆ. ಹೀಗೆ ಒಳ ನುಗ್ಗುತ್ತಿರುವ ನಿರಾಶ್ರಿತರಿಗೂ ಮತ್ತು ರಕ್ಷಣಾ ಸಿಬ್ಬಂದಿಗೂ ನಡುವೆ ಘರ್ಷಣೆಗಳಾಗುತ್ತಿದ್ದರೂ ಯೂರೋಪಿನ ಕೆಲವು ದೇಶಗಳಲ್ಲಿ ನಿರಾಶ್ರಿತರ ಸಮಸ್ಯೆಯನ್ನು ಮಾನವೀಯ ನೆಲೆಗಟ್ಟಿನಲ್ಲಿ ನೋಡಲಾಗುತ್ತಿದೆ. ಅವರ ಕಷ್ಟ ಕೋಟಲೆಗಳ ಅಗಾಧತೆಯು ಮಾನವಕೋಟಿಯ ಗಮನ ಸೆಳೆದಿದೆ. ಆದರೆ, ಈ ಸಮಸ್ಯೆಯ ಇನ್ನೊಂದು ಆಯಾಮವು ಗಮನಕ್ಕೆ ಬಾರದೆ ಉಳಿದಿದೆ. ಅದೇನೆಂದರೆ, ಜನರ ಸ್ಥಳಾಂತರದ(ವಲಸೆ) ಸಮಸ್ಯೆಯು, ಆಧುನಿಕ ಚರಿತ್ರೆಯಲ್ಲೇ ಮೊಟ್ಟಮೊದಲಿಗೆ, ಬಂಡವಾಳದ ಗುತ್ತೇದಾರಿ ಹಿಡಿತದಿಂದ ಜಾರುತ್ತಿದೆ.

ಇಲ್ಲಿಯ ವರೆಗೂ, ಜನರು ವಲಸೆ ಹೋಗುವುದನ್ನು ಬಂಡವಾಳವು ತನ್ನ ಅವಶ್ಯಕತೆಗಳಿಗೆ ತಕ್ಕಂತೆ ನಿರ್ದೇಶಿಸುತ್ತಿತ್ತು. ಬಂಡವಾಳವು ಬಯಸಿದ ಸ್ಥಳಗಳಿಗಷ್ಟೇ ವಲಸೆ ಹೋಗುತ್ತಿದ್ದರು. ಈಗ, ಚರಿತ್ರೆಯಲ್ಲೇ ಮೊಟ್ಟ ಮೊದಲಿಗೆ, ಬಂಡವಾಳದ ಅಪೇಕ್ಷೆಯನ್ನು ಧಿಕ್ಕರಿಸಿ, ತಮಗೆ ಬೇಕೆನಿಸಿದ ಸ್ಥಳಗಳಿಗೆ ಜನ ನೆಲೆಸಲು ಹೋಗುತ್ತಿದ್ದಾರೆ. ನಿರ್ಭಾಗ್ಯರೂ ಮತ್ತು ದೀನರೂ ಆಗಿರುವ ನಿರಾಶ್ರಿತರು ವಲಸೆ ಹೋಗಲು ತೀರ್ಮಾನಿಸಿರುವ ಸ್ಥಳದಲ್ಲಿ ಮುಂದೆ ತಮಗೆ ಏನು ಗತಿ ಕಾದಿದೆ ಎಂಬುದರ ಪರಿವೆಯೇ ಇಲ್ಲದೆ ಹೋಗುತ್ತಿರುವುದು, ಅವರು ಬಂಡವಾಳದ ಯಜಮಾನಿಕೆಯನ್ನು ಧಿಕ್ಕರಿಸಿದ ಸೂಚನೆಯಾಗಿದೆ.

ವಲಸೆಯ ಮೂರುದೊಡ್ಡ ಅಲೆಗಳು

ಇಲ್ಲಿಯ ವರೆಗೂ ಯಾರು ಎಲ್ಲಿರುತ್ತಾರೆ ಮತ್ತು ಅವರು ಎಂತಹ ಪರಿಸ್ಥಿತಿಯಲ್ಲಿ ಇರುತ್ತಾರೆ ಎಂಬುದನ್ನು ಬಂಡವಾಳವು ನಿರ್ಧರಿಸುತ್ತಿತ್ತು ಎಂದು ಹೇಳಿದರೆ ಮೇಲ್ನೋಟದಲ್ಲಿ ಯಾರಿಗಾದರೂ ಅದೊಂದು ತೀರ ಅತಿಯಾದ ಹೇಳಿಕೆ ಎನಿಸುತ್ತಿತ್ತು. ಆದರೆ ಅದು ನಿಜ. ಆಧುನಿಕ ಕಾಲದಲ್ಲಿ, ಬಂಡವಾಳದ ಅಗತ್ಯಕ್ಕೆ ಅನುಗುಣವಾಗಿಯೇ, ವಲಸೆಯ ಮೂರುದೊಡ್ಡ ಅಲೆಗಳು ಉಂಟಾಗಿದ್ದವು ಎಂಬುದನ್ನು ಗುರುತಿಸಬಹುದು.

ಮೊದಲನೆಯದು, ಬಂಡವಾಳದ ಅವಶ್ಯಕತೆಯನ್ನು ಪೂರೈಸುವ ಸಲುವಾಗಿ, ಅಮೆರಿಕದ ಗಣಿಗಳು ಮತ್ತು ಪ್ಲಾಂಟೇಷನ್‌ಗಳಲ್ಲಿ ಗುಲಾಮರಾಗಿ ದುಡಿಯಲು ಆಫ್ರಿಕಾದಿಂದ ಲಕ್ಷ ಲಕ್ಷ ಮಂದಿ ಕರಿಯರನ್ನು ಸೆರೆ ಹಿಡಿದು ಅಲ್ಲಿಗೆ ಸಾಗಿಸಲಾಗಿತ್ತು. ಗುಲಾಮರ ಮಾರಾಟವಾಗುತ್ತಿತ್ತು ಎಂಬುದು ಬಹಳ ಮಂದಿಗೆ ತಿಳಿದಿರುವ ವಿಷಯವೇ.

ಗುಲಾಮರ ಮಾರಾಟವು ಒಂದು ತುದಿ ಮುಟ್ಟಿ ಕೊನೆಗೊಂಡ ನಂತರ ಹೊಸದೊಂದು ರೀತಿಯ ವಲಸೆ ಆರಂಭವಾಯಿತು. ಹತ್ತೊಂಭತ್ತನೆಯ ಮತ್ತು ಇಪ್ಪತ್ತನೆಯ ಶತಮಾನಗಳ ಕಾಲದುದ್ದಕ್ಕೂ ಬಂಡವಾಳವು ಮೂರನೆಯ ಜಗತ್ತಿನ ದೇಶಗಳಲ್ಲಿ ಮತ್ತು ಭಾರತದಂತಹ ಉಷ್ಣ ವಲಯದ ದೇಶಗಳಲ್ಲಿ ಹಾಗೂ ಅರೆ–ವಸಾಹತು ದೇಶಗಳಲ್ಲಿ ಮತ್ತು ಚೀನಾದಂತಹ ಅಧೀನ ರಾಷ್ಟ್ರಗಳಲ್ಲಿ ಕೈಗಾರಿಕೆಗಳನ್ನು ನಾಶ ಮಾಡುವ ಒಂದು ಪ್ರಕ್ರಿಯೆಯನ್ನು ಹೇರಿತ್ತು. ಅದೇ ಸಮಯದಲ್ಲಿ, ಬಂಡವಾಳವು ಆ ದೇಶಗಳಲ್ಲಿ ಉಂಟಾಗುತ್ತಿದ್ದ ಹೆಚ್ಚುವರಿ ಮೌಲ್ಯ ಅಂದರೆ, ಲಾಭವನ್ನೂ ಹೀರುತ್ತಿತ್ತು. ಸಾಮ್ರಾಜ್ಯಶಾಹಿಗಳ ನೇರ ಆಡಳಿತದ ಪ್ರದೇಶಗಳಲ್ಲಿ, ಅಲ್ಲಿನ ಜನರಿಗೆ ಯಾವುದೇ ರೀತಿಯ ಪರಿಹಾರ ಒದಗಿಸದೆ ಅಥವಾ ಅವರಿಗೆ ಅಗತ್ಯವಿರುವ ಸರಕುಗಳನ್ನು ಪ್ರತಿಫಲ ರೂಪದಲ್ಲಿ ಒದಗಿಸದೆ, ಅಲ್ಲಿ ಸಂಗ್ರಹವಾಗುತ್ತಿದ್ದ ತೆರಿಗೆ ಆದಾಯವನ್ನು ಕಬಳಿಸುವುದರಿಂದ ಹಿಡಿದು, ಅಲ್ಲಿನ ಉತ್ಪನ್ನಗಳಿಗೆ ಯೋಗ್ಯ ವಿನಿಮಯ ಬೆಲೆ ನಿಗದಿಪಡಿಸದೆ ಅತಿಕಡಿಮೆ ಬೆಲೆಯಲ್ಲಿ ಅವುಗಳನ್ನು ಆಮದು ಮಾಡಿಕೊಳ್ಳುವುದು ಮತ್ತು ಏಕಸ್ವಾಮ್ಯ ವಸ್ತುಗಳ ವ್ಯಾಪಾರದಲ್ಲಿ ಹೇರಳ ಲಾಭ ಪಡೆಯುವ ಮೂಲಕ ಬಂಡವಾಳವು ಈ ದೇಶಗಳನ್ನು ವಿಪರೀತವಾಗಿ ಶೋಷಣೆ ಮಾಡಿದೆ. ಹಾಗಾಗಿ, ಮೂರನೇ ಜಗತ್ತಿನ ಜನತೆಯ ಸ್ಥಿತಿ–ಗತಿಗಳು ಉತ್ತಮಗೊಳ್ಳಲಾಗದೆ ಅವರು ತಮ್ಮದೇ ಜಗತ್ತಿನಲ್ಲಿ ಒದ್ದಾಡುತ್ತಿದ್ದಾರೆ.

ವಲಸೆಯ ಎರಡನೆಯ ಅಲೆ

ಹತ್ತೊಂಭತ್ತನೇ ಶತಮಾನದಲ್ಲಿ, ಬಂಡವಾಳದ ಅಣತಿಯಂತೆ ಎರಡು ತೊರೆಗಳಾಗಿ ವಲಸೆ ಹರಿಯಿತು. ಒಂದು, ಉಷ್ಣವಲಯದ ಒಂದು ಪ್ರದೇಶದಿಂದ ಉಷ್ಣವಲಯದ ಮತ್ತೊಂದು ಪ್ರದೇಶಕ್ಕೂ, ಸಮಶೀತೋಷ್ಣ ವಲಯದ ಒಂದು ಪ್ರದೇಶದಿಂದ, ನಿರ್ದಿಷ್ಟವಾಗಿ, ಯೂರೋಪಿನಿಂದ ಸಮಶೀತೋಷ್ಣ ವಲಯದ– ಬಿಳಿಯರು ನೆಲೆಸಿದ್ದ ಅಮೆರಿಕಾ, ಕೆನಡಾ, ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್ ದೇಶಗಳಿಗೂ ವಲಸೆಗಳಾದವು. ಉಷ್ಣವಲಯದ ದೇಶಗಳ ವಲಸಿಗರಿಗೆ ಸಮಶೀತೋಷ್ಣ ವಲಯದ ದೇಶಗಳ ಪ್ರವೇಶ ಸುಲಭವಾಗಿರಲಿಲ್ಲ(ಈ ಹೊತ್ತಿಗೂ ಈ ಪರಿಸ್ಥಿತಿ ಬದಲಾಗಿಲ್ಲ). ಭಾರತ ಮತ್ತು ಚೀನಾ ದೇಶಗಳ ವಲಸಿಗರನ್ನು ಕೂಲಿಗಳಾಗಿಯೋ ಅಥವಾಕರಾರಿಗೆ ಒಳಪಟ್ಟ ಕಾರ್ಮಿಕರಾಗಿಯೋ ಉಷ್ಣವಲಯದ ದೇಶಗಳಾದ ವೆಸ್ಟ್‌ಇಂಡೀಸ್, ಫಿಜಿ, ಲ್ಯಾಟಿನ್ ಅಮೆರಿಕಾ ಮತ್ತು ಕ್ಯಾಲಿಫೋರ್ನಿಯಾದ ಗಣಿಗಳಲ್ಲಿ ಅಥವಾ ಅಲ್ಲಿನ ಪ್ಲಾಂಟೇಷನ್‌ಗಳಲ್ಲಿ ದುಡಿಯಲು ಸಾಗಿಸಲಾಗುತ್ತಿತ್ತು.

ಕೈಗಾರಿಕಾ ಬಂಡವಾಳವು ಯೂರೋಪಿಯನ್ ದೇಶಗಳಿಂದ ಉಷ್ಣವಲಯದ ಕೆಲವು ಪ್ರದೇಶಗಳಿಗೆ ಹೊಸದಾಗಿ ಹರಡಿದ್ದರಿಂದ, ಆ ಪ್ರದೇಶಗಳಿಗೆ ಅದೇ ಉಷ್ಣವಲಯದ ಇನ್ನೊಂದು ಪ್ರದೇಶದಿಂದ ವಲಸೆ ಉಂಟಾಯಿತು. ಇದೊಂದು ಉನ್ನತ ವರಮಾನದ ವಲಸೆ ಎನ್ನಬಹುದು. ಏಕೆಂದರೆ, ವಲಸೆ ಬಂದವರು ಹೋಲಿಕೆಯ ದೃಷ್ಟಿಯಲ್ಲಿ ಉತ್ತಮ ವರಮಾನದ ಪ್ರದೇಶಗಳಿಂದ ಬಂದವರಾಗಿದ್ದರು. ಈ ವಲಸೆಗೆ ಹೋಲಿಸಿದರೆ, ಸಮಶೀತೋಷ್ಣ ವಲಯದ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋದದ್ದು ಕಡಿಮೆ ವರಮಾನದ ವಲಸೆ ಹಾಗೂ ಈ ವಲಸೆಯು ಕೈಗಾರಿಕಾ ಬಂಡವಾಳಶಾಹಿಗೆ ಸಂಬಂಧಿಸಿರಲಿಲ್ಲ.

ವಲಸೆಗಳಲ್ಲಿ ವರಮಾನದ ವ್ಯತ್ಯಾಸ

ಈ ಎರಡು ವಲಸೆಗಳಲ್ಲಿ ಒಂದು ವ್ಯತ್ಯಾಸವಿತ್ತು. ಉಷ್ಣವಲಯದ ಪ್ರದೇಶಗಳಲ್ಲಿ ಉನ್ನತ ವರಮಾನದ ವಲಸೆಯಾದರೆ, ಸಮಶೀತೋಷ್ಣ ವಲಯದ ವಲಸೆಯು ಕಡಿಮೆ ವರಮಾನದ ವಲಸೆಯಾಗಿತ್ತು. ಭಾರತೀಯ ಮತ್ತು ಚೀನಾದ ವಲಸೆಗಾರರಿಗೆ ಹೋಲಿಸಿದರೆ, ಯೂರೋಪಿಯನ್ ವಲಸೆಗಾರರ ಉತ್ಪಾದನಾ ಶಕ್ತಿ–ಸಾಮರ್ಥ್ಯಗಳು ಉನ್ನತ ಮಟ್ಟದಲ್ಲಿದ್ದವು ಎಂದು ಹೇಳಲಾಗುತ್ತದೆಯಾದರೂ ಅದು ಸರಿಯಲ್ಲ. ಏಕೆ–ಂದರೆ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ, ಕಾರ್ಮಿಕರ ವರಮಾನವು ಅವರ ಉತ್ಪಾದನಾ ಶಕ್ತಿ–ಸಾಮರ್ಥ್ಯಗಳ ಮೇಲೆ ನಿಂತಿಲ್ಲ; ಬದಲಾಗಿ, ಅಲ್ಲಿರುವ ಉದ್ಯೋಗಿಗಳ ಸಂಖ್ಯೆಗೆ ಹೋಲಿಸಿದರೆ ನಿರುದ್ಯೋಗಿಗಳ ಪಡೆ–ಯು ಎಷ್ಟು ದೊಡ್ಡದಿದೆ ಎಂಬುದೇ ಮುಖ್ಯವಾದ ಅಂಶವಾಗುತ್ತದೆ. ಅಲ್ಲದೆ, ಕಾರ್ಮಿಕರ ಉತ್ಪಾದನಾ ಶಕ್ತಿ–ಸಾಮರ್ಥ್ಯಗಳು ವೇಗವಾಗಿ ವೃದ್ಧಿಯಾದಾಗಲೂ ಅವರ ಸಂಬಳವು ಕೇವಲ ಅವರು ಬದುಕಿರಲು ಅಗತ್ಯವಾದಷ್ಟನ್ನು ಒದಗಿಸುವ ಮಟ್ಟದಲ್ಲೇ ಇರುತ್ತದೆ. ಅದಕ್ಕಿಂತಲೂ ಮುಖ್ಯವಾಗಿ ಇಲ್ಲಿ ಗಣನೆಗೆ ಬರುವ ಅಂಶವೆಂದರೆ, ಬಂಡವಾಳಶಾಹಿ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಉತ್ಪಾದನಾ ಶಕ್ತಿ–ಸಾಮರ್ಥ್ಯಗಳ ಬಗ್ಗೆ ಅಲ್ಲ; ಅದರ ಹೊರಗಿರುವವರದ್ದು; ಏಕೆಂದರೆ, ವಲಸೆ ಹೋಗುವವರು ಈ ಮಂದಿಯೇ. ಆದ್ದರಿಂದ, ಈ ಮಂದಿಯ ಉತ್ಪಾದನಾ ಶಕ್ತಿ–ಸಾಮರ್ಥ್ಯಗಳು ಉಷ್ಣವಲಯದ ಪ್ರದೇಶಗಳಲ್ಲಿ ಅವರಂತೆಯೇ ಇರುವವರಿಗಿಂತಲೂ ಹೆಚ್ಚಿನದ್ದೆಂದು ನಂಬಲು ಕಾರಣಗಳಿಲ್ಲ.

ಈ ಎರಡು ವಲಸೆಗಳಲ್ಲಿ ವರಮಾನದ ವ್ಯತ್ಯಾಸವಿತ್ತು. ಅದಕ್ಕೆಕಾರಣ ಬೇರೆಯೇ ಇತ್ತು. ಯೂರೋಪಿಯನ್ ವಲಸಿಗರು ಉಷ್ಣವಲಯದ ಪ್ರದೇಶಗಳಿಗೆ ಬಂದಾಗ ಅಲ್ಲಿದ್ದ ಮೂಲನಿವಾಸಿಗಳನ್ನು ಎತ್ತಂಗಡಿ ಮಾಡಿಸಿ ಅವರ ಜಮೀನು ವಶಪಡಿಸಿಕೊಂಡು ಸಾಗುವಳಿಯಲ್ಲಿ ತೊಡಗುತ್ತಿದ್ದರು. ಹಾಗಾಗಿ, ವಲಸೆ ಬಂದವರಿಗೆ ವರಮಾನ ಹೆಚ್ಚಾಗುತ್ತಿತ್ತು ಮತ್ತು ಅವರು ತೊರೆದ ಉದ್ಯೋಗಗಳಿಗೆ ಭರ್ತಿಯಾದವರಿಗೆ ವೇತನವೂ ಕಡಿಮೆಯಾಗುತ್ತಿರಲಿಲ್ಲ. ಇದನ್ನು 'ಮೀಸಲು ವೇತನ' (reservation wage) ಎಂದು ಕರೆ–ಯುತ್ತಾರೆ. ಉಷ್ಣವಲಯದ ಪ್ರದೇಶಗಳಿಗೆ ವಲಸೆ ಹೋಗಿ ಅಲ್ಲಿನ ಮೂಲನಿವಾಸಿಗಳ ಜಮೀನು ವಶಪಡಿಸಿಕೊಂಡು ಅಲ್ಲಿಯೇ ನೆಲಸಿದರೆ ಹೆಚ್ಚಿನ ವರಮಾನ ಗಳಿಸಬಹುದೆಂಬ ಆಶಾದಾಯಕ ಪರಿಸ್ಥಿತಿ ಇದ್ದುದರಿಂದ ಹಿಡಿ ಕೂಳಿಗಾಗಿ ಕೆಲಸ ಮಾಡಲು ಯೂರೋಪಿನಲ್ಲಿ ಯಾರೂ ಸಿದ್ಧರಿರಲಿಲ್ಲ. ಆದ್ದ–ರಿಂದ, ಯೂರೋಪಿನಲ್ಲಿ ನಿಜ ವೇತನಗಳು ಉನ್ನತ ಮಟ್ಟದಲ್ಲಿ ಉಳಿಯುವಂತಾಯಿತು.

ಈ ವಲಸೆಗೆ ಎದುರಾಗಿ, ಉಷ್ಣವಲಯದ ಒಂದು ಪ್ರದೇಶದಿಂದ ಅದೇ ವಲಯದ ಇನ್ನೊಂದು ಪ್ರದೇಶಕ್ಕೆ ಹೋದವರದು ಕಡಿಮೆ ವೇತನದ ವಲಸೆಯಾಗಿತ್ತು. ಏಕೆಂದರೆ, ಕೈಗಾರಿಕೆಗಳು ಹಾಳಾಗಿದ್ದ ಮತ್ತು ಸಂಪನ್ಮೂಲಗಳು ಕೊಳ್ಳೆಯಾಗಿದ್ದ ದೇಶಗಳಿಂದ ಹೋದ ಈ ವಲಸಿಗರಿಗೆ ಸ್ಥಳೀಯರಿಂದ ಜಮೀನು ವಶಪಡಿಸಿಕೊಂಡು ಸಾಗುವಳಿ ಮಾಡುವ ತಾಕತ್ತಿರಲಿಲ್ಲ.

ಹತ್ತೊಂಭತ್ತನೇ ಶತಮಾನದಲ್ಲಿ ಎರಡು ತೊರೆಗಳಾಗಿ ಹರಿದ ಈ ವಲಸೆಗಳಲ್ಲಿ – ಪ್ರತಿಯೊಂದರಲ್ಲಿಯೂ ಸುಮಾರು ಐದುಕೋಟಿ ಮಂದಿ ಇದ್ದರೆಂದು ವೆಸ್ಟ್‌ಇಂಡೀಸ್ ಮೂಲದ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಆರ್ಥರ್ ಲೆವಿಸ್ ಅಂದಾಜು ಮಾಡಿದ್ದಾರೆ. ಯೂರೋಪಿನಿಂದ ಹೊಸದೊಂದು ಜಗತ್ತಿಗೆ ಕೈಗಾರಿಕಾ ಬಂಡವಾಳವು ಹರಡುತ್ತಿದ್ದ ಅವಧಿಯಲ್ಲಿ, ವಲಸೆ ಹೋದವರ ಸಂಖ್ಯೆಯು, 1815 ಮತ್ತು 1910ರ ನಡುವೆ ಇಂಗ್ಲೆಂಡಿನಲ್ಲಿ ಪ್ರತಿ ವರ್ಷವೂ ಹೆಚ್ಚಿದ ಒಟ್ಟು ಸಂಖ್ಯೆಯ ಅರ್ಧದಷ್ಟು ಇತ್ತೆಂದು ಉತ್ಸಾ ಪಟ್ನಾಯಕ್ ಅಂದಾಜು ಮಾಡಿದ್ದಾರೆ. ಈ ಅಂದಾಜುಗಳನ್ನು ಒಪ್ಪದಿದ್ದರೂ ಸಹ ವಲಸಿಗರ ಸಂಖ್ಯೆ ಬಹಳ ದೊಡ್ಡದಾಗಿತ್ತು ಎನ್ನುವುದರಲ್ಲಿ ಅನುಮಾನವಿಲ್ಲ.

ವಲಸೆಯ ಮೂರನೇ ಅಲೆ

ಎರಡನೇ ಮಹಾಯುದ್ಧ ಮುಗಿದ ನಂತರದ ಅವಧಿಯಲ್ಲಿ ವಲಸೆಯ ಮೂರನೇ ದೊಡ್ಡ ತೊರೆ ಹರಿದಿದೆ. ಐವತ್ತರ ದಶಕದ ಆದಿಭಾಗದಿಂದ ಹಿಡಿದು ಎಪ್ಪತ್ತರ ದಶಕದ ಆದಿಭಾಗದ ಅವಧಿಯನ್ನು **'ಬಂಡವಾಳಶಾಹಿಯ ಸುವರ್ಣಯುಗ'** ಎಂದು ಕರೆಯುವುದುಂಟು. ಏಕೆಂದರೆ, ಯುದ್ಧಾನಂತರದಲ್ಲಿ ಪುನರ್ನಿರ್ಮಾಣ ಚಟುವಟಿಕೆಗಳು ಉತ್ತುಂಗದಲ್ಲಿದ್ದವು ಮತ್ತು ಬೇಡಿಕೆಯ ನಿರ್ವಹಣೆಯಲ್ಲಿ ಪ್ರಭುತ್ವವು ಮಧ್ಯಸ್ಥಿಕೆ ವಹಿಸಿತ್ತು. ಹಾಗಾಗಿ, ಯೂರೋಪಿನ ದೇಶಗಳಲ್ಲಿ ಜಿಡಿಪಿಯ ಬೆಳವಣಿಗೆ ದರ ಎತ್ತರದಲ್ಲಿತ್ತು. ಕಾರ್ಮಿಕರ ಉತ್ಪಾದಕತೆಯ ದರವೂ ಹೆಚ್ಚಿನ ಮಟ್ಟದಲ್ಲಿದ್ದರೂ ಅದು ಜಿಡಿಪಿಯ ಬೆಳವಣಿಗೆಯ ದರದಷ್ಟು ಎತ್ತರದಲ್ಲಿರಲಿಲ್ಲ. ಅದರ ಅರ್ಥ ಶ್ರಮಶಕ್ತಿಗೆ ಬೇಡಿಕೆ ಹೆಚ್ಚಿತು ಎಂದಾಗುತ್ತದೆ. ಆದರೆ, ಯೂರೋಪಿನ ದೇಶಗಳಲ್ಲಿ ಜನಸಂಖ್ಯೆ ಏರುತ್ತಿರಲಿಲ್ಲ. ಆದ್ದರಿಂದ, ಶ್ರಮಶಕ್ತಿಯ ಕೊರತೆಯನ್ನು ನಿವಾರಿಸಿಕೊಳ್ಳುವ ಸಲುವಾಗಿ, ಉಷ್ಣವಲಯದ ಪ್ರದೇಶಗಳಿಂದ ಕಾರ್ಮಿಕರನ್ನು ಆಮದು ಮಾಡಿಕೊಳ್ಳಲಾಯಿತು. ಆಗಲೂ ಉಷ್ಣವಲಯದವರಿಗೆ ವಲಸೆಯು ಮುಕ್ತವಾಗಿರಲಿಲ್ಲ. ಒಂದು ನಿರ್ದಿಷ್ಟ ಸಂಖ್ಯೆಯ ವಲಸೆಗೆ ಅನುಮತಿ ಕೊಡಲಾಗಿತ್ತು. ಈ ವಲಸೆಯಲ್ಲಿದ್ದ ಟರ್ಕಿಯವರು ಜರ್ಮನಿಗೆ, ಆಲ್ಜೀರಿಯಾ ಮತ್ತು ಫ್ರೆಂಚರ ಹಿಂದಿನ ಕಾಲೊನಿಗೆ ಸೇರಿದವರು ಫ್ರಾನ್ಸಿಗೆ ಮತ್ತು ದಕ್ಷಿಣ ಏಷಿಯಾದವರು ಮತ್ತು ವೆಸ್ಟ್‌ಇಂಡೀಸ್‌ನವರು ಇಂಗ್ಲೆಂಡಿಗೆ ಹೋದರು. ಅವರು ಕಡಿಮೆ ವೇತನದ ಕೆಲಸಗಳಿಗೆ ಸೇರಿಕೊಂಡರು. ಆ ಕೆಲಸ ಮಾಡುತ್ತಿದ್ದವರು ಮೇಲಿನ ಕೆಲಸಗಳಿಗೆ ಭಡ್ತಿ ಪಡೆದರು. ಹಾಗಾಗಿ, ಕೆಳವರ್ಗದ ಕಾರ್ಮಿಕರ ಸಂಖ್ಯೆಯಲ್ಲಿ ಒಂದು ಬೃಹತ್ ಬೆಳವಣಿಗೆಯನ್ನು ಯುದ್ಧಾನಂತರದ ಬಂಡವಾಳಶಾಹಿಯು ಕಂಡಿತು.

ಯುದ್ಧಾನಂತರದ ಆರ್ಥಿಕ ಅಭಿವೃದ್ಧಿ ಅಥವಾ ಸುವರ್ಣಯುಗ ಕುಸಿಯುತ್ತಾ ಹೋದಂತೆಯೇ ವಲಸೆ ಕಾರ್ಮಿಕರ ಮತ್ತು ಅವರ ಸಂತತಿಯ ಪರಿಸ್ಥಿತಿ ಹದಗೆಡುತ್ತಾ ಹೋಗುತ್ತಿದ್ದು ಅವರು ಅರೆ ಉದ್ಯೋಗಿಗಳಾಗಿಯೋ ಅಥವಾ ನಿರುದ್ಯೋಗಿಗಳಾಗಿಯೋ ಉಳಿದರು. ಪ್ರಚಲಿತ ಶತಮಾನದಲ್ಲಿ ಬಂಡಶಾಹಿ ಬಿಕ್ಕಟ್ಟು ತಲೆಎತ್ತಿದ ನಂತರ ಅವರ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ.

ಬರಿಗೈಯಾಗುತ್ತಿರುವ ಜನತೆ

ಈವರೆಗೆ ಹೇಳಿದ ವಿಷಯಗಳ ತಿರುಳು ಇಷ್ಟೇ: ಬಂಡವಾಳವು ಯುದ್ಧಗಳಿಗೆ ಕುಮ್ಮಕ್ಕು ಕೊಡುವುದರ ಹೊರತಾಗಿಯೂ, ಅದರ ಸಹಜ ಕಾರ್ಯವಿಧಾನವೇ ಜನತೆಯನ್ನು ದರಿದ್ರರನ್ನಾಗಿಸುತ್ತದೆ. ನಿರುದ್ಯೋಗಿಗಳ ಮೀಸಲು ತುಕುಡಿಯೊಂದರಲ್ಲಿ ಜನತೆಯನ್ನು ನೆಲೆಗೊಳಿಸಿ ಅವರು ತಮ್ಮದೇ ಪ್ರಪಂಚದಲ್ಲಿ ಸಿಕ್ಕಿಹಾಕಿಕೊಳ್ಳುವಂತೆ ಮಾಡಿ, ಜಾಗರೂಕತೆಯಿಂದ ಅದನ್ನು ತನ್ನ ಅವಶ್ಯಕತೆಗಳಿಗೆ ತಕ್ಕಂತೆ ತನಗೆ ಬೇಕಾದ ಸ್ಥಳಗಳಿಗೆ ಒಂದು ನಿಯಂತ್ರಿತ ವಲಸೆಯ ರೂಪದಲ್ಲಿ ಹರಿಯುವಂತೆ ಮಾಡುವುದೇ ಅದರ ಗುರಿ. ಅದರ ಎಣಿಕೆ ಏನೆಂದರೆ, ಜನರು ತಮ್ಮದೇ ಪ್ರಪಂಚದಲ್ಲಿ ಸಿಕ್ಕಿಹಾಕಿಕೊಂಡಿರುವರು; ಎಷ್ಟೇ ಕಷ್ಟ ಕಾರ್ಪಣ್ಯಗಳಿದ್ದರೂ ಸ್ವಲ್ಪವೂ ಗೊಣಗದೆ ಜನರು ಸುಮ್ಮನೇ ಇರುತ್ತಾರೆ. ಇದೇ ಎಣಿಕೆಯಲ್ಲಿಯೇ ಅದು ಸಾಮ್ರಾಜ್ಯಶಾಹಿ ಯುದ್ಧಗಳನ್ನು ಮೂರನೆಯ ಜಗತ್ತಿನ ಜನತೆಯ ಮೇಲೆ ಹೇರುತ್ತದೆ. ಈ ಎಣಿಕೆ ನೆರವೇರುವಂತೆ ಬಯಸುವುದೇ ಬಂಡವಾಳಶಾಹಿಯ ಕಾರ್ಯವಿಧಾನ.

ಈ ಎಣಿಕೆ ಇನ್ನು ಮುಂದೆ ನೇರವೇರುವುದಿಲ್ಲ ಎಂಬುದು ಯೂರೋಪ್ ದೇಶಗಳನ್ನು ಭಾಧಿಸುತ್ತಿರುವ 'ನಿರಾಶ್ರಿತರ ಸಮಸ್ಯೆ' ಸ್ಪಷ್ಟಪಡಿಸುತ್ತದೆ. ಬಾಗಿಲ ಬಳಿ ನಿಂತಿರುವ ನಿರಾಶ್ರಿತರಿಗೆ ಏನೂ ಉತ್ತರ ಹೇಳಲು ಬಂಡವಾಳಶಾಹಿಗೆ ಆಗುತ್ತಿಲ್ಲ. ನಿರಾಶ್ರಿತನ್ನು ಒಳಗೆ ಬಿಟ್ಟುಕೊಳ್ಳಲೂ ಆಗದು; ಮತ್ತು ಅವರ ದೇಶಗಳಲ್ಲಿಯೇ ಅವರ ಸಮಸ್ಯೆಗಳನ್ನು ಪರಿಹರಿಸಲೂಆಗದು. ಈ ಎರಡರಲ್ಲಿ ಯಾವುದಾದರೂ ಆದೀತು; ಅದುವೇ ಮಾನವ ಸ್ವಭಾವ. ಆದರೆ, ಬಂಡವಾಳಶಾಹಿಗೆ ಮಾನವ ಸ್ವಭಾವದ ಪರಿವೆ ಇಲ್ಲವಲ್ಲ. ಈ ಅಂಶವೇ ಅದನ್ನು ಬೆನ್ನು ಹತ್ತಿದ ಬೇತಾಳನಂತೆ ಕಾಡುತ್ತದೆ.



ತೆಲಂಗಾಣ: ಸಾಮಾಜಿಕ ನ್ಯಾಯ ಮತ್ತು ಸಮಗ್ರ ಅಭಿವೃದ್ಧಿಗಾಗಿ ಐದು ತಿಂಗಳ "ಮಹಾಜನ ಪಾದಯಾತ್ರಾ"

ಅಕ್ಟೋಬರ್ 17 ರಿಂದ ಮುಂದಿನ ಮಾರ್ಚ್ 12 ರ ವರೆಗೆ ತೆಲಂಗಾಣದಲ್ಲಿ ಸಿಪಿಐ(ಎಂ) "ಮಹಾಜನ ಪಾದಯಾತ್ರಾ" ನಡೆಸಲು ನಿರ್ಧರಿಸಿದೆ. ಇದು ಸಾಮಾಜಿಕ ನ್ಯಾಯ ಮತ್ತು ರಾಜ್ಯದ ಸಮಗ್ರ ಅಭಿವೃದ್ಧಿಯ ಪ್ರಶ್ನೆಗಳತ್ತ ರಾಜ್ಯ ಗಮನ ಸೆಳೆಯುವ 4000 ಕಿ.ಮೀ.ಗಳ ಪಾದಯಾತ್ರೆ. ರಾಜ್ಯ ಸಿಪಿಐ(ಎಂ) ಕಾರ್ಯದರ್ಶಿ ತಮ್ಮಿನೇನಿ ವೀರಭದ್ರಂ ಇದರ ನೇತೃತ್ವ ವಹಿಸುತ್ತಾರೆ, ಇತರ ಎಂಟು ಪ್ರಮುಖ ಮುಖಂಡರು ಇದರಲ್ಲಿ ಭಾಗವಹಿಸಲಿದ್ದಾರೆ. ಈ ಸಂದರ್ಭದಲ್ಲಿ ಪಕ್ಷ ಒಂದು ಎಲ್ಲ ವಿಭಾಗಗಳನ್ನು ಒಳಗೊಳ್ಳುವ ಅಭಿವೃದ್ಧಿ ಯೋಜನೆಯನ್ನು ತಯಾರಿಸಿ ಜನಗಳ ಮುಂದೆ ಇಡಲಿದೆ. ಇದರಲ್ಲಿ ತಮ್ಮ ಕೊಡುಗೆಗಳನ್ನು ನೀಡಲು ಬುದ್ಧಿಜೀವಿಗಳು ಮತ್ತು ಸಾಮಾಜಿಕ ಸಂಘಟನೆಗಳನ್ನು ಆಹ್ವಾನಿಸಲಾಗಿದೆ.



ಅದಕ್ಕೆ ಪೂರ್ವಭಾವಿಯಾಗಿ ಅಕ್ಟೋಬರ್ 13 ರಂದು ತೆಲಂಗಾಣದ ಎಲ್ಲ 31 ಹೊಸ '2ಕೆ ಓಟ'ವನ್ನು ನಡೆಸಲಾಗಿದೆ.

ಬಹುಶಃ ಇದರಿಂದ ತಮ್ಮ ಚುನಾವಣಾ ಭರವಸೆಗಳನ್ನು ಇಡೇರಿಸದ ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರರಾವ್ ಅವರಿಗೆ ದಿಗಿಲಾಗಿದೆ. ಅವರು ಈ ಪಾದಯಾತ್ರೆ ಮೇಲೆ ದಾಳಿ ನಡೆಸಿ ಎಂದು ಕರೆ ನೀಡಿದ್ದಾರೆ!

"ಕೊನೆಯ ಕ್ಷಣಗಳವರೆಗೂ ಸಿಪಿಐ(ಎಂ) ತೆಲಂಗಾಣ ರಾಜ್ಯ ನಿರ್ಮಾಣವಾಗಲು ಬೆಂಬಲ ನೀಡಿರಲಿಲ್ಲ ಹಾಗಾಗಿ ಅವರಿಗೆ ಈ ರಾಜ್ಯದಲ್ಲಿ ಸ್ಥಾನವಿಲ್ಲ, ಇಂತಹ ಪಾದಯಾತ್ರೆಯಿಂದ ಜನರಿಗಾಗುವ ಪ್ರಯೋಜನವೇನು? ಸಾರ್ವಜನಿಕರು ಸಿಪಿಐ(ಎಂ) ಕಾರ್ಯಕ್ರಮವನ್ನು ಎಲ್ಲಿ ಕಂಡರೂ ತಡೆಯಬೇಕು" ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

"ತೆಲಂಗಾಣ ಮುಖ್ಯಮಂತ್ರಿಗಳು ಮಹಾ ಜನ ಪಾದಯಾತ್ರೆಯ ಮೇಲೆ ಯಾಕೆ ಸಿಟ್ಟಾಗಿದ್ದಾರೆ ಎಂದು ಗೊತ್ತಿಲ್ಲ. ನಾವು ಜನಜಾಗೃತಿಗಾಗಿ ಮತ್ತು ಅಭಿವೃದ್ಧಿಗಾಗಿ ಈ ಪಾದಯಾತ್ರೆಯನ್ನು ಕೈಗೊಳ್ಳುತ್ತಿದ್ದೇವೆ. ಚುನಾವಣಾ ಭರವಸೆಗಳನ್ನು ಈಡೇರಿಸುವಲ್ಲಿ ಕೆಆರ್‌ಸಿ ಸರಕಾರ ಸೋತಿರುವ ವಿಚಾರವನ್ನು ಪಾದಯಾತ್ರೆಯ ಸಂದರ್ಭದಲ್ಲಿ ನಾವು ಜನರ ಮುಂದೆ ಬಿಚ್ಚಿಡುತ್ತೇವೆಂಬ ಕಾರಣಕ್ಕಾಗಿ ಈ ರೀತಿಯ ಮಾತುಗಳನ್ನು ಅವರು ಆಡುತ್ತಿದಾರೆ. ದಲಿತರಿಗೆ 3 ಎಕರೆ ಭೂಮಿ, ಆದಿವಾಸಿಗಳಿಗೆ 10% ಮೀಸಲಾತಿಯ ಭರವಸೆಯನ್ನು ಚುನಾವಣೆಯ ಸಂದರ್ಭದಲ್ಲಿ ನೀಡಲಾಗಿತ್ತು, ಯಾವುದನ್ನೂ ಈಡೇರಿಸಲಾಗಿಲ್ಲ. ಕೆಆರ್‌ಸಿ ಅವರ ದರ್ಪದ ಮಾತುಗಳು ನಿರಂತರವಾಗಿ ಕೇಳಿಬರುತ್ತಿವೆ, ರೋಹಿತ್ ವೇಮುಲಾ ಅವರಿಗೆ ನ್ಯಾಯಕ್ಕಾಗಿ ಹೋರಾಟ ನಡೆಸುವ ಸಂದರ್ಭದಲ್ಲಿ ಇರಬಹುದು ಅಥವಾ ಮಲ್ಲಾನಾ ಸಾಗರದ ಅತಿ ಸಣ್ಣ ರೈತರ ಮೇಲಿನ ಧಾಳಿಯ ವಿಷಯದಲ್ಲಾದರೂ ಇರಬಹುದು" ಎಂದು ಪಕ್ಷದ ರಾಜ್ಯಕಾರ್ಯದರ್ಶಿ ತಮ್ಮಿನೇನಿ ವೀರಭದ್ರಮ್ ಅವರು ಇದಕ್ಕೆ ಪ್ರತಿಕ್ರಿಯಿಸುತ್ತ ಹೇಳಿದ್ದಾರೆ.

ಹರ್ಯಾಣ ನಗರಸಭೆ ಅಭಿವೃದ್ಧಿ ಶುಲ್ಕದಲ್ಲಿ ತೀವ್ರ ಹೆಚ್ಚಳ

ಹರ್ಯಾಣ ಬಿಜೆಪಿ ಸರಕಾರವು ಹಲವಾರು ನಗರಸಭೆಗಳಿಂದ ಮನೆ, ಅಂಗಡಿ, ಇನ್ನಿತರ ಸಂಸ್ಥೆಗಳಿಂದ ಪಡೆಯುತ್ತಿದ್ದ ಅಭಿವೃದ್ಧಿ ಶುಲ್ಕವನ್ನು ಹೆಚ್ಚಿಸಿದೆ.

ಅಕ್ಟೋಬರ್ 4 ರಂದು ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಹೊಸ ಶುಲ್ಕವನ್ನು ಏರಿಸುವುದಾಗಿ ಪ್ರಕಟಿಸಿದೆ. ಕೆಲವು ಸಂಧರ್ಭಗಳಲ್ಲಿ ದರಗಳ ಏರಿಕೆ 900% ಇದೆ. ಹೊಸ ದರಗಳ ಶುಲ್ಕ ಪಾವತಿ ಕಡ್ಡಾಯವಾಗಿದೆ.

ಬಡಜನರು ಕಷ್ಟಪಟ್ಟು ಹೇಗೋ ಮನೆ ನಿರ್ಮಿಸಿಕೊಳ್ಳಬೇಕೆನ್ನುವವರ ಮುಂದೆ ಬಿ.ಜೆ.ಪಿ ಸರಕಾರದ ಈ ಜನವಿರೋದಿ, ಬಡವರ ವಿರೋಧೀ ಮುಖ ಮತ್ತೊಮ್ಮೆ ಅನಾವರಣಗೊಂಡಿದೆ. ಬಿಜೆಪಿ ಸರಕಾರ ಒಂದೆಡೆ ದೊಡ್ಡ ಕಂಪನಿಗಳಿಗೆ ಕಟ್ಟಡಗಳನ್ನು ಕಟ್ಟಲು ಬೃಹತ್ ವಿನಾಯಿತಿ ನೀಡಿದ್ದು ಬಡಜನರ ಮೇಲೆ ಹೊರೆಯನ್ನು ಹೆಚ್ಚಿಸಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಸುರೆಂದರ್ ಸಿಂಗ್ ಹೇಳಿದ್ದಾರೆ.

ಈ ಜನವಿರೋಧಿ ಕ್ರಮವನ್ನು ತಕ್ಷಣ ಹಿಂಪಡೆಯಬೇಕೆಂದು ಅವರು ಒತ್ತಾಯಿಸಿದ್ದಾರೆ.

ಕೇರಳ: ವೈದ್ಯಕೀಯ ಶಿಕ್ಷಣ ಶುಲ್ಕ ಕಡಿಮೆ ಮಾಡಬೇಕು ಹೈಕೋರ್ಟ್ ತೀರ್ಪಿನ ವಿರುದ್ಧ ಸುಪ್ರಿಂ ಕೋರ್ಟಿಗೆ ಅಪೀಲು

ಖಾಸಗೀ ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ಹೆಚ್ಚಿನ ಶುಲ್ಕವನ್ನು ತೆಗೆದುಕೊಳ್ಳುವದರ ಪರವಾಗಿ ಕೇರಳ ಉಚ್ಚ ನ್ಯಾಯಾಲಯ ನೀಡಿರುವ ತೀರ್ಪಿನ ವಿರುದ್ಧ ಕೇರಳದ ಎಲ್‌ಡಿಎಫ್ ಸರಕಾರ ಸರ್ವೋಚ್ಚ ನ್ಯಾಯಾಲಯದ ಮೊರೆಹೋಗಲು ತೀರ್ಮಾನಿಸಿದೆ. ಈ ವಿಷಯವನ್ನು ಮುಖ್ಯಮಂತ್ರಿ ಪಿಣರಾಯ್ ವಿಜಯನ್ ತಿಳಿಸಿದ್ದಾರೆ.

ನ್ಯಾಯಾಲಯದ ತೀರ್ಪಿನ ನಂತರ 3 ಖಾಸಗೀ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಿಗೆ ವಿಪರೀತ ಶುಲ್ಕವನ್ನು ತೆಗೆದುಕೊಳ್ಳಲು ಅನುಮತಿ ಸಿಕ್ಕಂತಾಗುತ್ತದೆ.

ಸದ್ಯಕ್ಕೆ ಸುಪ್ರಿಂ ಕೋರ್ಟ್ ನಿರ್ದೇಶನದಂತೆ ಪ್ರವೇಶ ಪರೀಕ್ಷೆಗಳ ಆಯುಕ್ತರು ಪ್ರವೇಶಗಳನ್ನು ನಡೆಸುತ್ತಾರೆ. ಆದರೆ ಸರಕಾರದ ನಿಲುವು ಸ್ಪಷ್ಟ, ವಿದ್ಯಾರ್ಥಿಗಳ ಮೇಲೆ ಹೆಚ್ಚಿನ ಶುಲ್ಕದ ಹೊರೆ ಹೊರಿಸಲು ಅದು ತಯಾರಿಲ್ಲ ಎಂದು ಮುಖ್ಯ ಮಂತ್ರಿಗಳು ಕೋಯಿಕೋಡ್‌ನಲ್ಲಿ ಸುದ್ದಿಗೋಷ್ಟಿಯಲ್ಲಿ ತಿಳಿಸಿದ್ದಾರೆ.

ಹೈಕೋರ್ಟು ಕಣ್ಣೂರ್ ಮೆಡಿಕಲ್ ಕಾಲೇಜಿಗೆ 10ಲಕ್ಷರೂ. ವಸೂಲಿ ಮಾಡಲು, ಕರುಣಾ ಮೆಡಿಕಲ್ ಕಾಲೇಜಿಗೆ 7.5ಲಕ್ಷ ರೂ. ಮತ್ತು ಕೆಎಂಸಿಟಿ ಮೆಡಿಕಲ್ ಕಾಲೇಜಿಗೆ 10ಲಕ್ಷ ರೂ. ವಸೂಲಿ ಮಾಡಲು ಅವಕಾಶ ನೀಡಿದೆ. ಆದರೆ ಈ ಕಾಲೇಜುಗಳಿಗೆ ಪ್ರವೇಶ ಕೇರಳ ಸರಕಾರದ ಅಪೀಲಿಗೆ ಸುಪ್ರಿಂ ಕೋರ್ಟಿನ ನಿರ್ಧಾರದ ಮೇಲೆ ಆಧಾರಿತವಾಗಿರುತ್ತದೆ ಎಂದು ಅವರು ಹೇಳಿದರು.

"ಪ್ರಸ್ತುತ ವಿಷಯದ ಬಗೆಗಿನ ಅತಿದೊಡ್ಡ ವೈರುಧ್ಯವೆಂದರೆ 2.5 ಲಕ್ಷ ರೂಪಾಯಿ ವೈದ್ಯಕೀಯ ಶುಲ್ಕ ಪ್ರತಿವರ್ಷ ಪಡೆಯುವವರ ಬಗ್ಗೆ ಪ್ರಶ್ನೆ ಮಾಡಿರುವ ವಿರೋಧ ಪಕ್ಷಗಳು ಖಾಸಗೀ ಶಿಕ್ಷಣ ಸಂಸ್ಥೆಗಳು ವರ್ಷಕ್ಕೆ 10 ಲಕ್ಷ ರೂ. ವಸೂಲಿ ಮಾಡಿದ್ದನ್ನು ಎಂದೂ ಪ್ರಶ್ನಿಸಲ್ಲಿಲ್ಲ, ಈ ಮೂರು ಕಾಲೇಜುಗಳು ವಸೂಲಿ ಮಾಡುತ್ತಿರುವ ವಿಪರೀತ ಶುಲ್ಕಗಳ ಬಗ್ಗೆ ಮೌನವಾಗಿದ್ದಾರೆ ಯಾವುದೇ ಪ್ರಶ್ನೆ ಮಾಡುತ್ತಿಲ್ಲ" ಎಂದು ಮುಖ್ಯಮಂತ್ರಿಗಳು ಸುದ್ದಿಗೋಷ್ಠಿಯಲ್ಲಿ ಟೀಕಿಸಿದರು.

ಶ್ರೀಕಾಕುಲಂನಲ್ಲಿ ಅಣು ವಿದ್ಯುತ್ ಸ್ಥಾವರ ವಿರುದ್ಧ ಪ್ರಚಾರಾಂದೋಲನ

ಸಿಪಿಐ(ಎಂ) ಮತ್ತು ಸಿಐಟಿಯು ಕಾರ್ಯಕರ್ತರು ಕಳೆದ ಒಂದು ತಿಂಗಳಿಂದ ಎಚ್ಚೆರ್ಲ ಮತ್ತು ವೈದಿಭೀಮಾವರಂ ನಡುವಿನಲ್ಲಿ ಬರುವ ಹಲವಾರು ಕೈಗಾರಿಕೆಗಳ ನೌಕರರು ಮತ್ತು ಕಾರ್ಮಿಕರನ್ನು ರಣಸ್ಥಲಂ ಮಡಲ್‌ದಲ್ಲಿ ಸ್ಥಾಪನೆ ಮಾಡಲು ಹೊರಟಿರುವ ಅಣುಸ್ಥಾವರ ಯೋಜನೆ ವಿರುದ್ಧ ಬೆಂಬಲಕ್ಕೆ ಸಜ್ಜುಗೊಳಿಸುತ್ತಿದ್ದಾರೆ.

ಪಕ್ಷವು ಪ್ರಸ್ತಾಪಿತ ಯೋಜನೆಯ ವಿರುದ್ಧ ಸಾರ್ವಜನಿಕ ಅಭಿಪ್ರಾಯವನ್ನು ನಿರ್ಮಿಸಲು ಜಾಗೃತಿ ಕಾರ್ಯಕ್ರಮಗಳನ್ನು ಮತ್ತು ಪ್ರತಿಭಟನಾ ಪ್ರದರ್ಶನಗಳನ್ನು ಸಂಘಟಿಸುತ್ತಲೇ ಬಂದಿದೆ.

ಸಿಐಟಿಯು ನಡೆಸುತ್ತಿರುವ ಪ್ರದರ್ಶನಗಳಲ್ಲಿ ಜಗತ್ತಿನಾದ್ಯಂತ ಅಣುಸ್ಥಾವರ ದುರ್ಘಟನೆಗಳ ಪರಿಣಾಮಗಳಿಂದ ಜನರನ್ನು ಎಚ್ಚರಿಸುವ ಪ್ರಯತ್ನ ಮಾಡಿದೆ. ಜನರ ಪ್ರತಿಕ್ರಿಯೆಗಳು ಸಕಾರಾತ್ಮಕವಾಗಿದ್ದು, ಅಣುಸ್ಥಾವರದ ಪರಿಣಾಮಗಳನ್ನು ತಿಳಿದುಕೊಳ್ಳಲು ಇದೊಂದು ಪ್ರಥಮ ಮಾಹಿತಿಯಾಗಬಹುದು ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಹೇಳಿದ್ದಾರೆ.

ಆರಂಭದಲ್ಲಿ ಅಣುಸ್ಥಾವರದ ಸಾಮರ್ಥ್ಯ 1000 ಮೆ.ವ್ಯಾಕ್ಕಿಂತ ಹೆಚ್ಚಿರಲಿಲ್ಲ. ಪ್ರಸ್ತಾಪಿತ ಎನ್‌ಪಿಸಿಐಎಲ್ ಸ್ಥಾವರ 6000 ಮೆ.ವ್ಯಾ ಸಾಮರ್ಥ್ಯವನ್ನು ಆರಂಭಿಕ ಹಂತದಲ್ಲೇ ನಿರ್ಮಿಸುವ ಯೋಜನೆ ಹೊಂದಿದೆ. ಇದು ಶ್ರೀಕಾಕುಲಂ, ವಿಜಯನಗರಂ, ಮತ್ತು ವಿಶಾಖಪಟ್ಟಣಂ ಪ್ರದೇಶದ ಜನರ ಪ್ರಾಣಕ್ಕೆ ಅಪಾಯ ತರುವುದು ಎಂದು 'ಸಂಜೀವಿನಿ' ಎಂಬ ಒಂದು ಎನ್‌ಜಿಒ ಅಧ್ಯಕ್ಷರಾದ ಕೆ. ರಾಮನ್ ಹೇಳಿದರು.

ಈ ಯೋಜನೆ ಪರಿಸರದ ಮೇಲೆ ಗಂಭೀರ ಪರಿಣಾಮವನ್ನುಂಟು ಮಾಡಲಿದೆ. ಪ್ರಸ್ತುತ ಯೋಜನಾ ವಲಯ ಕೇವಲ ನಾಲ್ಕು ಹಳ್ಳಿಯೆಂದಿದ್ದರೂ ಕೂಡ ಭವಿಷ್ಯದಲ್ಲಿ ಹೆಚ್ಚಿನ ಜಾಗಕ್ಕಾಗಿ ಸರಕಾರ ಹಳ್ಳಿಗಳನ್ನೇ ಖಾಲಿ ಮಾಡಿಸಬಹುದು ಎಂದು ಅವರು ಎಚ್ಚರಿಸಿದರು.

ಪೆಟ್ರೋ ವಾರ್ಸಿಟಿ ಹೆಸರಲ್ಲಿ ಭೂಕಬಳಿಕೆಗೆ ವಿರೋಧ

ಸಬ್ಬಾವರಂ ಮಂಡಲ್‌ನ ವಾನ್‌ಗಲಿ ಹಳ್ಳಿಯಲ್ಲಿ ಪ್ರಸ್ತಾಪಿತ ಪೆಟ್ರೋಲಿಯಂ ಯೂನಿವರ್ಸಿಟಿಗಾಗಿ ಮೀಸಲಿಟ್ಟಿದ್ದ 700 ಎಕರೆ ಭೂಮಿಯನ್ನು ಸರಕಾರ ಬಲವಂತವಾಗಿ ಸ್ವಾಧೀನಪಡಿಸಿಕೊಳ್ಳುವ ಕ್ರಮಕ್ಕೆ ಮುಂದಾಗಿರುವ ಆಂಧ್ರಪ್ರದೇಶ ಸರಕಾರವನ್ನು ಸಿಪಿಐ(ಎಂ) ರಾಜ್ಯಸಮಿತಿ ಹಾಗೂ 'ಭೂ ಹಕ್ಕುಗಳ ಹೋರಾಟ ಸಮಿತಿ' ಉಗ್ರವಾಗಿ ಟೀಕಿಸಿವೆ.

ಪ್ರಸ್ತಾಪಿತ ಪೆಟ್ರೋಲಿಯಂ ಯೂನಿವರ್ಸಿಟಿಗಾಗಿ ಕೇವಲ 200 ಎಕರೆ ಭೂಮಿಯನ್ನು ಸರಕಾರ ಹಂಚಿಕೆ ಮಾಡಿದೆ, ಹಾಗಿರುವಾಗ 700 ಎಕರೆ ಭೂಮಿಯನ್ನು ಏಕೆ ಸ್ವಾದೀನ ಪಡಿಸಿಕೊಳ್ಳುತ್ತದೆ ಎಂಬುದು ಪ್ರಶ್ನೆ. ಅವಶ್ಯಕತೆಗಿಂತ ಹೆಚ್ಚಿನ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಅದನ್ನು ಖಾಲೀ ಇರಿಸುವದು ನ್ಯಾಯವಲ್ಲ. ಅಚ್ಯುತಪುರಂನಲ್ಲಿ 5000 ಎಕರೆ ಭೂಮಿಯನ್ನು 2006ರಲ್ಲಿ ಈಗಾಗಲೇ ವಶಪಡಿಸಿಕೊಂಡು ಖಾಲಿ ಇಡಲಾಗಿದೆ ಎಂದು ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ನರಸಿಂಹ ರಾವ್ ಹೇಳಿದರು.

ಸ್ವಾಧೀನ ಪಡಿಸಿಕೊಳ್ಳಲಿರುವ 700 ಎಕರೆ ಭೂಮಿಯಲ್ಲಿ ಕೃಷಿ ಮಾಡಲಾಗುತ್ತದೆ. ರೈತರು ಬಾವಿ ತೆಗೆಸಿ ಮೋಟರ್ ಹಚ್ಚಿದ್ದಾರೆ ಮತ್ತು ಪ್ರತೀ ವರ್ಷ 2 ಬೆಳೆ ತೆಗೆಯುತ್ತಾರೆ. ಆದರೆ ಸರಕಾರದ ಅಧಿಸೂಚನೆ 246 ಎಕರೆ ಭೂಮಿಯಲ್ಲಿ ಕೃಷಿ ಮಾಡಲಾಗುತ್ತಿಲ್ಲ ಎಂದಿದೆ. 500 ಎಕರೆಗಳಷ್ಟು ಭೂಮಿಯನ್ನು ಕಳೆದ 30 ವರ್ಷಗಳಿಂದ ರೈತರು ಉಳುಮೆ ಮಾಡುತ್ತಿದ್ದಾರೆ. ಅವರಿಗೆ ಪಟ್ಟಾ ನೀಡಬೇಕೆಂದು ಅವರು ಹೇಳಿದರು.

ವಾನಗಲಿ ಹಳ್ಳಿಯ ರೈತರು ಸಣ್ಣ ಮತ್ತು ಅತಿಸಣ್ಣರೈತರಾಗಿದ್ದು ಕೃಷಿ ಅವರ ಏಕೈಕ ಜೀವನಾಧಾರವಾಗಿದೆ. 2013ರ ಭೂ ಸ್ವಾಧೀನ ಕಾಯ್ದೆಯ ಪ್ರಕಾರ ಯಾರು ತಮ್ಮ ಭೂಮಿಯನ್ನು ಕಳೆದುಕೊಳ್ಳುತ್ತಾರೋ ಅವರ ಅಂಗೀಕಾರದ ಮೇರೆಗೆ ಅವರಿಗೆ ಎಲ್ಲ ಹಕ್ಕು ಪರಿಹಾರಗಳನ್ನು ನೀಡಿ ಭೂಸ್ವಾದೀನ ಪಡೆಯಬೇಕೆಂಬ ಸೂಚನೆ ಇದೆ. ಸರಕಾರ ಈ ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಿ ಭೂಸ್ವಾದೀನ ಪಡಿಸಿ ಕೊಳ್ಳಬಯಸುತ್ತದೆ ಎಂದು ಅವರು ಆರೋಪಿಸಿದರು.

ರಿಲಾಯನ್ಸ್ ಕಂಪನಿಯಿಂದ ದಂಡ ವಸೂಲಿಗೆ ಸಿಪಿಐ(ಎಂ) ಆಗ್ರಹ

ಕೃಷ್ಣಾ ಗೋದಾವರಿ ಜಲಾನಯನ ಪ್ರದೇಶದಲ್ಲಿ ರಿಲಾಯನ್ಸ ಇಂಡಸ್ಟ್ರಿಯಲ್ ಲಿ. (ಆರ್‌ಐಎಲ್) ತೈಲ ಮತ್ತು ನೈಸರ್ಗಿಕ ಅನಿಲವನ್ನು ಹೊರತೆಗೆಯುವಲ್ಲಿ ನಡೆಸಿರುವ ಬಹಳಷ್ಟು ಅನಿಯಮಿತತೆಗಳನ್ನು ಜಸ್ಟೀಸ್ ಷಾ ಸಮಿತಿಯ ವರದಿ ನೀಡಿದೆ. ಆದರೂ ಆಂಧ್ರ ಪ್ರದೇಶ) ರಾಜ್ಯ ಸರಕಾರ ಮೌನವಾಗಿ ಇರುವುದು ಆಶ್ಚರ್ಯದ ಸಂಗತಿಯಾಗಿದೆ ಎಂದು ಪೂರ್ವ ಗೋದಾವರಿ ಜಿಲ್ಲೆಯ ಸಿಪಿಐ(ಎಂ) ಕಾರ್ಯದರ್ಶಿ ಹೇಳಿದ್ದಾರೆ. ಕೇಂದ್ರ ಸರಕಾರ ಷಾ ಸಮಿತಿ ಶಿಫಾರಸ್ಸುಗಳನ್ನು ಜಾರಿಗೆ ತಂದು ಆರ್‌ಐಎಲ್ ಜಿಲ್ಲೆಗೆ ದಂಡ ಪಾವತಿಸುವಂತೆ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಒತ್ತಡ ಹೇರಬೇಕು ಎಂದು ಅವರು ಆಗ್ರಹಿಸಿದ್ದಾರೆ.

2009 ರಿಂದ 2015 ರ ವರೆಗೆ ಆರ್‌ಐಎಲ್ 1,100 ಕ್ಯೂಬಿಕ್ ಮೀಟರ್‌ನಷ್ಟು ನೈಸರ್ಗಿಕ ಅನಿಲವನ್ನು ಕೆ.ಜಿ.ಜಲಾನಯನ ಪ್ರದೇಶದಿಂದ ದಿಕ್ಕು ತಪ್ಪಿಸಿದೆ ಎಂದು ವರದಿ ಹೇಳಿದ್ದು ಕೇಂದ್ರ ಸರಕಾರ ಆ ಶುಲ್ಕವನ್ನೂ ಸಹ ಸಂಸ್ಥೆಯಿಂದ ಪಡೆಯಬೇಕೆಂದು ಅವರು ಹೇಳಿದರು.

ಈ ವಿಷಯಕ್ಕೆ ಸಂಬಂಧಪಟ್ಟಂತೆ ಸಿಪಿಐ(ಎಂ) ಕಾರ್ಯಕರ್ತರು ಪೂರ್ವ ಗೋದಾವರಿ ಜಿಲ್ಲೆಯಲ್ಲಿ ಆರ್‌ಐಎಲ್ ಕಚೇರಿ ಮುಂದೆ ಧರಣಿಯನ್ನು ನಡೆಸಿದ್ದಾರೆ.



'ಜಗದಗಲ' ಕಾಲಂ ಪ್ರಮುಖ ಅಂತರ್ರಾಷ್ಟ್ರೀಯ ವಿದ್ಯಮಾನಗಳನ್ನು, ಜನ-ಪರ ಎಡ ದೃಷ್ಟಿಕೋನದಿಂದ ನಿರೂಪಿಸಲು ವಿಶ್ಲೇಷಿಸಲು ಪ್ರಯತ್ನಿಸುತ್ತದೆ. ಜಾಗದ ಹಾಗೂ ಪೂರ್ಣ ಮಾಹಿತಿಯ ಲಭ್ಯತೆಯ ಮಿತಿಯಿಂದ ಹಲವು ವಿದ್ಯಮಾನಗಳು ಇಲ್ಲಿ ಬಂದಿರುವುದಿಲ್ಲ. ಇಂತಹ ಕೆಲವು ಪ್ರಮುಖ ವಿದ್ಯಮಾನಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ. ಇವು ಸಿಪಿಐ(ಎಂ) ಕೇಂದ್ರ ಸಮಿತಿ ಅಕ್ಟೋಬರ್ 2016ರಲ್ಲಿ ಸಭೆ ಸೇರಿದಾಗ ಅಂಗೀಕರಿಸಿದ ನಿರ್ಣಯದ ಅಂತರ್ರಾಷ್ಟ್ರೀಯ ವಿಭಾಗದ ಆಯ್ದ ಭಾಗಗಳು. ಈ ನಿರ್ಣಯ ಜೂನ್ 2015ರಲ್ಲಿ 21ನೇ ಮಹಾಧಿವೇಶನದ ನಂತರದ ಅವಧಿಯ ಅಂತರ್ರಾಷ್ಟ್ರೀಯ ವಿದ್ಯಮಾನಗಳನ್ನು, ವಿಶ್ಲೇಷಿಸಿದೆ. ಸಿಪಿಐ(ಎಂ) ಕೇಂದ್ರ ಸಮಿತಿ ಅಕ್ಟೋಬರ್ ಸಭೆಯ ನಿರ್ಣಯದ ಪೂರ್ಣ ಪಾಠದ ಕನ್ನಡ ಅನುವಾದ ಇದೀಗ ಪ್ರಕಟವಾಗಿದೆ. ಅದು ಸಿಪಿಐ(ಎಂ)-ಕರ್ನಾಟಕ ವೆಬ್ ಸೈಟಿನಲ್ಲಿ (www.cpimkarnataka.org/documents) ಲಭ್ಯವಿದೆ. ಇಂಗ್ಲಿಷ್ ಮೂಲ ಸಹ ಸಿಪಿಐ(ಎಂ) ಕೇಂದ್ರೀಯ ವೆಬ್ ಸೈಟಿನಲ್ಲಿ (www.cpim.org/documents) ನಲ್ಲಿ ಲಭ್ಯವಿದೆ.

ಜಗದ ಸುತ್ತ

ಶರತ್‌ಚಂದ್ರ



ಬಹು-ಧ್ರುವೀಯತೆ

'ಶೀತಸಮರದದ ಕೊನೆಯ' ನಂತರ ತನ್ನ ಯಜಮಾನಿಕೆಯಲ್ಲಿ ಜಾಗತಿಕ ಏಕ-ಧ್ರುವೀಯತೆಯನ್ನು ಹೇರುವ ಅಮೆರಿಕನ್ ಸಾಮ್ರಾಜ್ಯಶಾಹಿಯ ಪ್ರಯತ್ನಗಳಿಗೆ ಪ್ರತಿರೋಧವಾಗಿ, ಬ್ರಿಕ್ಸ್, ಇಬ್ಸಾ (ಐ.ಬಿ.ಎಸ್.ಎ.), ಬೇಸಿಕ್ (ಬಿ.ಎ.ಎಸ್.ಐ.ಸಿ.) ಮುಂತಾದವುಗಳು ಬಹು-ಧ್ರುವೀಯತೆಯನ್ನು ಗಟ್ಟಿಗೊಳಿಸುವ ಪ್ರಯತ್ನಗಳ ಅಭಿವ್ಯಕ್ತಿಯಾಗಿ ಹೊಮ್ಮಿವೆ ಎಂದು ನಮ್ಮ 21ನೇ ಮಹಾಧಿವೇಶನದಲ್ಲಿ ನಾವು ಗಮನಿಸಿದ್ದೆವು.

ಆದರೆ ಈ ಅವಧಿಯಲ್ಲಿ, ಹಲವು ಪ್ರಮುಖ ಬದಲಾವಣೆಗಳೂ ಆಗಿವೆ. ಈ ವರದಿಯಲ್ಲಿ ನಿರೂಪಿಸಿರುವ ಬ್ರೆಜಿಲ್ ಮತ್ತು ದಕ್ಷಿಣ ಆಫ್ರಿಕಾದಲ್ಲಿ ನಡೆದ ಇತ್ತೀಚಿನ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಬಹು-ಧ್ರುವೀಯತೆಯ ಇಂತಹ ಅಭಿವ್ಯಕ್ತಿಗಳು ಬಹಳಷ್ಟು ಅನಿಶ್ಚಿತತೆಗಳನ್ನು ಎದುರಿಸಬೇಕಾಗುತ್ತದೆ.

ಆದರೆ, ಹೆಚ್ಚುತ್ತಿರುವ ರಶ್ಯ-ಚೀನಾ ಸಹಕಾರವಲ್ಲದೆ ಇಂತಹ ಹೊಸ ಅಭಿವ್ಯಕ್ತಿಗಳು ಹೊಮ್ಮುತ್ತಿವೆ. ರಶ್ಯ ನಾಯಕತ್ವದಲ್ಲಿ ಅರ್ಮೇನಿಯ, ಕಝಾಕಿಸ್ತಾನ, ಬೆಲರಸ್ ಗಳು ಸೇರಿ ರಚಿಸಲಾಗಿರುವ ಯುರೇಶಿಯನ್ ಆರ್ಥಿಕ ಒಕ್ಕೂಟದ ಒಟ್ಟು ಜಿಡಿಪಿ 40 ಸಾವಿರ ಕೋಟಿ ಡಾಲರುಗಳಷ್ಟು ಆಗುತ್ತದೆ. ಬೇಜಿಂಗಿನಲ್ಲಿ ಮುಖ್ಯ ಕಚೇರಿ ಹೊಂದಿರುವ ಏಶಿಯನ್ ಮೂಲಸೌಲಭ್ಯಗಳ ಬ್ಯಾಂಕ್ ಕಳೆದ ವರ್ಷ ಆರಂಭವಾಗಿ 57 ಸದಸ್ಯ ದೇಶಗಳನ್ನು ಹೊಂದಿದೆ. ಈ ಬ್ಯಾಂಕಿಗೆ ಅಮೆರಿಕದ ತೀವ್ರ ವಿರೋಧ ಲೆಕ್ಕಿಸದೆ ಬ್ರಿಟನ್ ಸಹ ಸೇರಿಕೊಂಡಿದೆ ಎಂಬುದು ಗಮನಾರ್ಹ. ಹೊಸ ರೇಶ್ಮೆ ಹಾದಿ ಆರ್ಥಿಕ ಬೆಲ್ಟ್(ಪ್ರದೇಶ) ಮತ್ತು 21ನೇ ಶತಮಾನದ ಹೊಸ ರೇಶ್ಮೆ ಕಡಲ ಹಾದಿ – ಒಟ್ಟಾಗಿ "ಒಂದು ಬೆಲ್ಟ್, ಒಂದು ದಾರಿ' ಎಂಬ ಚೀನಾದ ಹೊಸ ಪ್ರಯತ್ನಗಳಿಂದ ಏಶ್ಯಾ, ಆಫ್ರಿಕಾ, ಮಧ್ಯ-ಪ್ರಾಚ್ಯ ಮತ್ತು ಯುರೋಪುಗಳ 4.4 ಶತ-ಕೋಟಿ ಜನಸಂಖ್ಯೆ ಇರುವ 65 ದೇಶಗಳಲ್ಲಿ ದಾರಿ, ರೈಲು, ಬಂದರು ಮತ್ತು ಪೈಪುಲೈನುಗಳಲ್ಲಿ ಹೊಸ ಹೂಡಿಕೆ ಕಾಣಲಿದೆ.

ರಶ್ಯದ ಯುರೇಶಿಯನ್ ಆರ್ಥಿಕ ಒಕ್ಕೂಟದ ಮೂಲಕ ಯುರೇಶಿಯನ್ ಕ್ರೋಢೀಕರಣ, ಹಾಗೂ ರಶ್ಯ-ಚೀನಾಗಳ ನಾಯಕತ್ವದ ಶಾಂಘಾಯ್ ಸಹಕಾರ ಸಂಘಟನೆಗಳಿಂದ ಯುರೇಶಿಯಾದ ದೊಡ್ಡ ಶಕ್ತಿಗಳಾದ ರಶ್ಯ-ಚೀನಾಗಳ ನಡುವೆ ಹೊಸ ದ್ವಿಪಕ್ಷೀಯ ಆರ್ಥಿಕ ಮತ್ತು ಮಿಲಿಟರಿ ಸಹಕಾರಗಳ ಸರಣಿ ಒಪ್ಪಂದಗಳನ್ನು ಮಾಡಲಾಗುತ್ತಿದೆ. ●

ವಿಯೇಟ್ನಾಮ್:



ಕಳೆದ ಎರಡು ವರ್ಷಗಳಿಂದ ವಿಯೇಟ್ನಾಮ್ ಶೇ. 6 ಜಿಡಿಪಿ ಬೆಳವಣಿಗೆ ದರ ಕಾಪಾಡಿಕೊಂಡಿದೆ. 2015ಕ್ಕೆ ಹೋಲಿಸಿದರೆ ಸರಕಾರ 2016ಕ್ಕೆ ಶೇ. 6.7 ಬೆಳವಣಿಗೆ ದರದ ಗುರಿ ಇಟ್ಟುಕೊಂಡಿತ್ತು. ಈಗ ಅದನ್ನು ದೇಶದಲ್ಲಿ ತೀವ್ರ ಬರ ಪರಿಸ್ಥಿತಿಯಿಂದಾಗಿ ಶೇ. 6.27ಕ್ಕೆ ಇಳಿಸಿದೆ. ಟಿ.ಪಿ.ಪಿ. ಒಪ್ಪಂದಕ್ಕೆ ಸಹಿ ಹಾಕಿರುವ ದೇಶಗಳಲ್ಲಿ ವಿಯೇಟ್ನಾಮ್ ಕೂಡಾ ಒಂದು. ಜನವರಿ 2016ರಲ್ಲಿ ಸಂಘಟಿಸಲಾದ ವಿಯೇಟ್ನಾಮ್ ಕಮ್ಯುನಿಸ್ಟ್ ಪಕ್ಷದ 12ನೇ ಮಹಾಧಿವೇಶನದಲ್ಲಿ ರಾಜಕೀಯ ವರದಿಯನ್ನು ಅಂಗೀಕರಿಸಿತುಕಿದರ ಜತೆಗೆ ಮಹಾಧಿವೇಶನ 2011–15 ಅವಧಿಗೆ ನಿಗದಿ ಪಡಿಸಲಾಗಿದ್ದ ಸಾಮಾಜಿಕ-ಆರ್ಥಿಕ ಕರ್ತವ್ಯಗಳ ಜಾರಿಯನ್ನು ಪರಾಮರ್ಶಿಸಿತು. 2016–2010 ಅವಧಿಗೆ ದಿಕ್ಕು-ಗುರಿಗಳನ್ನು ನಿರ್ಧರಿಸಿತು. ಪಕ್ಷ ಕಟ್ಟುವ ನಿರ್ಧಾರಗಳ ಜಾರಿಯ ಬಗ್ಗೆ ಗೊತ್ತುವಳಿಯನ್ನು ಅಂಗೀಕರಿಸಿತು. ಹಲವು ತಿಂಗಳೂಗಳ ಮೊದಲೇ ಹಂಚಲಾದ ಕರಡು ವರದಿ ಪಕ್ಷದೊಳಗೆ ವ್ಯಾಪಕವಾಗಿ ಚರ್ಚಿಸಿದ ಮೇಲೆನೇ ಮಹಾಧಿವೇಶನದಲ್ಲಿ ಮಂಡಿಸಲಾಗಿತ್ತು. ಕರಡು ವರದಿಗೆ 2.6 ಕೋಟಿ ಟಿಪ್ಪಣಿಗಳು ಮತ್ತು ಸಲಹೆಗಳು ಬಂದಿದ್ದು ಅವನ್ನು ಮಹಾಧಿವೇಶನದಲ್ಲಿ ಚರ್ಚಿಸಲಾಯಿತು. ಕೆಲವು (ಅದರಲ್ಲೂ ಕೈಗಾರಿಕೀಕರಣ ಸಂಬಂಧಿಸಿದ) ನಿರ್ದಿಷ್ಟ ಸಾಮಾಜಿಕ-ಆರ್ಥಿಕ ಗುರಿಗಳನ್ನು ಸಾಧಿಸಲಾಗಿಲ್ಲ ಮತ್ತು ಅಸಮಾನತೆಗಳು ಹೆಚ್ಚುತ್ತಿವೆ ಎಂದು ವರದಿ ಗಮನಿಸಿದೆ. ರಾಜಕೀಯ ಸಿದ್ಧಾಂತ, ನೈತಿಕತೆಗಳಲ್ಲಿ ಕುಸಿತ ಮತ್ತು ಜೀವನಮಟ್ಟ; ಹಾಗೂ ವಿಳಂಬ ನೀತಿ, ಭ್ರಷ್ಟಾಚಾರ ಮತ್ತು ಪೋಲು; – ಈ ದುರ್ಗುಣಗಳ ವಿರುದ್ಧ ಪಕ್ಷ ಹೋರಾಡಬೇಕಾಗಿದೆ ಎಂದು ವರದಿ ಗುರುತಿಸಿದೆ.

ಚೀನಾದ ಪ್ರಧಾನಿಯವರ ಆಹ್ವಾನದ ಮೇರೆಗೆ ವಿಯೇಟ್ನಾಮ್ ಪ್ರಧಾನಿ ಚೀನಾಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದರು. ವಿಯೇಟ್ನಾಮ್-ಚೀನಾ ಸಮಗ್ರ ವ್ಯೂಹಾತ್ಮಕ ಸಹಕಾರಿ ಪಾಲುದಾರಿಕೆ ತೀವ್ರಗೊಳಿಸುವ ಬಗ್ಗೆ ಸ್ಥೂಲ ಸಾಮಾನ್ಯ ತಿಳುವಳಿಕೆ ಎರಡೂ ದೇಶಗಳ ಮಾತುಕತೆ ಮತ್ತು ಸಭೆಗಳಲ್ಲಿ ಮೂಡಿತು. ಪರಸ್ಪರ ಆಸಕ್ತಿಯ ಅಂತರ್ರಾಷ್ಟ್ರೀಯ ಹಾಗೂ ಪ್ರಾದೇಶಿಕ ವಿಷಯಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳಲಾಯಿತು. ದಕ್ಷಿಣ ಚೀನಾದ ಸಮುದ್ರದ ಬಗೆಗಿನ ಮೂಲಭೂತ ನಿಯಮಗಳನ್ನೊಳಗೊಂಡ ದ್ವಿಪಕ್ಷೀಯ ಒಪ್ಪಂದಗಳನ್ನು ಮುತುವರ್ಜಿಯಿಂದ ಜಾರಿ ಮಾಡಬೇಕೆಂದು ಎರಡೂ ದೇಶಗಳೂ ಒಪ್ಪಿದವು. ವಿಯೇಟ್ನಾಮ್ ಮತ್ತು ಚೀನಾಗಳು ದಕ್ಷಿಣ ಚೀನಾ ಸಮುದ್ರದ ಬಗೆಗಿರುವ ವಿವಾದ ಇನ್ನಷ್ಟು ಸಂಕೀರ್ಣ ಹಾಗೂ ವ್ಯಾಪಕವಾಗದಂತೆ ತಡೆಯಲು, ರಾಜತಾಂತ್ರಿಕ ಮತ್ತು ಕಾನೂನಿನ ಪ್ರಕ್ರಿಯೆಗಳನ್ನು ಗೌರವಿಸಬೇಕು. ಶಾಂತಿ ಮತ್ತು ಸುಭದ್ರತೆ ರಕ್ಷಿಸುವಂತೆ ಈ ಬಗ್ಗೆ ನಡವಳಿಕೆಗಳ ನಿಯಮಾವಳಿಯೊಂದನ್ನು ರೂಪಿಸಬೇಕು ಎಂದೂ ಒಪ್ಪಲಾಯಿತು. ●

ಆಫ್ರಿಕಾ



ಆಫ್ರಿಕಾದ ಹಲವು ದೇಶಗಳಲ್ಲಿ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಅಸ್ಥಿರತೆ ಇನ್ನೂ ಆಳವಾಗುತ್ತಾ ನಡೆದಿದೆ. ಇದಕ್ಕೆ ಪ್ರಮುಖವಾಗಿ ಸತತ ಸಾಮ್ರಾಜ್ಯಶಾಹಿಯ ಮಧ್ಯಪ್ರವೇಶಗಳಿಂದ ಮತ್ತು ಅದು ಈ ಖಂಡದಲ್ಲಿ ಭಯೋತ್ಪಾದಕ ಗುಂಪುಗಳಿಗೆ ಕೊಡುತ್ತಿರುವ ಬೆಂಬಲವೇ ಕಾರಣ.

ಐದು ವರ್ಷಗಳ ಹಿಂದೆ ಸುಡಾನ್ ದೇಶವನ್ನು ಉತ್ತರ ಮತ್ತು ದಕ್ಷಿಣ ಎಂಬ ಎರಡು ದೇಶಗಳಾಗಿ ವಿಭಜಿಸಲಾಯಿತು. ಸಾಮ್ರಾಜ್ಯಶಾಹಿಯ ಕುಮ್ಮಕ್ಕಿನಿಂದ ನಡೆಯುತ್ತಿದ್ದ ಕೊನೆಗಾಣದ ಆಂತರಿಕ ಯುದ್ಧದಿಂದ ಈ ಪರಿಸ್ಥಿತಿ ಉಂಟಾಯಿತು. ಈಗ ಹೊಸದಾಗಿ ಸೃಷ್ಟಿಯಾದ ದಕ್ಷಿಣ ಸುಡಾನ್ ಈಗ ಹೊಸ ಆಂತರಿಕ ಯುದ್ಧದ ಅಂಚಿನಲ್ಲಿದೆ. ಒಂದು ವರ್ಷ ಹಳೆಯ ಶಾಂತಿ ಒಪ್ಪಂದ ಮುರಿದು ಬಿದ್ದು ವ್ಯಾಪಕ ಹಿಂಸಾಚಾರಕ್ಕೆ ಎಡ ಮಾಡಿಕೊಟ್ಟಿದೆ. ಎರಡು ವರ್ಷಗಳ ಕಾಲ ಭಯೋತ್ಪಾದಕ ಗುಂಪು ಬೊಕೊ ಹರಾಮ್ ನ ಭೀಕರ ಹಿಂಸಾತ್ಮಕ ದಾಳಿಯ ನಂತರ, ಈಗ ನೈಜೀರಿಯಾದಲ್ಲಿ ದೇಶವ್ಯಾಪಿ ಬರದಿಂದ ನರಳುತ್ತಿದೆ. ಪರಿಸ್ಥಿತಿ ಎಷ್ಟು ಗಂಭೀರ ಇದೆಯೆಂದರೆ ಯುನಿಸೆಫ್ ಪ್ರಕಾರ ಈಗಲೇ ಆಹಾರದ ಬಂದೋಬಸ್ತ್ ಆಗದಿದ್ದರೆ 50 ಸಾವಿರ ಮಕ್ಕಳು ಹಸಿವಿನಿಂದ ಸಾಯುತ್ತಾರೆ. ನೈಜೀರಿಯಾದ ಒಂದು ಪ್ರಾಂತ್ಯದಲೇ 2.5 ಲಕ್ಷ ಜನ ಗಂಭೀರ ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. 44 ಲಕ್ಷ ಜನ ಬರಪೀಡಿತರಾಗಿದ್ದಾರೆ. ಅವರಲ್ಲಿ ಅರ್ಧದಷ್ಟು ವಾಸಿಸುವ ಪ್ರದೇಶಗಳಿಗೆ ಬರಪರಿಹಾರ ಸಂಸ್ಥೆಗಳು ತಲುಪಲು ಸಾಧ್ಯವಿಲ್ಲ. ಸೊಮಾಲಿಯದಲ್ಲಿ ಉಗ್ರರ ಭಯೋತ್ಪಾದಕ ದಾಳಿಗಳು ರಾಜಧಾನಿ ಮೊಗದಿಶು ಮತ್ತು ಇತರ ಪ್ರಮುಖ ನಗರಗಳಲ್ಲಿ ಅವ್ಯಾಹತವಾಗಿ ಮುಂದುವರೆದಿವೆ. ಸೊಮಾಲಿಯದ ಹಲವು ಪ್ರದೇಶಗಳಲ್ಲಿ ವಿಶ್ವಸಂಸ್ಥೆ ಬೆಂಬಲಿತ ಆಫ್ರಿಕನ್ ಒಕ್ಕೂಟ ಹಾಗೂ ಇಥಿಯೋಪಿಯನ್ ಸೈನ್ಯಗಳ ವಿರುದ್ಧ ಶಬಾಬ್ ಉಗ್ರರು ದಾಳಿ ಎಸಗುತ್ತಿದ್ದಾರೆ. ಗೇಬನ್, ಝೂಂಬಿಯಾ ಮುಂತಾದ ಇತರ ದೇಶಗಳಲ್ಲಿ ಇತ್ತೀಚಿನ ಚುನಾವಣೆಗಳಲ್ಲಿ ವ್ಯಾಪಕ ಮೋಸ ಮತ್ತು ಅಕ್ರಮಗಳ ನಂತರ ಅಸ್ಥಿರತೆ ಇನ್ನೂ ಆಳವಾಗಿದೆ.

ದಕ್ಷಿಣ ಆಫ್ರಿಕಾದ ಸ್ಥಳೀಯ ಚುನಾವಣೆಗಳಲ್ಲಿ, 1994ರ ನಂತರ ಆಳುವ ಎ.ಎನ್.ಸಿ. (ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್) ರಂಗದ ಮತಗಳಿಕೆ ಅತಿ ಕಡಿಮೆ ಮಟ್ಟ ಮುಟ್ಟಿದೆ. 1994ರಲ್ಲಿ ವರ್ಣಬೇಧದ ಆಳ್ವಿಕೆಯನ್ನು ಕಿತ್ತೊಗೆದ ನಂತರ ಮೊದಲ ಬಾರಿಗೆ ಚುನಾವಣೆ ನಡೆದಿತ್ತು. ಎ.ಎನ್.ಸಿ. ಶೇ. 52 ಮತ ಗಳಿಸಿದರೂ, ಮತಗಳಿಕೆ ದೊಡ್ಡ ಕುಸಿತ ಕಂಡಿದೆ. ಹೆಚ್ಚುತ್ತಿರುವ ನಿರುದ್ಯೋಗ, ನಿಜ ವೇತನದ ಕುಸಿತ ಮತ್ತು ಎಲ್ಲರಿಗೂ ಮನೆ ಯೋಜನೆ ಜಾರಿಯಾಗದಿರುವುದನ್ನು ಪ್ರತಿಭಟಿಸಿ ಜನತೆ ಎ.ಎನ್.ಸಿ. ವಿರುದ್ಧ ಮತ ಚಲಾಯಿಸಿದ್ದಾರೆ. ●

ಈ ವಾರ ಚರಿತ್ರೆಯಲ್ಲಿ

9 ಅಕ್ಟೋಬರ್ 1967

ಚೆ ಗವೇರಾ ಹುತಾತ್ಮರಾದ ದಿನ

ಅರ್ಜೆಂಟಿನಾದಲ್ಲಿ ಹುಟ್ಟಿ ಕ್ಯೂಬಾದ ಕ್ರಾಂತಿಯ ಸಫಲ ರೂವಾರಿಯಾಗಿದ್ದು, ಕ್ರಾಂತಿಯ ನಂತರ ಸರಕಾರದಲ್ಲಿ ಹಲವು ಜವಾಬ್ದಾರಿಗಳನ್ನು ನಿಭಾಯಿಸಿ ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕದಲ್ಲಿ ಕ್ರಾಂತಿ ಮಾಡಲು ಹೊರಟ ಚೆ ಗವೇರಾ ನಂತಹ ಅಂತರ್ರಾಷ್ಟ್ರೀಯವಾದಿ ಸಾಮ್ರಾಜ್ಯಶಾಹಿ-ವಿರೋಧಿ ಇನ್ನೊಬ್ಬರಿಲ್ಲ. ಆತ ಸಾಮ್ರಾಜ್ಯಶಾಹಿಯ ರಕ್ಷಣೆಯಲ್ಲಿ ತೊಡಗಿದ್ದ ಅಮೆರಿಕನ್ ಸರಕಾರ ಮತ್ತು ಸಿ.ಐ.ಎ.ಗೆ ಸಿಂಹಸ್ವಪ್ನವಾಗಿದ್ದ. ಬೊಲಿವಿಯದಲ್ಲಿ ಗೆರಿಲ್ಲಾ ಹೋರಾಟದಲ್ಲಿ ತೊಡಗಿದ್ದ ಚೆ ಯನ್ನು ಹಿಂಬಾಲಿಸಿ ಭೇಟೆಯಾಡಿ ಕೊನೆಗೂ ಈ ದಿನದಂದು ಕೊಲ್ಲುವಲ್ಲಿ ಸಫಲವಾಯಿತು. ಆದರೆ ಕ್ರಾಂತಿಕಾರಿಗಳನ್ನು ಕೊಲ್ಲಬಹುದು. ವಿಚಾರಗಳನ್ನಲ್ಲ ಎಂದು ಚೆ ಕೊಲೆಯ ನಂತರ ಅವರಿಗೆ ಅರಿವಾಯಿತು. ಯಾರೂ ನಂಬಲಿಕ್ಕಿಲ್ಲ ಮತ್ತು ಆತನ ಹೆಣ ನೋಡಿದರೆ ಗೆರಿಲ್ಲಾ ಹೋರಾಟಗಳೆಲ್ಲಾ ತಣ್ಣಗಾಗಬಹುದು ಎಂದು ಸಿಐಎ ಆತನ ಹೆಣದ ಫೋಟೊ ಸಾಕಷ್ಟು ವ್ಯಾಪಕವಾಗಿ ಪ್ರಚುರ ಪಡಿಸಿತು. ಆದರೆ ಆದದ್ದು ತಿರುವು ಮುರುವು. ಚೆ ಅಂತರ್ರಾಷ್ಟ್ರೀಯವಾದಿ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟದ ರೂಪಕವಾಹಗಿ ಬಿಟ್ಟ. ಬಂಡವಾಳಶಾಹಿ ದೇಶಗಳ ಯುವಕರಿಗೂ ಪ್ರತಿಸಂಸ್ಕೃತಿಯ ಪ್ರತೀಕವಾಗಿ ಬಿಟ್ಟ. ಚೇ ನೆನಪಿನಲ್ಲಿ ಅಂತರ್ರಾಷ್ಟ್ರೀಯವಾದಿ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟಕ್ಕೆ ಪುನಃ ಅರ್ಪಿಸಿಕೊಳ್ಳುವ ದಿನ ಇದು.

JANASHAKTHI KANNADA VARA PATRIKE OCTO 23, 2016 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283



2016 ಡಿಸೆಂಬರ್ 2,3 ಮತ್ತು 4 ರಂದು ರಾಯಚೂರಿನಲ್ಲಿ ನಡೆಯಲಿರುವ 82 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಖ್ಯಾತ ಬಂಡಾಯ ಸಾಹಿತಿ ಮತ್ತು ಕನ್ನಡ ಚಲನಚಿತ್ರ ನಿರ್ದೇಶಕರು ಹಾಗು ದುಡಿವ ಜನರ ಪ್ರಾಣಮಿತ್ರರಾಗಿರುವ ಬರಗೂರು ರಾಮಚಂದ್ರಪ್ಪ ಆಯ್ಕೆ ಅರ್ಥಪೂರ್ಣ ಹಾಗು ಅಭಿನಂದನೀಯ.

ಬಾಬ್ ಡೈಲನ್‌ಗೆ ನೊಬೆಲ್ ಸಾಹಿತ್ಯ ಪ್ರಶಸ್ತಿ

ಕಪ್ಪು ಜನರ ನಾಗರಿಕ ಹಕ್ಕುಗಳ ಚಳುವಳಿ ಮತ್ತು ವಿಯೆಟ್ನಾಮ್ ಯುದ್ಧ ವಿರೋಧಿ ಚಳುವಳಿಯಿಂದ ಹಾಡುಗಾರ ಮತ್ತು ಹಾಡುಗಳ ರಚನಕಾರನಾದ ಬಾಬ್ ಡೈಲನ್ ಗೆ ಈ ವರ್ಷದ ಸಾಹಿತ್ಯ ನೊಬೆಲ್ ಬಹುಮಾನ ಘೋಷಿಸಲಾಗಿದೆ.

ಸುಮಾರು ಐದು ದಶಕಗಳಿಗೂ ಹೆಚ್ಚಿನ ಕಾಲ ಹಲವು ಸಂಗೀತ ಪ್ರಕಾರಗಳಲ್ಲಿ ಹಾಡು ರಚಿಸಿ ಹಾಡಿದ್ದ 75 ವರ್ಷದ ಬಾಬ್ ಡೈಲಾನ್, 'ಅಮೆರಿಕಾದ ಗೀತ ರಚನೆಯ ಸುದೀರ್ಘ ಸಂಪ್ರದಾಯದಲ್ಲಿ ಹೊಸತನ್ನು ಸೃಷ್ಟಿಸುತ್ತಿರುವುದಕ್ಕೆ' ಈ ಪ್ರಶಸ್ತಿ ನೀಡುತ್ತಿರುವುದಾಗಿ ಸ್ವೀಡಿಷ್ ಅಕಾಡೆಮಿ ತಿಳಿಸಿದೆ. ಹಾಡುಗಾರ, ಹಾಡುಗಳ ಬರಹಗಾರನಿಗೆ ಸಾಹಿತ್ಯದ ನೊಬೆಲ್ ಸಾಹಿತ್ಯ ಪ್ರಶಸ್ತಿ ನೀಡುವ ಅಪರೂಪದ ತೀರ್ಮಾನವನ್ನು ಸ್ವೀಡಿಷ್ ಅಕಾಡೆಮಿ ತೆಗೆದುಕೊಂಡಿರುವುದು ಆಶ್ಚರ್ಯಕ್ಕೆ ಕಾರಣವಾಗಿದೆ.

ಅವರು ಜಗತ್ತಿನ ಸುಪ್ರಸಿದ್ದ ಸಂಗೀತ ರಚನೆಕಾರ, ಬಂಡಾಯ ಸಾಹಿತಿ, ಮಾತ್ರವಾಗಿರದೆ ಚಳುವಳಿಗಳಿಗೆ ಹಾಡುಗಳ ಮೂಲಕ ಅವರು ಸ್ಪೂರ್ತಿ ತುಂಬಿದ್ದರು. ಬಾಬ್ ಬರೆದ 'ಬ್ಲೋಯಿಂಗ್ ಇನ್ ದ ವಿಂಡ್' ಮತ್ತು 'ದ ಟೈಮ್ಸ್ ದೆ ಆರ್ ಚೇಂಜಿಂಗ್' ವಿಯೇಟ್ನಾಂ ಯುದ್ಧ ವಿರೋಧಿ ಮತ್ತು ಕರಿಯರ ನಾಗರಿಕ ಹಕ್ಕುಗಳ ಚಳುವಳಿಗಳ 'ರಾಷ್ಟ್ರಗೀತೆ'ಗಳಂತಾಗಿದ್ದವು ಎನ್ನಲಾಗುತ್ತದೆ.

ಯುದ್ಧ ವಿರೋಧಿ ಹಾಡುಗಳನ್ನು ಬರೆದು ಯುದ್ಧದಿಂದಾಗುವ ಅಪಾಯ, ಅಶಾಂತಿಯ ಕುರಿತು ಅನೇಕ ಹಾಡುಗಳನ್ನು ರಚಿಸಿ ಹಾಡಿದ್ದರು. ಅಮೇರಿಕಾದ ಕರಿಯರ ನಾಗರಿಕ ಹಕ್ಕುಗಳ ಕುರಿತು ಜನಜಾಗೃತಿ ಮೂಡಿಸುವ ಚಳುವಳಿ ಹಾಡುಗಳನ್ನು ಡೈಲನ್ ಬರೆದಿದ್ದರು. ಅವರು 52ಕ್ಕೂ ಹೆಚ್ಚು ಪದ್ಯಗಳನ್ನು ರಚಿಸಿ, 2812 ಸಂಗೀತದ ಕಾರ್ಯಕ್ರಮಗಳನ್ನು ನೀಡಿದ್ದು, 37 ಅಲ್ಬಂಗಳನ್ನು ಬಿಡುಗಡೆ ಮಾಡಿದ್ದಾರೆ. ಅವರ ಹಾಡುಗಳ 10 ಕೋಟಿ ರೆಕಾರ್ಡುಗಳು ಮಾರಾವಾಗಿವೆ. ಅವರು ಹಾಡು ಬರಹಗಾರ, ಹಾಡುಗಾರ ಮಾತ್ರ ಆಗಿರದೆ, ಕಲಾವಿದರೂ ಆಗಿದ್ದರು. ಅವರು 6 ಡ್ರಾಯಿಂಗ್ ಮತ್ತು ಪೈಂಟಿಂಗ್ ಗಳ ಪುಸ್ತಕ ಬಿಡುಗಡೆ ಮಾಡಿದ್ದು ಹಲವು ಪ್ರಸಿದ್ಧ ಗ್ಯಾಲರಿಗಳಲ್ಲೂ ಪ್ರದರ್ಶಿಸಿದ್ದಾರೆ.




ಮಹದಾಯಿ : ರೈತರ ಮೇಲಿನ ಸುಳ್ಳು ಮೊಕದ್ದಮೆ ವಾಪಸ್ಸಾಗಲಿ



ಮಹದಾಯಿ ಹೋರಾಟದ ಸಂದರ್ಭದಲ್ಲಿ ರೈತರ ಮೇಲೆ ಹಾಕಲಾದ ಸುಳ್ಳು ಮೊಕದ್ದಮೆಗಳನ್ನು ವಾಪಸ್ಸು ಪಡೆಯಬೇಕೆಂದು, ಸಾಲ ಮನ್ನಾ. ಬೆಳೆ ವಿಮೆ, ಬರಗಾಲ ನಿರ್ವಹಣೆಗೆ ವಿಶೇಷ ಪ್ಯಾ-ಕೇಜ, ಮಹದಾಯಿ ಸಮಸ್ಯೆ ಪರಿಹಾರ ಸೇರಿದಂತೆ ಈ ಭಾಗದ ರೈತರ ಸಮಸ್ಯೆಗಳನ್ನು ಚರ್ಚಿಸಲು ವಿಷೇಶ ಅಧಿವೇಶನ ಕರೆಯಲು ಮತ್ತು ಮಹದಾಯಿ ಸಮಸ್ಯೆ ಪರಿಹಾರ ಕಂಡುಕೊಳ್ಳಲು ಪ್ರಧಾನಿ ಮಧ್ಯಸ್ಥಿಕೆ ವಹಿಸಬೇಕೆಂದು ಆಗ್ರಹಿಸಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್ ವಾದಿ) ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ಅಕ್ಟೋಬರ್ 14, 2016ರಂದು ಪ್ರತಿಭಟನೆ ನಡೆಸಲಾಯಿತು.

ನಂತರ ನವಲಗುಂದ ತಹಶೀಲದ್ದಾರ್ ರವರ ಮೂಲಕ ರಾಜ್ಯ ಸರಕಾರಕ್ಕೆ ಮನವಿ ಸಲ್ಲಿಸಲಾಯಿತು. ಧರಣಿ ಸತ್ಯಾಗ್ರಹದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದಸ್ವಾಮಿ ಹಾಗು ಸಿಪಿಐಎಂ ಪಕ್ಷದ ಮುಖಂಡರಾದ ಬಿ.ಎಸ್.ಸೊಪ್ಪಿನ, ಬಿ.ಎನ್ ಪೂಜಾರ. ಮಹೇಶ ಪತ್ತಾರ್, ಕೆ.ಎಚ್.ಪಾಟೀಲ. ಮಹೇಶ ಹಿರೇಮಠ, ಪಿರೂ ರಾಠೊಡ. ಮಾರುತಿ ಚಿಟಗಿ ಸಂಕಪ್ಪ ಕುರಹಟ್ಟಿ ಪತಾಕ ತೋಟದ ಮುಂತಾದವರು ಭಾಗವಹಿಸಿದ್ದರು.

ಹೆಚ್.ಆರ್. ನವೀನ್‌ಕುಮಾರ್



ನ.25ರಂದು 'ನವದೆಹಲಿ ಚಲೋ' : ಜಂತರ್‌ಮಂತರ್‌ನಲ್ಲಿ ಪ್ರತಿಭಟನೆ

ಟನ್ ಕಬ್ಬಿಗೆ ರೂ.3,500 ದರ ನಿಗದಿಗೆ ಆಗ್ರಹ

'ಟನ್ ಕಬ್ಬು ಬೆಳೆಯಲು ರೂ.3,100 ಖರ್ಚು ತಗಲುತ್ತಿದೆ. ಆದ್ದರಿಂದ ಟನ್ ಕಬ್ಬಿಗೆ ಕನಿಷ್ಟ ರೂ.3,500 ರದ ನಿಗದಿಒಪಡಿಸಬೇಕು ಎಂದು ಒತ್ತಾಯಿಸಿ ನವೆಂಬರ್ 25ರಂದು ನವದೆಹಲಿ ಚಲೋ ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ' ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಮಾರುತಿ ಮಾನ್ಪಡೆ ಹೇಳಿದರು.

ಕಲಬುರಗಿ ನಗರದ ಕನ್ನಡ ಭವನದಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಅಕ್ಟೋಬರ್ 13ರ ಗುರುವಾರದಂದು ಏರ್ಪಡಿಸಿದ್ದ 'ಕಬ್ಬು ಬೆಳೆಗಾರರ ಸಮಸ್ಯೆಗಳು ಮತ್ತು ಪರಿಹಾರ ಮಾರ್ಗಗಳು' ಕುರಿತು ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಸಕ್ಕರೆ ಬೆಲೆ ಹೆಚ್ಚಾಗಿದ್ದರೂ ಟನ್ ಕಬ್ಬಿಗೆ ಗರಿಷ್ಠ ರೂ.2,950 ಮತ್ತು ನಿಷ್ಠ ರೂ.2,300 ನೀಡಲಾಗುತ್ತಿದೆ. ಟನ್ ಕಬ್ಬಿಗೆ ಶೇ. 11 ರಿಂದ 12 ಇಳುವಳಿ ಇದ್ದರೆ ಮಾತ್ರ ಉತ್ತಮ ದರ ನೀಡಲು ಸಾಧ್ಯ ಎಂದು ಕಾರ್ಖಾನೆಗಳು ವಾದಿಸುತ್ತಿವೆ. ಈಗಿನ ಮಾರುಕಟ್ಟೆಯ ಪ್ರಕಾರ ಟನ್ ಕಬ್ಬಿಗೆ ರೂ.4,550 ದರ ನೀಡಬೇಕು. ಇದು ಸಾಧ್ಯವಾಗದಿದ್ದಲ್ಲಿ ಕಡೇ ಪಕ್ಷ ರೂ.3,500 ದರ ನಿಗದಿ ಮಾಡಬೇಕು ಎಂದು ಕೇಮದ್ರ ಸರ್ಕಾರವನ್ನು ಒತ್ತಾಯಿಸಲಾಗುವುದು. ಅಲ್ಲದೆ ಸಕ್ಕರೆ ಆಮದು ಮಾಡಿಕೊಳ್ಳುವುದನ್ನು ಕೈಬಿಡುವಂತೆ ಮನವಿ ಮಾಡಲಾಗುವುದು' ಎಂದು ತಿಳಿಸಿದರು.

'ಯುಪಿಎ ಸರ್ಕಾರ ಡಾ.ರಂಗರಾಜನ್ ಸಮಿತಿ ವರದಿಯ ಶಿಫಾರಸನ್ನು ಅನುಷ್ಠಾನಗೊಳಿಸಿದ್ದರಿಂದ ಕಬ್ಬು ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಗಂಗರಾಜನ್ ಸಮಿತಿಯ ವರದಿಯನ್ನು ಕೈಬಿಡುವಂತೆ ಹೈದರಾಬಾದ್‌ನಲ್ಲಿ ಈಚೆಗೆ ನಡೆದ 13 ರಾಜ್ಯಗಳ ಕಬ್ಬು ಬೆಳೆಗಾರರ ಪ್ರತಿನಿಧಿಗಳ ಸಭೆಯಲ್ಲಿ ತೀರ್ಮಾನಿಸಿಲಾಗಿದ್ದು, ಆ ಸಭೆಯ ನಿರ್ಣಯಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು. ಅದರ ಜತೆಗೆ ಡಾ.ಸ್ವಾಮಿನಾಥನ್ ವರದಿಯ ಶಿಫಾರಸುಗಳನ್ನು ಅನುಷ್ಠಾನಗೊಳಿಸುವಂತೆ ಒತ್ತಾಯಿಸಲಾಗುವುದು' ಎಂದರು.

'ಕೃಷಿಯಲ್ಲಿ ಶೇ.100 ಬಂಡವಾಳ ಹೂಡಿಕೆಗೆ ಅನುಮತಿ ನೀಡುವುದು ಸರಿಯಲ್ಲ. ಆಂಧ್ರಪ್ರದೇಶದಲ್ಲಿ ಟೊಯೊಟಾ ಕಂಪನಿಗೆ ಸಕ್ಕರೆ ಕಾರ್ಖಾನೆ ಆರಂಭಿಸಲು ಅನುಮತಿ ನೀಡಲಾಗಿದ್ದು, ಪ್ರತಿ ನಿತ್ಯ 30 ಸಾವಿರ ಕ್ವಿಂಟಲ್ ಸಕ್ಕರೆ ಉತ್ಪಾದನೆ ಮಾಡಲು ಅದು ಮುಂದಾಗಿದೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ದೇಶದ ಸಕ್ಕರೆ ಕಾರ್ಖಾನೆಗಳನ್ನು ಮುಚ್ಚಬೇಕಾಗುತ್ತದೆ' ಎಂದು ಆತಂಕ ವ್ಯಕ್ತಪಡಿಸಿದರು.

ಬೀದರ್, ಕಲಬುರ್ಗಿ, ಯಾದಗಿರಿ ಮತ್ತು ವಿಜಯಪುರದಲ್ಲಿರುವ 13 ಸಕ್ಕರೆ ಕಾರ್ಖಾನೆಗಳು 2013–14ನೇ ಸಾಲಿನಿಂದ ಪ್ರತಿ ಟನ್ ಕಬ್ಬಿಗೆ ರೂ.300ರಂತೆ ರೂ.15 ಕೋಟಿ ಬಾಕಿ ಉಳಿಸಿಕೊಂಡಿವೆ.

ಈ ಹಣವನ್ನು ಕೂಡಲೇ ಬಿಡುಗಡೆ ಮಾಡಿಸುವಂತೆ ಸಹಕಾರ ಸಚಿವರಿಗೆ ಮನವಿ ಸಲ್ಲಿಸಲಾಗುವುದು ಎಂದು ಅವರು ಹೇಳಿದರು.

ವಿಜಯಪುರದ ಅಣ್ಣಾರಾಯ ಮೋರಟಗಿ ಅಧ್ಯಕ್ಷತೆ ವಹಿಸಿದ್ದರು. ಮಂಡ್ಯದ ಭರತರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು. ರೈತ ಮುಖಂಡರಾದ ರಾಜಕುಮಾರ ಹಳ್ಳಿಖೇಡ, ವೀರಣ್ಣ ಕಡಗಂಚಿ, ಗೌರಮ್ಮ ಪಾಟೀಲ, ಶರಣಬಸಪ್ಪ ಮಮಶೆಟ್ಟಿ ಇದ್ದರು.



JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**